ಶೂದ್ರ

ಬೆಲೆ: 3.00

ಈ ಸಂಚಿಕೆಯಲ್ಲಿ :

ಪ್ರೋಲಂಕಿ ರಾಮಮೂರ್ತಿ – ಬರ್ಟ್ರಾಂಡ್ ರಸಲ್ – ಎ. ಆರ್. ನಾಗಭೂಷಣ
ಕುಂ. ವೀರಭದ್ರಪ್ಪ – ಚಂದ್ರಶೇಖರತಾಳ್ಯ – ಹೆಚ್. ಪ್ರೇಮಲೀಲಾ – ಜಿ. ವಿ.
ಆನಂದಮೂರ್ತಿ – ಸ. ರಘುನಾಥ – ಎಲ್ಸಿ. ನಾಗರಾಜು – ಕೃಷ್ಣಮೂರ್ತಿ ಹನೂರು
ವೀಚಿ – ಕೆ. ಬಿ. ಸಿದ್ದಯ್ಯ – ಕನಸಿಗೊಂದು ಕಣ್ಣು – **ಅರವತ್ತರ ಚನ್ನವೀರಕಣವಿ.**

ನಾನಿಲ್ಲಿ ಪ್ರತಿಷ್ಠೆ, ಪ್ರಸಂಗಗಳ ಮಾತೆತ್ತಿದೆ. ಹೌದು, ಎಲ್ಲಿಯವರೆಗೆ ಬರಹಗಾರನಿಗೆ ಪ್ರತಿಷ್ಠೆ, ಪ್ರಸಂಗಗಳಿರುತ್ತವೋ ಅಲ್ಲಿಯವರೆಗೆ ಅವನ ಬರೆತ ಬರವಣಿಗೆಯಾಗುವುದಿಲ್ಲ, ಕೊರೆತವಾಗುತ್ತದೆ. ಅದಕ್ಕೇ ಕೀಟ್ಸ್ ಹೇಳುವಂತೆ A poet is a most unpoetical of creatures, ಯಾಕೆಂದರೆ ಅವನಿಗೆ ಯಾವ identity ಇರುವುದಿಲ್ಲ, ಅಂದರೆ 'ಕವಿ ಅತ್ಯಂತ ಅಕವಿಯಾದವನ, ಅವನಿಗೆ ಯಾವ 'ವೈಯಕ್ತಿಕತೆ' ಇರುವುದಿಲ್ಲವೆನ್ನುವ ಮಾತು ಸತ್ಯವಾದದ್ದು. ಕೀಟ್ಸ್ ಹೇಳುವಂತೇನೆ, ಷೇಕ್ಸ್‌ಪಿಯರಿಗೆ ಯಾವ ವ್ಯಕ್ತಿತ್ವವಿದೆ ? – ಅವನು ಲಿಯರ್ರೇ, ಇಯಾಗೋವೇ ?, ಕಾರ್ಡೀಲಿಯಾನೇ ?

ಇಲ್ಲಿ ನಾನೀಪೊಂದು ಮೊದಲ ಮಾತಿನಿಂದ ಒಂದು ಬರೆಸಿಕೊಂಡ ಕತೆಯನ್ನು ಕುರಿತು ಮಾತನಾಡುತ್ತಿದ್ದೇನೆ. ಅದು ಯಾವುದೆಂದರೆ ಸಾರಾ ಅಬೂಬಕ್ಕರ್‌ರ **ಸಹನಾ** ಕಾದಂಬರಿ.

ಸಹನಾ ಕತೆ ಬರೆಸಿಕೊಂಡ ಕತೆ. ಅದಕ್ಕೇ ಅದು ಹೆಣ್ಣು ಬರೆದ ಹೆಣ್ಣಿನ ಕತೆಯಲ್ಲ ; ಮುಸ್ಲಿಮಳು ಬರೆದ ಮುಸ್ಲಿಮ ಕತೆಯಲ್ಲ.

ಸಹನಾದಲ್ಲಿ ಹೆಂಡತಿಯಾದವಳು ಸವತಿಯಾಗುತ್ತಾಳೆ. **ಮರಳಿ ಮಣ್ಣಿಗೆ** ಯಲ್ಲಿ ಹೆಂಡತಿಯಾದವಳು ಸವತಿಯಾಗುವಂತೆ. **ಒಡಲಾಳ**ದಲ್ಲಿ ಹೆಂಡತಿಯಾಗಿದ್ದವಳು ಸವತಿಯನ್ನು ಸಹಿಸಿಕೊಂಡಂತೆ. **ಮೂಗಿ**ಯಲ್ಲಿ ಹೆಂಡತಿಯಾದವಳು ಸವತಿಯಾಗುವಂತೆ. ಆದ್ದರಿಂದ ಇದು ಬ್ರಾಹ್ಮಣ, ದಲಿತ, ಮುಸ್ಲಿಮರನ್ನು ಮೀರಿದ, ಗಂಡು ಹೆಣ್ಣುಗಳ ಭೇದವನ್ನು ಮಿಂಚಿದ, ಜೀವ ಜೀವಿಗಳ ಜೀವನ ವಿಶೇಷ. ಹಾಗಾಗಿ **ಸಹನಾ** ಬರೆದ ಕತೆಯಲ್ಲ ಬರೆಸಿಕೊಂಡ ಕತೆ.

ಸಹನಾ ಬರೆಸಿಕೊಂಡ ಕತೆ, ಬರೆದ ಕತೆಯಲ್ಲವೆನ್ನುವುದಕ್ಕೆ ಸಾಕ್ಷಿ, ಈ ಕತೆಯ ಹೆಸರು. ಇದಕ್ಕೆ ಹೆಸರಿಟ್ಟವರು ಲಂಕೇಶರು : ಆ ಹೆಸರನ್ನು ಅನುಮೋದಿಸಿದವರು ಸಾರಾ ಅಬೂಬಕ್ಕರ್.

ಕೆಲವೊಮ್ಮೆ ಹುಟ್ಟಿಸಿದ ತಂದೆತಾಯಿ ಹೆಸರಿಡದೆ ಆಗಂತುಕರು ಹೆಸರಿಟ್ಟು ಆ ಕೂಸಿಗೆ ವಂಚನೆ ಮಾಡುತ್ತಾರೆ. ಲಾರೆನ್ಸಿನ Tenderness, ಒಲವು, ಎನ್ನುವ

ಶೂದ್ರ

ಕತೆಗೆ **ಲೇಡಿ ಚಾಟೆರ್ಲೀಸ್ ಲವರ್** ಎನ್ನುವ ರಂಜಕ ಹೆಸರನ್ನೂ ಎಲಿಯಟ್ಟಿನ ಗಂಭೀರ ನಾಟಕಕ್ಕೆ **ಮರ್ಡರ್ ಇನ್ ದಿ ಕೆಥೇಡ್ರಲ್** ಎನ್ನುವ ರೋಚಕ ಹೆಸರನ್ನೂ ಅಗಂತುಕ ಮಹಾಶಯರು ದಯಪಾಲಿಸಿ ಆ ಕೃತಿಗಳಿಗೆ ತಿಳಿಯದೇ ಅಪಚಾರ ಮಾಡಿದ್ದಾರೆ.

ಸಹನಾ ಎನ್ನುವ ಹೆಸರು **ಮರಳಿ ಮಣ್ಣಿಗೆಗೆ, ಮಾಗಿಗೆ** ಇಟ್ಟಿದ್ದರೆ ಆದರಲ್ಲಿ ಹೆಚ್ಚು ಸಮಂಜಸತೆ ಇರುತ್ತಿತ್ತು. ಆದರೆ ಈ ಕತೆಗೆ ಆ ಹೆಸರು ಕತೆಯನ್ನು ಲೇವಡಿ ಮಾಡುತ್ತದೆಯಾಗಲಿ, ಆದರ ಲಕ್ಷಣವನ್ನು ಹೇಳುವುದಿಲ್ಲ.

"ಕ್ಷಮಯಾ ಧರಿತ್ರಿ" ಎನ್ನುವ ಮಾತು, ಹೆಣ್ಣು ಭರಿಸಬೇಕು, ಸಹಿಸಬೇಕು, ನೋಯುತ್ತಾ ನೋವನ್ನು ನುಂಗಬೇಕು, ನೆಲದಂತೆ ಎಲ್ಲಾ ದಂಡ ದಬ್ಬಾಳಿಕೆಗಳನ್ನು ತಡೆದುಕೊಳ್ಳಬೇಕು ಎನ್ನುವ ಮಾತು ಕಾದಂಬರಿಯ ಅನೇಕ ಕಡೆಗಳಲ್ಲಿ ಬರುತ್ತದಾ ಆದರೂ, ಕತೆಯಲ್ಲಿನ ಕಥಾನಾಯಕಿ, ಸೀತೆ "ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ" ಎನ್ನುವಂತೆ ಕ್ಷಮಿಸುವ ಧರೆಯಂತೆ, **ಸಹನೆ**ಯಲ್ಲ: ತದ್ವಿರುದ್ಧವಾದ, ಗಂಡನಾದ ಶಿವನನ್ನು ಮೆಟ್ಟಿನಿಂತ ಪಾರ್ವತಿಯಂತೆ **ಶಕ್ತಿ**. ಆದ್ದರಿಂದ ಈ ಕತೆ ಬರೆಸಿಕೊಂಡ ಅಸಲೀ ಕತೆ: ಅದರ ಅಸಲೀ ಹೆಸರು **ಶಕ್ತಿ** ಇರಬಹುದಾಗಿತ್ತೇನೋ, ಆದರೆ **ಸಹನಾ** ಮಾತ್ರ ಖಂಡಿತಾ ನಕಲೀ ಹೆಸರೇ, **ಶಕ್ತಿ**ಯ ಲೇವಡಿಯೇ ಆಗಿದೆ.

ಮುಖ್ಯನಾಗಿ ಕತೆಯ ಪ್ರಜ್ಞೆ, ಪ್ರತಿಮೆ, ಪರಿಸರ, ಎಲ್ಲಾ ಮುಖ್ಯವಾಗಿ ಪ್ರಕೃತಿಯೆಂದೇ ಹೇಳಬೇಕು. ಈ ಕತೆಯ ಹೆಣ್ಣು ಪ್ರಕೃತಿಯ ಪರಿಸರದಲ್ಲಿ ಹುಟ್ಟಿದ, ಪ್ರಕೃತಿಯ ಕೊಡಗೂಸಾದ, ಪ್ರಕೃತಿಯ ವ್ಯಾಪಾರಗಳಲ್ಲಿ ವ್ಯವಹರಿಸುವ, ಸಾಂತ್ವನ, ಸಾಫಲ್ಯಗಳನ್ನು ಪಡೆಯುವ ಮಣ್ಣಿನ ಮಗಳು, ಕಾಡಿನ ಕನ್ಯೆ:

"ಆನೆ ಅದರ ಸೊಂಡಿಲಲ್ಲಿ ಮನುಷ್ಯರನ್ನೆತ್ತಿಕೊಂಡು ನೆಲಕ್ಕೆ ಅಪ್ಪಳಿಸಿಬಿಡುತ್ತದಂತೆ. ಆನೆ ನಿನ್ನನೇನೂ ಮಾಡಲಿಲ್ಲವೆ?" ಎಂದು ಪ್ರಶ್ನೆ ಹಾಕುವಳು.

ಮಾವ ತಂದ ನೆಲ್ಲಿಕಾಯಿ ತಿನ್ನುತ್ತಾ, ಮಾವನ ಬಾಯಿಂದ ಕಾಡಿನ ಹುಲಿ ಸಿಂಹಗಳ ಕತೆ ಕೇಳುತ್ತಾ ಸಂತೋಷದಿಂದ ಆಕೆ ಮೈಮರೆಯುವಳು,

(ಪು. 9)

ಆದರೆ ಒಂದೇ ಕಡೆ ಕುಳಿತು ತಲೆತಗ್ಗಿಸಿ ಬೀಡಿ ಕಟ್ಟುವುದು ಇನ್ನೂ 10 ವರ್ಷ ತುಂಬದ ಹುಡುಗಿಗೆ ಪ್ರಯಾಸವಾಗುತ್ತಿತ್ತು. ಅವಳು ಕೆಲವೊಮ್ಮೆ ಕುಳಿತಲ್ಲಿಂದ ಎದ್ದು ನದಿ ತೀರಕ್ಕೆ ಓಡುವಳು. ನದಿಗೆ ಬಾಗಿದ್ದ ಮರದ ಗೆಲ್ಲಿನಲ್ಲಿ ಕುಳಿತು ನೀರಿನಲ್ಲಿ ಕಾಲನ್ನು ಇಳಿಬಿಡುವಳು. ಕೆಲವೊಮ್ಮೆ ನದಿಯ ಕಲ್ಲಿಗೆ ಅಂಟಿಕೊಂಡಿದ್ದ ಚಿಪ್ಪನ್ನು ಕತ್ತಿಯಿಂದ ಕೆತ್ತಿ ತೆಗೆದು ಅದನ್ನು ಮನೆಗೆ ತಂದು ಬೇಯಿಸಿ ಅದರೊಳಗಿನ ಮಾಂಸ ವನ್ನು ಬೇರ್ಪಡಿಸಿ ಸಾರನ್ನೋ ಪಲ್ಯವನ್ನೋ ತನಗೆ ತಿಳಿದ ರೀತಿಯಲ್ಲಿ ಮಾಡುವಳು. ಒಮ್ಮೊಮ್ಮೆ ಗೆಳತಿ ಸರೋಜಳನ್ನೂ ಕರೆದುಕೊಂಡು ನೀರಿಗೆ ಇಳಿದು ನೀರಿನಿಂದ ಇಬ್ಬರೂ ಸೇರಿ ಮರುವಾಯಿಯೆಂಬ ಚಿಪ್ಪಿನ ಮೀನನ್ನು ತೆಗೆಯುವರು. ಮನೆಗೆ ತಂದು ಚಿಪ್ಪಿನಿಂದ ಮಾಂಸವನ್ನು ಬೇರ್ಪಡಿಸಿ ಅದರ ಸಾರು ಮಾಡುವರು.?

ಬೇಸಿಗೆ ಕಾಲದಲ್ಲಿ ಇಬ್ಬರೂ ಹತ್ತಿರದಲ್ಲಿದ್ದ ಗುಡ್ಡೆಯ ಕಡೆಗೆ ಓಡುವರು, ಅಲ್ಲಿದ್ದ ಗೇರುಬೀಜ, ಮಾವಿನಕಾಯಿಗಳನ್ನು ಕಿತ್ತು ತಿನ್ನುವರು. ಗೇರು ಹಣ್ಣುಗಳನ್ನು ಮನೆಗೆ ತಂದು ಕೊಯ್ದು ಉಪ್ಪು ಹಾಕಿ ತಿನ್ನುವರು. ಇನ್ನೇನಾದರೂ ಕಾಯಿ, ಹಣ್ಣುಗಳಿವೆಯೇ ಎಂದು ಗುಡ್ಡೆಯ ಮೇಲೆಲ್ಲ ತಿರುಗಾಡುವರು, ಸರೋಜ ಬಾರದೇ ಹೋದರೆ ಅವಳೊಬ್ಬಳೇ ತಿರುಗಾಡುವಳು. ಹೀಗೆ ಮೊದಲೆಲ್ಲ ಅವಳು ಬೀಡಿ ಕಟ್ಟು ವುದರಲ್ಲಿ ಆಸಕ್ತಿ ತಳೆಯಲೇ ಇಲ್ಲ. (ಪು. 11-12)

ನಸೀಮ ಕಾಳಿದಾಸನ ಶಕುಂತಲೆಯಂತೆ, ವರ್ಡ್ಸ್‌ವರ್ತ್‌ನ ಲೂಸಿಯಂತೆ, ಪ್ರಕೃತಿಯ ಸೌಮ್ಯ (mild)ತೆಯುಷ್ಟೇ ಅಲ್ಲ; ಅವಳು ಹಾಥರ್ನಿನ **ದಿ ಸ್ಕಾರ್ಲೆಟ್ ಲೆಟರ್** ಕತೆಯ ಕಥಾನಾಯಕಿಯ ಮಗಳಾದ ಪರ್ಲ್‌ನಂತಹ ರೌದ್ರ(wild)ತೆಯ ವಳೂ ಕೂಡಾ. ನಸೀಮಳು ಕೇಳುವ ಕತೆ 'ಹುಲಿಸಿಂಹ', 'ಆನೆ ಮೊಸಳೆ'ಗಳದ್ದು; ಅವಳು ತಿನ್ನುವ ತಿನಿಸು ಬೆಟ್ಟದ ನಲ್ಲಿಕಾಯಿ, 'ಗುಡ್ಡದ ಗೇರುಬೀಜ, ಗೇರು ಹಣ್ಣು', ನದಿಯಲ್ಲಿ ಕಲ್ಲಿಗೆ ಅಂಟಿಕೊಂಡಿದ್ದ ಚಿಪ್ಪನ್ನು ಕತ್ತಿಯಿಂದ ಕೆತ್ತಿ ತೆಗೆದು ಅದರಲ್ಲಿರುವ ಮಾಂಸ; ಅವಳ ಆಟಪಾಠ, 'ನದೀತೀರಕ್ಕೆ, ಓಡುವುದು.' 'ಮರದಗೆಲ್ಲಿನಲ್ಲಿ ಕುಳಿತು ನದಿಯ ನೀರಿನಲ್ಲಿ ಕಾಲನ್ನು ಇಳಿ ಬಿಡುವುದು', ಸರೋಜ ಬರದಿದ್ದರೆ, ಒಬ್ಬಳೇ ಕಾಡುಮೇಡು 'ತಿರುಗಾಡು'ವುದು ಹೀಗೆ ನಸೀಮ 'ಶಕುಂತಲೆ'ಗಿಂತಲೂ 'ಶಕ್ತಿ' ಹೆಚ್ಚು.

ಅಂದ ಮಾತ್ರಕ್ಕೆ ನಸೀಮಳು ಶಕುಂತಲೆ, ಲ್ಯೂಸಿಯರಂತೆ ಒಲವು ತಾಯ್ತನಗಳಲ್ಲಿ ಕಡಿಮೆಯಂತಲ್ಲ. ಮಗುವಾಗಿದ್ದ ಅವಳ ಮೊದಲ ಸಹಜ ಸ್ಪಂದನ, ಗೊಂಬೆಯಾಟ,

ಗೊಂಬೆ ಮದುವೆ ಮಾಡುವುದು, ಆಡು ಸಾಕುವುದು, ಹಕ್ಕಿಗಳ ಕೂಗು ಆಲಿಸುವುದು, ಹೂ ಹಣ್ಣು ಕೀಳುವುದು. ಅವಳು ಒಮ್ಮೆ ಬೊಂಬೆಯನ್ನು ಆಶಿಸಿ ತಾಯಿಯಿಂದ ಹೊಡೆತ ತಿನ್ನುತ್ತಾಳೆ:

ಅವಳಿಗೆ ಬೊಂಬೆಯಾಟವೆಂದರೆ ತುಂಬಾ ಇಷ್ಟ. ಒಂದೆರಡು ವರ್ಷಗಳ ಕೆಳಗೊಮ್ಮೆ ಅವಳು ತನ್ನ ತಾಯಿಯ ಜೊತೆಯಲ್ಲಿ ಯಾವುದೋ ಒಂದು ಮನೆಗೆ ಹೋಗಿದ್ದಳು. ಆ ಮನೆಯಲ್ಲೊಂದು ಹುಡುಗಿ ಸುಂದರವಾಗಿ ಬೊಂಬೆಗಳನ್ನಿಟ್ಟು ಕೊಂಡು ಆಡುತ್ತಿದ್ದಳು. ನಸೀಮಳಿಗೆ ತನಗೂ ಅಂತಹದೊಂದು ಬೊಂಬೆ ಬೇಕೆಂದು ತುಂಬಾ ಆಸೆಯಯಿತ್ತು. ಆ ಹುಡುಗಿ ಆಡುವುದನ್ನೇ ಆಸೆ ತುಂಬಿದ ಕಣ್ಣುಗಳಿಂದ ನೋಡುತ್ತಾ ನಿಂತಿದ್ದಳು. ಮನೆಗೆ ಬಂದ ಬಳಿಕ ತನ್ನ ತಾಯಿಯೊಡನೆ, ತನಗೂ ಅಂತಹದೊಂದು ಬೊಂಬೆ ಬೇಕೆಂದು ಹೇಳಿ ಅಳತೊಡಗಿದಳು.

''ನಾವೆಲ್ಲಿಂದ ಬೊಂಬೆ ತರೋಣ? ಅದೂ ಅಲ್ಲದೆ ಇಷ್ಟು ದೊಡ್ಡ ಹುಡಗಿ ಬೊಂಬೆಯನ್ನಿಟ್ಟುಕೊಂಡು ಆಡತೊಡಗಿದರೆ ಎಲ್ಲರೂ ನಿನ್ನನ್ನು ತಮಾಷೆ ಮಾಡು ತ್ತಾರೆ'' ಎಂದು ಏನೇನೋ ಹೇಳಿ ಸಕೀನ ಮಗಳನ್ನು ಸಂತೈಸಲು ಯತ್ನಿಸಿದಳು. ಊಹು, ನಸೀಮಳಿಗೆ ಅಂತಹದೊಂದು ಬೊಂಬೆ ಬೇಕೇಬೇಕು. ಅವಳ ಅಳು ಇನ್ನೂ ಜೋರಾಯಿತು. ತಾಯಿ ಬಂದು ಮಗಳ ಬೆನ್ನಿಗೆ ಎರಡು ಗುದ್ದು ಕೊಟ್ಟಳು.

''ಹೇಳಿದರೆ ಅರ್ಥವಾಗುವುದಿಲ್ಲ. ಕೋಣನ ಹಾಗೆ ಬೆಳೆದಿದೆ. ಅಲ್ಲ ಈಗ ಅಷ್ಟು ಹಣ ಕೊಟ್ಟು ಬೊಂಬೆ ತರಬೇಕೆ? ಹೊಟ್ಟೆ ತುಂಬಊಟ ಮಾಡಿದ ಮೇಲಲ್ಲವೆ ಬೊಂಬೆ ತರುವುದು?'' ಎನ್ನುತ್ತಾ ಮೂಲೆಯಿಂದ ಪೊರಕೆ ಎತ್ತಿಕೊಂಡಳು. ನೆರೆ ಮನೆಯ ಪಾತಮ್ಮಜ್ಜಿ ಎಲ್ಲವನ್ನೂ ನೋಡುತ್ತಾ ನಿಂತಿದ್ದಳು. ''ಮಗೂ, ನಿನಗೆ ಬೇಡದ್ದು ಕೈಯೋ ಕಾಲೋ ಮುರಿದ ಒಂದು ಬೊಂಬೆಯಿದ್ದರೆ ಕೊಡು. ಆ ನನ್ನ ಹುಡುಗಿ ಒಂದು ಬೊಂಬೆಗಾಗಿ ರಾತ್ರಿಯೆಲ್ಲ ಅಳುತ್ತಿದ್ದಳು. ಸಿಟ್ಟಿನಿಂದ ಚೆನ್ನಾಗಿ ಬಾರಿಸಿಬಿಟ್ಟೆ'' ಎಂದಳು.

ಆ ರಟ್ಟಿನ ಪೆಟ್ಟಿಗೆ ಅವಳ ಈಗ ಬಂಡಾರವಾಗಿತ್ತು. ಅದರಲ್ಲಿ ಬೊಂಬೆಯಲ್ಲದೆ ಬಣ್ಣಬಣ್ಣದ ಗಾಜಿನ ಬಳೆಯ ಚೂರುಗಳು, ಒಣಗಿದ ಸುರುಗಿ ಹೂವಿನ ಮಾಲೆ.

ಒಣಗಿದ ಗೊಂಡೆ ಹೂವು (ಮುಂದಿನ ಮಳೆಗಾಲದಲ್ಲಿ ಬೀಜ ಬಿತ್ತುವುದಕ್ಕೆ) ಕಳೆದ ಸಲ ಮಣಿಸರಕಿನವನು ಬಂದಾಗ ತಾಯಿಯನ್ನು ಕಾಡಿಸಿ ಅವನಿಂದ ಕೊಂಡುಕೊಂಡ ಮಣಿ ಸರ, ಹಳೆಯ ಖಾಲಿ ಸೆಂಟು ಬಾಟಲು, ಅಲ್ಲಲ್ಲಿ ಹಲ್ಲು ಮುರಿದ ಬಾಚಣಿಗೆ, ದರ್ಜಿಯ ಬಳಿಯಿಂದ ಹೆಕ್ಕಿಕೊಂಡು ಬಂದ ಬಣ್ಣಬಣ್ಣದ ಬಟ್ಟೆಯ ಚೂರುಗಳು, ಇಂತಹುದೇ ಇನ್ನೂ ಏನೇನೋ ಸಾಮಾನುಗಳನ್ನು ಶೇಖರಿಸಿಟ್ಟಿದ್ದಳು. ಎಂದಾದರೊಮ್ಮೆ ಬೀಡಿ ಕಟ್ಟಿ ದಣಿದು ತೀರ ಬೇಸರವಾದಾಗ ಅವಳು ತನ್ನ ಮನೆಯ ಜಗುಲಿಯಲ್ಲಿ ಕುಳಿತು ಈ ರಟ್ಟಿನ ಪೆಟ್ಟಿಗೆ ತೆರೆದಿಟ್ಟು ತನ್ನ ಬೊಂಬೆಯೊಡನೆ ಒಬ್ಬಳೇ ಆಡುವಳು. (ಪು. 14)

ಈ ಚಿಕ್ಕ ಹುಡುಗಿಗೆ ಮನಸ್ಸಿನಲ್ಲಿ ಹೆಚ್ಚಿನ ಅಸೆ ಆಕಾಂಕ್ಷೆಗಳೇನೂ ಇಲ್ಲ. ಬರೇ ಮೂರು ಆಸೆಗಳಿವೆ. ಮೊದಲನೇಯದೇನೆಂದರೆ ತಾನು ಒಮ್ಮೆ ದೂರದಿಂದ ಕಂಡ ರೈಲುಗಾಡಿಯಲ್ಲಿ ಕುಳಿತು ಪ್ರಯಾಣ ಮಾಡಿ ಮಂಗಳೂರಿನ ಹತ್ತಿರದ ಉಳ್ಳಾಲದ ಸೈಯದ್ ಮದನಿಯವರ ದರ್ಗಕ್ಕೆ ಹೋಗಬೇಕು. ತಾನು ಶಾಲೆಗೆ ಹೋಗುತ್ತಿದ್ದಾಗ ತನ್ನ ಗೆಳತಿಯರಲ್ಲಿ ಕೆಲವರು ಅಲ್ಲಿಗೆ ಹೋಗಿಬಂದು ತಮ್ಮ ಅನುಭವಗಳನ್ನು ವಿವರಿಸಿದಾಗ ಆಕೆಯ ಮನದಲ್ಲಿ ಚಿಗುರೊಡೆದ ಆಸೆಯದು. ಎರಡನೆಯದು ತಾವೊಂದು ಅಡನ್ನು ಸಾಕಬೇಕು. ಆದರ ಹಾಲನ್ನು ತಾನೆ ಕರೆಯಬೇಕು. ಆದರ ಮರಿಗಳ ಕತ್ತಿಗೆ ಪುಟ್ಟ ಗಂಟೆಗಳನ್ನು ಕಟ್ಟಿ, ಅವು ಅಂಗಳದ ತುಂಬ, ಗಂಟೆಗಳ ಸದ್ದು ಮಾಡುತ್ತಾ ಓಡಾಡುವಾಗ ಕೇಳಲು ಎಷ್ಟು ಹಿತವಾಗಿರುತ್ತದೆ. ಮೂರನೇಯ ಆಸೆ ಯೇನೆಂದರೆ ತನಗೊಂದು ಕೆಂಪು ರೇಶ್ಮೆಯ ಜರಿಯ ಹೂವಿನ ಲಂಗ ಹೊಲಿಸಬೇಕು. . . ಆ ಅಯಿತು ಹಾಕುತ್ತಿದ್ದಳಲ್ಲ ಅಂತದ್ದು. (ಪು. 17)

ನಸೀಮಳ ಈ ಅಸೆಗಳೆಲ್ಲಾ ನೈಸರ್ಗಿಕವಾದ, ತಾಯ್ತನದ ಸಾಕು ಸಲಹುವಿಕೆಯ ಅಂದ ಚಂದಗಳ, ಸಿಂಗಾರ, ತೊಡಿಗೆಗಳ, ಹೊಸದನ್ನು ಅರಸುವ, ನೋಡುವ, ಅನುಭವಿಸುವ ಜೈವಿಕ ತುಯ್ತದವುಗಳು ಕ್ರಿಯಾತ್ಮಕ, ಸೃಜನಾತ್ಮಕ, ಸೌಂದರ್ಯಾನುಭೂತಿಯವು.

ಆದರೆ ಇಂತಹ ಹಾಡುವ ಕುಣಿಯುವ ಕಾಡು ಹಕ್ಕಿಗೆ, ರೆಕ್ಕೆ ಪುಕ್ಕಗಳ ಪುಟಾಣಿ ಪಕ್ಷಿಗೆ ಜೀವನದ ಸಂಕೋಲೆ ಬಿದ್ದುಬಿಡುತ್ತವೆ. ತೂಗುವ, ಗೆಲ್ಲುಹತ್ತಿ ಹರಿಯುವ ನದಿಯ ನೀರಿನಲ್ಲಿ ಕಾಲಾಡುವ ಹುಲ್ಲೆ, ಬೀಡಿ ಕಟ್ಟುವ ಯಾಂತ್ರಿಕ ಶ್ರಮಕ್ಕೆ ದೈನಂದಿನ ಜೀವನೋಪಾಯಕ್ಕೆ ಸಿಕ್ಕುಬಿಡುತ್ತಾಳೆ. ತನ್ನ ಗಂಡನಿಂದ ಉಪೇಕ್ಷಿತಳಾದ ತಾಯಿ ಸಕೀನ ತನ್ನ ಮಗಳಾದ ನಸೀಮಳಿಗಾಗಿಯೇ ಮನೆಗೆಲಸಗಳನ್ನೂ ಬೀಡಿ ಕಟ್ಟುವುದನ್ನೂ ಮಾಡುತ್ತಾ, ಮಗಳನ್ನು ಸಾಂಪ್ರದಾಯಿಕ ಖುರ್ ಆನುವಿದ್ಯಾಭ್ಯಾಸ ಮಾಡಿಸಿ,

ಶೂದ್ರ

ಅವಳನ್ನು ವಿದ್ಯಾವಂತಳನ್ನಾಗಿ ಮಾಡಿ ಕೊನೆಗೆ ಒಬ್ಬ ಲಾರಿ ಡ್ರೈವರಾದ ಪಾಷಾನಿಗೆ ತಾನು ಹೊಟ್ಟೆಬಟ್ಟೆ ಕಟ್ಟಿ ಕೂಡಿಟ್ಟ ಹಣವನ್ನೆಲ್ಲಾ ಖರ್ಚು ಮಾಡಿ ಮದುವೆ ಮಾಡುತ್ತಾಳೆ. ಪಾಷಾನಾದರೋ ಒರಟಾದ, ಒಲವಿನ ಮಾರ್ದವವನ್ನರಿಯದ ಗಡಸು ಮನುಷ್ಯ. ಅವನು ತನ್ನ ದಪ್ಪ ಮೀಸೆಗಳನ್ನು ಅವಳ ಕೋಮಲ ಮುಖಕ್ಕೆ ಉಜ್ಜುತ್ತಾ, ಅವಳ ನಯವಾದ ತೋಳನ್ನು ತನ್ನ ಲಾರಿಡ್ರೈವರ್ ಬಾಹುಗಳಲ್ಲಿ ಬಿಗಿಯುತ್ತಾ ಅವಳನ್ನ ಒಂದು ರೀತಿಯಲ್ಲೀ ರೇಪ್ ಮಾಡುತ್ತಾನೆ.

ಒರಟು ಕೈ ದೇಹವನ್ನು ಬರಸೆಳೆದು ಅಪ್ಪಿತು: ತುಟಿಕೆನ್ನೆಗಳ ಮೇಲೆ ಒರಟು ಮೀಸೆ ಓಡಾಡತೊಡಗಿತು. ಹೋರಾಡಲು ಶಕ್ತಿಯಿಲ್ಲದೆ ದೇಹ ನಿಶ್ಚೇಷ್ಟಿತವಾಯಿತು. ಕೋಣೆಯಿಲ್ಲಿ ಬಿದ್ದಿದ್ದ ಚಂದ್ರನ ಮಂದ ಪ್ರಕಾಶದಲ್ಲಿ ಹದ್ದಿನಂತೆ ತನ್ನ ಮೇಲೆರಗಿ ತನ್ನನ್ನು ಹಿಂಸಿಸುತ್ತಿದ್ದಾತನನ್ನು ಆಕೆ ಕಣ್ಣು ಬಿಟ್ಟು ಭಯದಿಂದ ನೋಡಿದಳು. ಕಣ್ಣೀರು ತಲೆದಿಂಬನ್ನು ತೋಯಿಸುತ್ತಿತ್ತು. ಮಂದ ಬೆಳಕಿನಲ್ಲಿ ಕೋಣೆಯಲ್ಲಿದ್ದ ಸಾಮಾನುಗಳು ಗಿರಗಿರನೆ ತಿರುಗುತ್ತಿದ್ದಂತೆ ಭಾಸವಾಯಿತು. ತಾನೆಲ್ಲೋ ಸಾಗರ ದಾಳದಲ್ಲಿ ಮುಳುಗುತ್ತಿರುವೆನೆನ್ನಿಸಿತು. (ಪು. 49)

ನಸೀಮಳಿಗೆ ಆದ ಮೊದಲ ರಾತ್ರಿಯ ಅನುಭವ ಬಹಳ ಸಾಂಕೇತಿಕವಾದದ್ದು:

"ಅಯ್ಯೋ ನನ್ನ ಕಿವಿ" ಆಕೆ ಮೆಲ್ಲಗೆ ಚೀರಿದಳು. ಈಗ ಆತನೂ ಎಚ್ಚೆತ್ತನು. ಆಕೆಯ ಕಿವಿಗಳಲ್ಲಿದ್ದ 10 ತೂತುಗಳಲ್ಲಿ 10 ಚಿನ್ನದ ಅಭರಣ ಅದೇ ದಿನ ತೊಡಿಸಿದ್ದರು. ಅದು ಆಗಲೇ ಆಕೆಗೆ ನೋವುಕೊಡಲು ಪ್ರಾರಂಬಿಸಿತ್ತು. ಆತನ ಅಪ್ಪುಗೆಯಲ್ಲಿ ಆತನ ಕೈ ಆಕೆಯ ಕಿವಿಗೆ ತಾಗಿದಾಗ ಆಕೆ ನೋವಿನಿಂದ ಚೀರಿಕೊಂಡಳು. (ಪು. 37)

ಸಕೀನ ದಿನ ರಾತ್ರಿ ಗೇದು ನಸೀಮಳ ಕಿವಿಯ ಐದೈದು ತೂತುಗಳಿಗೆ ಮದುವೆಗೆಂದೇ ಚಿನ್ನದ ಆಭರಣ ಮಾಡಿಸಿದ್ದಳಲ್ಲವೇ? ಈಗ ಆ ಮದುವೆಯ ಐದೈದು ತೂತುಗಳಿಂದಲೂ ಹತ್ತು ವೇದನೆ ಹೊರಡುತ್ತಿವೆ. ಮುಂದೆ ತನ್ನ ಗಂಡ ಕೆಲಸ ಕಳೆದುಕೊಂಡು ಮತ್ತೆ ಆ ಕೆಲಸಕ್ಕೆ 1000 ರೂಪಾಯಿ ಕೊಡಬೇಕಾದಾಗ ಆ ಹತ್ತು ತೂತುಗಳಲ್ಲಿ ತುಂಬಿದ್ದ ಚಿನ್ನದ ಅಭರಣ ಮಾರಬೇಕಾಗಿ ಬಂದು, ಅವಳ 10 ಕಿವಿ ತೂತುಗಳಿಗೆ ಕೆಂಪು ದಾರದ ನೇಣು ಬೀಳುತ್ತದೆ. ಯಾವ ಈ ಹತ್ತು ತೂತುಗಳನ್ನು ತಾಯಿ ಸಕೀನ ಮದುವೆಗೆಂದೇ ಕಿವಿಯನ್ನು ಚುಚ್ಚಿಸಿ ಮಾಡಿಸಿದ್ದಳೋ, ಆ 10

ತೂತುಗಳ ಚಿನ್ನ ತುಂಬಿಸಲು ತನ್ನ ಎಲುಬು ಮಾಂಸ ಸವೆಸಿದಳೋ, ಆ 10 ತೂತು ಮದುವೆಯಲ್ಲೂ, ಮದುವೆಯಾದ ಮೇಲೂ ನಸೀಮಳಿಗೆ ಕೊಡುವ 10 ಚಿತ್ರಹಿಂಸೆ ಗಳಾಗುತ್ತವೆ. ಆಮೇಲೆ ನಸೀಮಳೇ, ಸಾವಿನಿಂದ ಬದುಕಿ ಬಂದು, ಎರಡನೆಯ ಮದುವೆಯಾದ ಗಂಡಿನಿಂದ ಬೇರೆಯಾಗಿ, ತಾನೆ ತನ್ನ ಕಾಲ ಮೇಲೆ ನಿಂತು, ದುಡಿ ಯುತಾ, ಆ 10 ಕಿವಿಯ ತೂತುಗಳಿಗೆ ತನ್ನ ದುಡಿಮೆಯ ಬಂಗಾರದ ಆಭರಣ ತುಂಬಿ ದಾಗ ಅವಳಿಗಾದ ಆ ಸಾಫಲ್ಯದ ಆನಂದ, ಆ ಆಭರಣದ ತೃಪ್ತಿ ಸಂತೋಷ ಅನನ್ಯ ವಾದದ್ದು, ಆದ್ದರಿಂದಲೇ ಅವಳ ಗಂಡ ಪಾಷಾ, ತನ್ನ ಎರಡನೆಯ ಹೆಂಡತಿಗೆ ನಿಕಾ ಕೊಟ್ಟಿದ್ದೇನೆ, ಅವಳ ಎರಡು ಮಕ್ಕಳಿಗೆ ತಾಯಾಗು ಎಂದೂ, ನನಗೆ ಹೆಂಡತಿಯಾಗು ಎಂದು ಕೇಳಲು ಬಂದಾಗ, ಅವಳನ್ನು ಅಪ್ಪಲು ಹೋದಾಗ ಅವನನ್ನು ದೂಡಿ, ಛೀಮಾರಿ ಮಾಡಿ, ತನ್ನ ಸಂಪೂರ್ಣ ಸ್ವತಂತ್ರತೆಯಲ್ಲಿ ನಿಲ್ಲುತ್ತಾಳೆ. ತಾಯಿ ಸಕೀನ ದುಂಬಾಲು ಬಿದ್ದು ಪರಿಪರಿಯಾಗಿ ನಸೀಮಳಿಗೆ ಗಂಡನನ್ನು ಕ್ಷಮಿಸಿ ಅವನನ್ನು ಮತ್ತೆ ಕೂಡಲು ಕೇಳಿ ಕೊಂಡರೂ, ನಸೀಮ ತನ್ನ ಸ್ವಂತಿಕೆಯ ಸಾರ್ವಭೌಮತೆಯಲ್ಲಿ ತನ್ನ ಪೂರ್ಣ ಸ್ವಾತಂತ್ರ್ಯದ ಆತ್ಮಪ್ರತ್ಯದಲ್ಲಿ ಅದನ್ನು ಧಿಕ್ಕರಿಸುತ್ತಾಳೆ.

ನಸೀಮ ತನ್ನ ತವರಿನ ಗಾಳಿಬೆಳಕಿನ, ಗಿಡಮರ ಬಳ್ಳಿಗಳ, ಬೆಟ್ಟಗುಡ್ಡಗಳ, ನದಿ ನೀರಿನ ಪ್ರಕೃತಿಯ ಮಡಿಲಿಂದ ಅತ್ತೆಯ ಕೊಳಚೆ ಕಿಷ್ಕಿಂದಕ್ಕೆ ಹೋಗಿ, ಆ ಒರಟು ಗಂಡನ ಕೂದಲಿನ ಎದೆಯಲ್ಲಿ ತನ್ನ ಮುಖವಿಟ್ಟು, ಅವನ ಒರಟು ಬಾಹುಗಳ ತಬ್ಬಿನಲ್ಲೇ ತನನ್ನು ಒಪ್ಪಿಸಿಕೊಂಡು ದಾಂಪತ್ಯದ ಸಾಂತ್ವನವನ್ನು ಸವಿಯನ್ನು ಕಂಡುಕೊಂಡಿ ದ್ದಳಲ್ಲವೇ ?' ಅದರೆ ಅಂತಹ ಅವಳ ಬಲಿದಾನಕ್ಕೆ ಅವಳಲ್ಲಿರುವ ಅಂತರಿಕವಾದ ಒಲವಿನ ಚಿಲುಮೆಗೆ ಆ ಗಂಡ, ಆ ಗಂಡನ ರಾಕ್ಷಸಿ ತಾಯಿ ಅವಳಿಗೆ ಹಿಂಸೆ, ಶೋಷಣೆ, ಬೈಗುಳ ಗಳನ್ನಲ್ಲವೇ ಕೊಟ್ಟದ್ದು ? ತನ್ನ ಮೊದಲ ಮಗ ಹೆಣ್ಣೆಂದು ಮೂಗುಮುರಿದ ಅತ್ತೆ, ಗಂಡ, ಆಮೇಲೆ ಆ ಮುದ್ದು ಹೆಣ್ಣು ಮಗು, ತನ್ನ ಮುದ್ದಿನಿಂದಲೇ ಒರಟು ತಂದೆಯ ಹೃದಯವನ್ನು ಗೆದ್ದಿದ್ದ ಮಗು, ಆ ರಾಕ್ಷಸಿ ಅತ್ತೆಯ ಉಪೇಕ್ಷೆಯಿಂದಾಗಿ, ಔಷಧ ಪಡೆಯದೆ ಅಸುನೀಗಿತ್ತಲ್ಲವೇ ? ಆಮೇಲೆ ಅವಳಿಗಾದ ಎರಡನೇ ಮಗುವೂ ಹೆಣ್ಣಾ ಯಿತೆಂದು ಅವಳನ್ನು ಗಂಡ ಅತ್ತೆ ಇಬ್ಬರೂ ಹಳಿದಿದ್ದು, ಆ ಹೆಣ್ಣು ಮಗಳಿಗೆ ತನ್ನ ಗಂಡ "ಗುಲಾಮಿ" ಎಂದು ಹೆಸರಿಡು ಎಂದಿದ್ದನಲ್ಲವೇ ? ಮೂರನೇ ಮಗು ಗಂಡಾ ದಾಗ, ಆ ಗಂಡು ಮಗುವನ್ನು ಅತ್ತೆ ತಾನೆ ವಶಪಡಿಸಿಕೊಂಡು, ಎರಡನೇ ಹೆಣ್ಣು ಮಗುವಿಗೆ ಹಣ್ಣು ಹಂಪಲು ಕೊಡದೆ, ಅದನ್ನು ನೋಡಿಕೊಳ್ಳಲು ತಾಯಿಗೂ ಪುರಸತ್ತು ಕೊಡದೆ, ಅವಳ ತಾಯ್ತನಕ್ಕೆ ಕಲ್ಲು ಹಾಕಿದ್ದಳಲ್ಲವೇ ? ಆಮೇಲೆ, ಬೀಡಿ

ಶೂದ್ರ

ಕಟ್ಟುವ ಗೆಯ್ಮೆಯಲ್ಲಿ, ಆಹಾರವಿಲ್ಲದೆ, ಪೋಷಣೆ ಸಾಂತ್ವನಗಳಿಲ್ಲದೆ, ಆವಳು ಸೊರಗಿ ಚಾಯಿಲೆ ಬಿದ್ದು ರಕ್ತ ಕಕ್ಕುತ್ತಿರುವಾಗ ಗಂಡನೂ ಅತ್ತೆಯೂ ಸೇರಿ ಅವಳ ಮನೆಗೆ ಇನ್ನೊಂದು ಹೆಣ್ಣನ್ನು ನಿಕಾ ಮಾಡಿಕೊಂಡು, ಅವಳ ಎದುರಿನಲ್ಲೇ ಶೃಂಗಾರವಾಡಿದ ರಲ್ಲವೇ? ನಸೀಮ ಗಂಡನ ಕಾಲು ಹಿಡಿದು, ತಾನು ಸಾಯುವವರೆಗೆಯಾದರೂ ಇನ್ನೊಬ್ಬಳನ್ನು ತರಬೇಡಿ ಎಂದರೂ ಕೇಳದೆ, ಇನ್ನೊಬ್ಬಳನ್ನು ಮದುವೆಯಾಗಿ ಅವಳೆದುರಿನಲ್ಲೆ ಕೂಡಿದ ರಾಕ್ಷಸ ಅವಳ ಗಂಡನಲ್ಲವೇ?

ನಸೀಮಳನ್ನು 'ಕೊಂದ' ಒಂದೇ ಒಂದು ಘಟನೆ, ಹಾಗೂ ಅವಳನ್ನು ಆ ಮನೆ ಯಿಂದ ಬಿಡಿಸಿ ಅವಳಿಗೆ ಮತ್ತೆ ಜೀವಕೊಟ್ಟ, ಅವಳ ಪುನರ್ಜನ್ಮಕ್ಕೆ ಕಾರಣವಾದ ಈ ಘಟನೆ ಎಂಥಾ ಘೋರವಾದದ್ದು'.

ಮುಚ್ಚಿದ ಬಾಗಿಲಿನ ಹಿಂದಿನಿಂದ ಪಿಸುಮಾತು, ನಗು ಕಿವಿಗೆ ಬಿದ್ದಾಗ ಆಕೆಗೆ ಅಗ್ನಿಕುಂಡದಲ್ಲಿದ್ದಂತಹ ಅನುಭವವಾಗುತ್ತಿತ್ತು. ಭೂಮಿಯಂತೆ ಸಹನೆಯಿರ ಬೇಕು ಎಂದು ಆಗಾಗ ತಾಯಿಯನ್ನುತ್ತಿದ್ದ ನುಡಿ ನೆನಪಾಗುತ್ತಿತ್ತು. ಈ ವರೆಗೂ ಭೂಮಿಯಂತಹ ಸಹನೆಯನ್ನು ಆಕೆ ತೋರಿದ್ದಳು. ತನ್ನ ಒಂದೇ ಒಂದು ಚಿಕ್ಕ ಕೋರಿಕೆಯನ್ನೂ ತನ್ನ ಗಂಡ ಈವರೆಗೂ ಈಡೇರಿಸದೇ ಹೋಗಿದ್ದರೂ ಈಕೆ ಈವರೆಗೆ ಗಂಡ ಮತ್ತು ಅತ್ತೆಯೊಡನೆ ಮುನಿಸಿಕೊಂಡಿರಲಿಲ್ಲ; ಹೊಟ್ಟೆ ತುಂಬ ಊಟವಿಲ್ಲದೇ ಹೋಗಿದ್ದರೂ ತಾಯಿಯೊಡನೆ ದೂರು ಹೇಳಿರಲಿಲ್ಲ. ಈವರೆಗೂ ಎಲ್ಲವನ್ನೂ ಸಹಿಸಿಕೊಂಡೇ ಬಂದಿದ್ದಳು. ಕ್ಷಮಯಾಧರಿತ್ರೀ ಎಂಬ ಹೆಸರನ್ನು ಸಾರ್ಥಕ ಪಡಿಸಿಕೊಂಡಿದ್ದಳು. ಆದರೆ ಈಗ ಈ ಮುಚ್ಚಿದ ಬಾಗಿಲಿನ ಹಿಂದಿ ನಿಂದ ತೇಲಿ ಬರುತ್ತಿದ್ದ ಶಬ್ದ ಅವಳಿಗೆ ಭಯಂಕರ ಯಾತನೆಯನ್ನು ನೀಡು ತ್ತಿತ್ತು. ಇದನ್ನು ಸಹಿಸುವುದು ಸಾಧ್ಯವೇ ಇಲ್ಲ. ಏನು ಮಾಡಲಿ? ನಾನೇನು ಮಾಡಲಿ? ಆ ಸರ್ವಶಕ್ತನಾದರೂ ನನ್ನನ್ನು ಬೇಗ ಕರೆದುಕೊಂಡು ಹೋಗ ಲಾರನೇ ಎಂದು ಆಕೆ ಹಲುಬಿದಳು. ತನ್ನೆದೆಯ ಉರಿಯಲ್ಲಿ ತಾನೇ ಬೆಂದು ಹೋಗುವಂತಾಯಿತು. ಮಕ್ಕಳ ನೆನಪೂ ಇಲ್ಲದೆ ಮಲಗಿದಳು.

ನಸೀಮ ಆಸ್ಪತ್ರೆಗೆ ತಾಯಿಯಿಂದ ಸಾಗಿಸಲ್ಪಟ್ಟು ಅಲ್ಲಿ ತನ್ನ ಮಗಳಾದ, ತಾನೇ ಅವಳಿಗೆ ರೋಷಾನಾರಾ, ಅಂದರೆ ಜ್ಯೋತಿಯೆಂದು ಹೆಸರಿಟ್ಟ 'ರೋಸಿ'ಯನ್ನು, ಯಾವ ರೋಸಿ ತನ್ನನ್ನು ತಾನೆ 'ರೋಸಿ' ಎನ್ನುತ್ತಲೇ ಆ ಹೆಸರನ್ನು ಸಾರ್ಥಕ ಪಡಿಸು ತ್ತಿರುವಳೋ, ಅವಳನ್ನು ಬಿಟ್ಟು ಹೋಗುವುದು ಹೇಗೆ ಎಂದು ಚಿಂತಿಸಿ, ಅವಳಿಗಾಗಿ ತಾನು ಬದುಕಲೇ ಬೇಕು, ತನ್ನ ತಾಯಿ ತನಗಾಗಿ ಬದುಕಿದ್ದಂತೆ ಬದುಕಲೇ ಬೇಕೆಂದು,

ಬದುಕುತ್ತಾ ಸಾವನ್ನು ಗೆಲ್ಲುತ್ತಾಳೆ. ನಸೀಮ ಬದುಕಿ ತಾಯಿ ಸಕೀನಳ ಮನೆಗೆ ಹಿಂತಿರುಗುತ್ತಾಳೆ, ಮತ್ತೆ ಹೊಸ ಜೀವನವನ್ನು ಅರಂಭಿಸುತ್ತಾಳೆ: ಬೀಡಿ ಕಟ್ಟು ತ್ತಾಳೆ, ಅಂಗಡಿ ಇಡುತ್ತಾಳೆ, ಮಾವನನ್ನು ಅಂಗಡಿಯಲ್ಲಿಟ್ಟು ಸಂಪಾದನೆ ಮಾಡು ತ್ತಾಳೆ. ಜೊತೆಗೆ ತಾಯಿಯ ದುಡಿಮೆಯೂ ಇಮ್ಮಡಿ ಮುಮ್ಮಡಿಯಾಗಿ ಸೇರಿ ನಸೀಮ ತನ್ನ ಕನಸುಗಳನೆಲ್ಲಾ, ಮುಖ್ಯವಾಗಿ ತನ್ನ ಮೂರು ಅಸೆಗೆಳಲ್ಲಿ, ಎರಡನ್ನು ಈಡೇರಿಸಿಕೊಳ್ಳುತ್ತಾಳೆ. ತನ್ನ ದುಡಿಮೆಯಿಂದಲೇ ಉಳ್ಳಾಲದ ದರ್ಗಕ್ಕೆ ರೈಲಿನಲ್ಲಿ ಪ್ರಯಾಣ ಮಾಡಿ ಮಗಳಾದ 'ರೋಸಿ'ಗೆ ಫಾತಿಹ ಮಾಡಿಸಿ, ಸಾರ್ಥಕತೆ ಸಾಫಲ್ಯತೆ ಗಳಿಂದ ಹಿಂತಿರುಗುತ್ತಾಳೆ, ಎರಡನೇ ಅಸೆಯಾದ ಆಡನ್ನು ಸಾಕಿ, ಮರಿಗಳಿಗೆ ಗಂಟೆ ಕಟ್ಟಿ ನಲಿಯುತ್ತಾಳೆ. ತನ್ನ ಮಗಳಾದ ರೋಸಿಗೆ ತನ್ನಂತೆ ಓದು ಕಲಿಸಿ, ಅವಳನ್ನು ಟೀಚರ್ ಮಾಡುವ ಸಂಕಲ್ಪ ಮಾಡುತ್ತಾಳೆ.

ರೋಸಿ ತನ್ನನ್ನು ತಾನು 'ನಾನು' ಅನ್ನದೆ 'ರೋಸಿ' ಎಂತಲೇ ಸಂಬೋಧಿಸುವಲ್ಲಿ ತುಂಬಾ ಗಂಭೀರವಾದ ಸಂಕೇತವಿದೆ. ರೋಸಿ, ರೋಷನಾರಾ, ತಾಯಿ ಮಗಳಿಗೆ ತಾನೇ ಇಟ್ಟ ಹೆಸರು – ಗಂಡ ಇಟ್ಟದ್ದಲ್ಲ – ಗಂಡ 'ಗುಲಾಮಳು' ಎಂದು ಕರೆ ಎಂದು ಹಾಸ್ಯ ಮಾಡಿದ್ದ–ಅತ್ತೆ ಇಟ್ಟದ್ದಲ್ಲ–ಅತ್ತೆ ಹೆಸರಿಟ್ಟ ಕತೀಜಾ ಸತ್ತಿದ್ದಳು. ರೋಸಿಯಾದರೋ ಆ ಹೆಸರನ್ನು ತಾನು ಉಚ್ಚರಿಸುತ್ತಾ ತನ್ನನ್ನು ತಾನು ರೋಸಿ ಎಂದು ಸಂಬೋಧಿಸು ವಲ್ಲಿ, ತಾಯಿ ಇಟ್ಟ ಹೆಸರನ್ನು ಸಾರ್ಥಕವಷ್ಟೇ ಅಲ್ಲ. ಅನ್ವರ್ಥವಾಗಿಯೂ ಮಾಡು ತ್ತಿದ್ದಳು: ತಾನು ನಿಜಕ್ಕೂ ತಾಯಿಗೆ, ತಾಯಿಯ, ಅಜ್ಜಿಯ ಸಂತಾನಕ್ಕೆ 'ಜ್ಯೋತಿ' ಯಾಗಿದ್ದಳು.

ರೋಸಿ ಒಮ್ಮೆ ತನ್ನ ತಂದೆ ಯಾರೆಂದು ತನ್ನ ಸ್ಕೂಲು ಸಂಗಾತಿಗಳು ಕೇಳು ತ್ತಾರೆ ಎಂದಾಗ ತಾಯಿ ತಂದೆಯದು ಗೋರಿಯಾಗಿದೆ ಅನ್ನು ಎಂದಿದ್ದಳು. ನಿಜಕ್ಕೂ ರೋಸಿಗೆ ತಂದೆ ಇದ್ದೂ ಇಲ್ಲವಾಗಿ ಅವನು ಎಲ್ಲಾ ವಿಧದಿಂದಲೂ ಸತ್ತವನೇ ಅಗಿದ್ದನು. ಇದರಿಂದ ರೋಸಿ ತಾಯಿಯಂತೆ ಸ್ವತಂತ್ರಳಾಗಿದ್ದಳು. ಈ ಸ್ವಾತಂತ್ರ್ಯವೇ ರೋಸಿಯನ್ನು ಮುಂದಿನ ಕುತ್ತಿನಿಂದ ಪಾರು ಮಾಡಿದ್ದೂ ಕೂಡಾ. ತಂದೆ ರೋಸಿ ಯನ್ನು ಬಲವಂತವಾಗಿ ಕೊಂಡುಹೋದಾದ, ಬ್ಲಾಕ್‌ಮೇಲ್ ಮಾಡಿದಾಗ, ನಸೀಮಳು ಲಾಯರಿಗೆ ಮೊರೆಹೊಕ್ಕರೂ ಅವಳಿಗೆ ತನ್ನ ಮಗಳು ರೋಸಿ ಸಿಗುವ ಆಶೆ ಕಾಣದಾ ದಾಗ, ರೋಸಿಯೇ ರಂಪ ಮಾಡಿ, ಉಣ್ಣದೆ, ಕುಡಿಯದೆ ತಂದೆಗೆ ಸಾಕುಬೇಕು ಮಾಡಿ, ಅವನಿಂದಲೇ, ತನ್ನ ಮನೆಗೆ, ಅಂದರೆ ತಾಯಿಯ ಬಳಿಗೆ ಹಿಂತಿರುಗುತ್ತಾಳೆ.

ಭಲೆ, ನಸೀಮಳಿಗೆ ನೂರಕ್ಕೆ ನೂರು ನಸೀಮಳ ಮಗಳೇ ರೋಸಿ! ತಂದೆ ಸತ್ತಿದ್ದಾನೆಂದು ತಂದೆಗೆ ಹೇಳಿದರೂ ತಂದೆ ಅವಳನ್ನು ಬಲವಂತವಾಗಿ ಕೊಂಡೊಯ್ದಾಗ,

ಅವಳು ರಂಪ ಮಾಡಿ, ಜಂಡಿಯಾಡಿ, ತಂದೆಯಿಂದಲೇ ತಾಯಿಗೆ ತನ್ನನ್ನು ಒಪ್ಪಿಸಿಕೊಂಡು, ತಂದೆಯನ್ನ ಸಾಂಕೇತಿಕವಾಗಿ 'ಕೊಂದು' ಬಿಡುತ್ತಾಳೆ.

ನಸೀಮಳ ವ್ಯಕ್ತಿತ್ವ ಎಷ್ಟು ಅದ್ಭುತವಾದ ಸ್ವಂತಿಕೆಯದು, ಕೆಚ್ಚಿನ ಸ್ವಾತಂತ್ರ್ಯದ್ದೆಂದರೆ, ಅದು ಕತೆಯ ಎರಡು ಸಂದಿಗ್ಧ ಸುದರ್ಭಗಳಲ್ಲಿ ನಮ್ಮನ್ನು ಅವಾಕ್ಕು ಮಾಡಿಬಿಡುತ್ತದೆ. ಒಂದು ನಾವು ನಸೀಮಳು ತನ್ನ ಗಂಡ ಎರಡನೇ ಮದುವೆಯಾದ ಯಾತನೆ ಸಹಿಸಲಾರದೆ, ಮೊದಲೇ ಉಲ್ಬಣವಾದ ಖಾಯಿಲೆಗೆ ಇನ್ನೂ ಸೋತು, ರಕ್ತ ಕಕ್ಕುತ್ತಾ, ಇನ್ನೇನು ಸಾಯುತ್ತಾಳೆ ಎನ್ನುತ್ತಿರುವಾಗ ತನ್ನ ಮಗಳಾದ ರೋಸಿಯನ್ನು ಕಂಗಾಲುಮಾಡಲಾರದೆ, ಅವಳಿಗಾಗಿ ಮತ್ತೆ ಜೀವ ಕೂಡಿಸಿಕೊಂಡು ಬದುಕುವುದು ; ಎರಡು, ತನ್ನ ಗಂಡ ಎರಡನೇ ಹೆಂಡತಿಗೆ ತಲಾಖ್ ಕೊಟ್ಟು, ತನ್ನ ಮಗನಾದ ಇಕ್ಬಾಲನನ್ನು ಕೈಯಲ್ಲಿ ಹಿಡಿದುಕೊಂಡು, ಮನೆಗೆ ಬಾ, ಎಂದು ಅಂಗಲಾಚಿದಾಗ, ತಾಯಿಯಾದ ಸಕೀನಳೂ ದುಂಬಾಲು ಬಿದ್ದು ಪರಿಪರಿಯಾಗಿ ಕಾಡಿ ಬೇಡಿದಾಗ ತಾನು ಮಾತ್ರ ತನ್ನ ಮಗಳಾದ ರೋಸಿಯ ಒಲವಿಗಾಗಿ, ತನ್ನ ಆತ್ಮಗೌರವದ ಘನತೆಗಾಗಿ ಒಪ್ಪದೇ, ಅವನನ್ನು ನಿರಾಕರಿಸುವುದು. ಈ ಎರಡೂ ಘಟನೆಗಳು ಇಂಗ್ಲೀಷಿನಲ್ಲಿ surprise ಎನ್ನುವ ವಿಸ್ಮಯದ ಘಟನೆಗಳು.

ಕತೆಗಾರ್ತಿ ಏನಾದರೂ ತನ್ನ ಕೈವಾಡವನ್ನು ಮಾಡಿದ್ದಾರೆ, ಕತೆ ಎಲ್ಲರೂ ಸಾಂಪ್ರದಾಯಿಕವಾಗಿ ಎಣಿಸಿದಂತೆ ನಸೀಮಳ ಸಾವಿನಲ್ಲಿ ಕೊನೆಗಾಣಿಸಿ, ನಸೀಮಳನ್ನು ಸಹನೆಯ ಹುತಾತ್ಮಳನ್ನಾಗಿ ಮಾಡಬಹುದಿತ್ತು : ಅಥವಾ, ಗಂಡ, ತನ್ನ ಎರಡನೇ ಹೆಂಡತಿಗೆ ತಲಾಖ್ ಕೊಟ್ಟು, ನಸೀಮಳು ಮತ್ತೆ ಮನೆಗೆ ಬರುವುದಕ್ಕೆ ಸಲೀಸು ಮಾಡಿದಾಗ, ಅದಕ್ಕೆ ಉತ್ತೇಜಕವಾಗಿ ತಾಯಿಯ ಮಾತೂ ಸೇರಿದಾಗ, ಕತೆಗಾರ್ತಿ ನಸೀಮಳನ್ನು ಗಂಡನನ್ನು ಭೂಮಿಯಂತೆ ಸಹನೆಯಲ್ಲಿ ಕ್ಷಮಿಸಿ, ಕ್ಷಮೆಯಲ್ಲಿ ಧರಿತ್ರಿಯನ್ನಾಗಿ ಮಾಡಿ, "ಭಲೆ!" ಎನಿಸಿಕೊಳ್ಳಬಹುದಿತ್ತು. ಸಾರಾ ಅಬೂಬಕ್ಕರ್ ಅವರು ಈ ಎರಡೂ ಬಹಳ ರಂಜಕವಾದ ಟೆಂಪ್ಟೇಷನ್‌ಗಳಿಗೆ, ಸಲೀಸಾದ ಲಾಲಸೆಗಳಿಗೆ, ಆ ಮೂಲಕ 'ಭಲೆ, ಎಂತಹ ಮಾದರಿಯ ಭಾರತೀಯ ನಾರಿಯನ್ನು ಸೃಷ್ಟಿಸಿದ್ದೀರಿ!' ಎನ್ನುವ ಸುಲಭವಾದ ಶಹಭಾಷ್‌ಗಿರಿಗೆ, ಚಿಲ್ಲರೆ ಕರತಾಡನಕ್ಕೆ, ಸಿಕ್ಕುಬಿಡಬಹುದಾಗಿತ್ತು. ಆದರೆ ಈ ಸುಲಭ ಜನಪ್ರಿಯತೆಗೆ ಸೊಪ್ಪು ಹಾಕದೆ ಅತ್ಯಂತ ನಿಷ್ಠುರವಾದ ಕಲಾ ನಿಷ್ಠೆಯಲ್ಲಿ ನಸೀಮಳನ್ನು ನಸೀಮಳ ಭವಿಷ್ಯಕ್ಕೇ ಬಿಟ್ಟು, ಅವಳ ಸ್ವಂತಿಕೆಗೆ, ಸ್ವಾತಂತ್ರ್ಯಕ್ಕೆ ಆತ್ಮಪತ್ಯಯಕ್ಕೆ' ಘನತೆಗೆ ಯಾವ ರೀತಿಯ ತೊಂದರೆಯಾಗದಂತೆ ಕಾಪಾಡಿಕೊಂಡು ಬಂದಿರುವುದು ಸಾರಾ ಅಬೂಬಕ್ಕರ್‌ರ ಕಲಾಶೀಲಕ್ಕೆ, ಸತ್ಯನಿಷ್ಠುರತೆಗೆ, ಅನುಭವದ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ.

ಇದೆಲ್ಲವೂ ಕತೆ ತನ್ನನ್ನು ತಾನು ಬರೆಸಿಕೊಂಡದ್ದು. ಸಾರಾ ಅವರು ಬರೆದದ್ದಲ್ಲ ಅನ್ನುವುದಕ್ಕೆ ಅಗ್ನಿ ಸಾಕ್ಷಿ ಕತೆಯ ಕೊನೆಯ ವಾಕ್ಯದಲ್ಲಿ ಬರುವ ಪ್ರಕೃತಿಯ ಪ್ರತಿಮೆಗಳಲ್ಲಿ ಹರಳುಗಟ್ಟಿರುವ ಅನುಭವ ಸತ್ಯ – ಇಡಿಯ ಕತೆಯ ಕಲಾದರ್ಶನ :

> "ರೋಸೀ ಇಲ್ಲೇ ಆಡುತ್ತಿರು. ನಾನು ಹೋಗಿ ಚಿಪ್ಪು ತರುತ್ತೇನೆ" ಎಂದು ಆಕೆ ಮಗಳೊಡನೆ ನುಡಿದು ನದಿಯ ಕಡೆ ಹಜ್ಜೆ ಹಾಕಿದಳು. ನದೀ ತೀರದಲ್ಲಿ ಒಂದು ಕ್ಷಣ ಆಕೆಯ ದೃಷ್ಟಿ ಹಿಂದೆ ತಾನು ಮತ್ತು ಪಾಷಾ ಕುಳಿತುಕೊಳ್ಳುತ್ತಿದ್ದ ಬಂಡೆಯೆಡೆಗೆ ಹರಿಯಿತು. ಒಂದೇ ಕ್ಷಣ. ಮರುಕ್ಷಣವೇ ಅವಳು ಆ ನೆನಪಿನ ಪರದೆಯನ್ನು ಹೃದಯದಿಂದ ಕಿತ್ತೆಸೆದು. ನದಿಯನೀರಲ್ಲಿಳಿದಳು. (ಪು. 236)

ನಸೀಮ–ಪಾಷಾರ ಪ್ರಣಯ ರಾಗ ಒಂದು **ಬಂಡೆ**: ಆದರೆ ನಸೀಮ–ರೋಸಿಯರ ಒಲವು **ನದಿಯ ನೀರು**: ಒಂದು **ಸ್ಥಾವರ** ಇನ್ನೊಂದು ಜಂಗಮ; ಒಂದು ಕಾಮದ ಕಲ್ಲು ಬಂಡೆ, ಇನ್ನೊಂದು ಒಲುಮೆಯ ಚಿಲುಮೆ, ಹರಿಯುವ ಗಂಗೆ; ಒಂದರಲ್ಲಿ ಸಾವಿದೆ, ಇನ್ನೊಂದರಲ್ಲಿ ಜೀವವಿದೆ. ಜೀವಾದಾರವಾದ ಆಹಾರವಿದೆ. ಚಿಪ್ಪಿದೆ, ಕರುಳಿನ ಕಂದಳಾದ ರೋಸಿಗೆ ತಾಯಿ ಗಂಗೆಯ ಮಾಲೆ ವಾಲಿದೆ.

ಸಹನಾ ಎರಡು ತಾಯಿಯರ ಯಮಳ ಕರುಳುಮಿಡಿತ. ಒಂದು ತಾಯಿ ಸಕೀನಾ ; ತಾಯ್ತನಕ್ಕೆ ಹುತಾತ್ಮಳಾಗುತ್ತಿರು· ಭೂಮಿಯಂತಹ ಕ್ಷಮಾಶೀಲೆ : ಅವಳೇ ಸಹನಾ ; ಇನ್ನೊಂದು ತಾಯಿ ನಸೀಮ. ತಾಯ್ತನಕ್ಕೆ ಸಾವಿನ ದವಡೆಯಿಂದ ಬಿಡಿಸಿಕೊಂಡು ಬಂದ, ಒಲಪಿಗೆ ಪುನರ್ಜನ್ಮ ಪಡೆದ. ಒಲವಿಗಾಗಿ ಶಕ್ತಿಯಂತೆ ಕಾಮದ ಗಂಡನನ್ನು ಮೆಟ್ಟಿನಿಂತ ಅನ್ನಪೂರ್ಣೆ.

ಸಹನಾ ಹೀಗೆ ಕೇವಲ ಒಬ್ಬ ಆಗಂತುಕ ಹೆಣ್ಣಿನ ಕತೆಯಲ್ಲ : ಅದು ಕಾಮ ಪ್ರೇಮಗಳ ಸೆಣಿಸತ್ವ ತಾಯ್ತನಗಳ ಜೈವಿಕ ತುಮುಲಗಳ ಕತೆ: ಅದು ಹಿಂದೂ ಮುಸ್ಲಿಮರ ಧಾರ್ಮಿಕ ಕಾನೂನು ಕಟ್ಟಳೆಗಳ ಜನಾಂಗಿಕ ಕತೆಯಲ್ಲ : ಅದು ಮಾನವನ ಧರ್ಮ ಮತ್ತು ಪ್ರೇಮಗಳ, ಅಂದರೆ Law ಮತ್ತು Love ಗಳ ಸಂಘರ್ಷದ ಜೀವಂತ ಕತೆ. ಆದ್ದರಿಂದ **ಸಹನಾ**ದ ನಸೀಮ ಹೆಣ್ಣಲ್ಲ. ಮುಸ್ಲಿಮಳಲ್ಲ : ಅವಳು ನಸೀಮ – ವ್ಯಕ್ತಿ ವಿಶೇಷದ ನಿಸರ್ಗ ಚೇತನದ ಏಕಮಾದ್ವತೀಯೇ.

ಹುಡಿ ಇದೆ ಇಲ್ಲಿ ಎಲ್ಲೊ

ಸಾವಿನ ಬಾಗಿಲ ಬಳಿ ನಿಂದು ಬಂದೆ
ಏನು ಕಂಡೆ, ಏನು ತಂದೆ
ಚಿರನಿದ್ದೆ, ಸುರ ನಿದ್ದೆ, ಸುಖನಿದ್ದೆ
—ಯಿಂದೆಮ್ಮ ನಡಿಗೆ ಎಲ್ಲಿಗೆ ಮುಂದೆ ?

ಕ್ಷಣ ಕಣ್ಮುಚ್ಚಿದ ಸಮಾಧಿಯಲ್ಲಿ
ಧಗಿಸುವ ಕಿಚ್ಚು
ವ್ಯಾಪಾರದ ಸರಕು
ವ್ಯಾಮೋಹದ ಹಾವು
ಸುಖ_ದುಃಖ ಮೀರಿ
ಬಾಳಿ ತಟ್ಟಿದ ಶಾಂತಿ ನಿಚ್ಚಳ ಬಯಲು.

ಬಯಲೀಚೆ
ಮುಪ್ಪಡರಿದ ಮರ
ತರಗು ನೆರಳು ಕೆಳಗೆ
ಮೆರುಗಿಟ್ಟವನಂತೆ
ಮೆರುಗಿಟ್ಟವನಂತೆ
ಮೀರಿದಾಸೆಗರಸೇರಿ : ಕರುಣೆಯ ಕತ್ತುಹಾರಿಸಿ
ಹಸಿರು ಕೇರಿ, ಆತ್ಮ ತೀರಿ
ಬೂದಿಯ ಮೇಲೆ ಸವಾರಿ
ಮರಳಿದ ಮರುಳುಗಳ ಸೆಳೆತಕ್ಕೆ
ಬುಗರಿ ತಿರುಗುತ್ತಿದೆ ಗಿರಿಗಿರಿ

ಮರದೊಳಗಮರ ಜೀವೋನ್ಮುಖಿದೇರು
ಬೀಸಲ್ಲಿ ಭಿತ್ತ ಮೊಳೆತು
ಪಲ್ಲವಿಸಿ, ಬಲಿತು ಪುಷ್ಪಫಲ
ಮಾಗಿ ನೆಲ ಪುಳಕಕ್ಕೆ
ಬಣ್ಣದ ಬಿಲ್ಲರಳಿ

ಚಂದ್ರಶೇಖರಯ್ಯ, ತರ್ಕಶಾಸ್ತ್ರ ಅಧ್ಯಾಪಕ ಕೆ. ಎಸ್. ಪದವಿಪೂರ್ವ ಕಾಲೇಜು, ಹೊಳಲ್ಕೆರೆ

ಮತ್ತೆ ಮಳೆ ಮತ್ತೆ ನದಿಹಾಡಿ
ಸಾಗರದಗಲ ಅಲೆ, ತುಯ್ತು
ನಾವು
ದಂಡೆ ಅಲ್ಲೆಲ್ಲೋ ದಿಗಂತ ತುದಿಯಲ್ಲಿ !

ಸಾಗುವೆ ಸಾಗಾಟದಲೆ ನಿರಂತರ
ಅಪ್ಪಳಿಸಿ ತೇಲಿ ಮುಳುಗಿ
ತೇಲುವ ಮಧ್ಯಂತರದಲ್ಲೂ
ನಿನ್ನ ಆಟಮಟ್ಟ, ಇಳಿತ, ಕುಳಿತ.

ಸುಡು, ಕೆಂಡವಲದ್ದಿ ತೆಗದ ವ್ಯೆಮನಗಳಿಗೆ
ಬೋಧಿ ನೆರಳರಳಿ ತಂಪಾಗುವ ಬದಲು
ಚಿಗುರೊಡೆದು, ಹಾಡುವ ಹಕ್ಕಿಗೆ
ಹರಿವ ನದಿಯ ಲಯವಾಗುವ ಬದಲು
ಶಿಖರಗಳ ಅಗೆದು ಕೆಂಡ ತೆಗೆವೆ
ಧಗಿರುತ್ತ ಸಾವಿನ ತಂಪ ತೊರೆವೆ
ಮುಪ್ಪಡರಿ ಮುರಿವ ಮರ
ಕುಸಿದರೆ ಆ ನೆರಳೂ ಮಾಯ.
ದಂಡೆ ಇದೆ ಇಲ್ಲೆ ಎಲ್ಲೊ.

—ಚಂದ್ರಶೇಖರತಾಳ್ಯ

ನೆರಮನೆಯ ಚಿನಾಲಿ ಅನ್ನುತ್ತಾಳೆ, "ನೀವೇನು ಬಿಡಿ, ಕವಿಗಳೇ ಸುಖವಾಗಿರುಬಲ್ಲಿರಪ್ಪ ಕಲ್ಪಿಸುತ್ತ !"

ಪಿ. ಲಂಕೇಶ್

‘ಬದ್ಧತೆ ಮತ್ತು ಸಾಹಿತ್ಯದ ಅರ್ಥವ್ಯಾಪ್ತಿ’

—ಕುಂ. ವೀರಭದ್ರಪ್ಪ

ನಿಜವಾದ ಕಾವ್ಯ ಜನರಿಗೆ ಅರ್ಥವಾಗಬಾರದೆಂಬ ಇತ್ತೀಚಿನ ಒಂದುವಾದಕ್ಕೆ ಅಧ್ಯಯನಶೀಲ ಪ್ರವೃತ್ತಿ ಇದೆಯೇ ಹೊರತು ಕೃತಿಪರಿಶೀಲನೆಯನ್ನು ಸಾಮಾಜಿಕವಾಗಿ ನೋಡುವಂಥ ಸಹಾನುಭೂತಿಇಲ್ಲ. ಧಾರ್ಮಿಕ ಆವರಣದೊಳಗೆ ಬೆಳೆದು ಬಂದಂಥ ಪರಂಪರೆ ಹಾಗು ಸಂಪ್ರದಾಯಗಳ ಬಿಗಿ ಚವುಕಟ್ಟಿನೊಳಗೆ ಬೆಳೆದಿರುವ ಸಾಹಿತ್ಯದ ಪುನರ್ ಮೌಲೀಕರಣ ಅತ್ಯವಶ್ಯ ಎಂದು ಕೆಲವರಿಗೆ ಅನ್ನಿಸುತ್ತಿಲ್ಲ. ಚಾರಿತ್ರಿಕ ಒಳನೋಟಗಳಿಲ್ಲದೆ ಬರೆಯುವ ಇಂಥ ಲೇಖಕ ಕಲೆಗಾಗಿಕಲೆ ಎಂದು ಪರಿಭಾವಿಸಿರುತ್ತಾನೆಯೇ ಹೊರತು ಕಲಾಸೃಷ್ಟಿಯಲ್ಲಿ ಸಾಮಾಜಿಕ ಪ್ರಜ್ಞೆಯ ಅನಿವಾರ್ಯತೆಯನ್ನು ಒಪ್ಪಿಕೊಂಡಿರುವುದಿಲ್ಲ. ಕವಿ ಸೌಂದರ್ಯೋಪಾಸಕ ; ಕಾವ್ಯ ನಿರ್ಮಿತಿಗೆ ಸಂಬಂಧಿಸಿದ ಪ್ರಜ್ಞೆ ಮತ್ತು ತನ್ಮಯತೆಗೆ ಮಾತ್ರ ಸೀಮಿತನಾದವ ಎಂಬ ಪರಿಕಲ್ಪನೆ ಸ್ವಾತಂತ್ರ್ಯದಿಂದಿತ್ತೀಚೆಗೆ ಅಪಹಾಸ್ಯಗೊಂಡಿದೆ ಸಾಮಾಜಿಕ ಹೊಣೆಗಾರಿಕೆಗಳೇ ಇಲ್ಲದ ಈ ಹುಸಿ ಸ್ವಾತಂತ್ರ್ಯ ಬೂರ್ಶ್ವಾ ಸಾಹಿತಿಗಳ ಪಾಲಿಗೆ ಒಂದು ಸೋಗು ಮಾತ್ರವಾಗಿದೆ. ಇಂಥ ಸಾತಂತ್ರ್ಯ ಕುರಿತು ಇಂಥ ಸಾಹಿತಿಗಳು ನೀಡುವ ಅರ್ಥ ವಿವರಣೆ ಜೀವನ ಕಾರಂಜಿಗಳನ್ನು ಬತ್ತಿಸುವತ್ತ ಕೆಲಸ ಮಾಡುತ್ತದೆ. ಅಧಿಕಾರ - ಕ್ರಾಂತಿ ; ವ್ಯಕ್ತಿ - ಸಮಾಜ : ಪ್ರೇಮ - ಬಲತ್ಕಾರ ; ಕನಸು - ನನಸು ಇಂಥ ವೈರುಧ್ಯಗಳೇ ಹೆಚ್ಚಿರುವ ಇತ್ತೀಚಿನದಿನಗಳು ಬದುಕನ್ನು ವ್ಯಾಖ್ಯಾನಿಸುವುದನ್ನೇ ಬಿಟ್ಟುಕೊಟ್ಟಿವೆ ಎನ್ನುವುದಕ್ಕಿಂತ ತಾತ್ಕಾಲಿಕವಾಗಿಮರೆತಿವೆ ಎಂದರೆ ಸಮಂಜಸವೆನಿಸುತ್ತದೆ. ಆರ್ಥಿಕ ಸಮಾನತೆ ಮತ್ತು ಸಾಮಾಜಿಕ ವೈರುಧ್ಯಗಳಿಗೆ ಸೌಂದರ್ಯಮೀಮಾಂಸೆ ಬರೆಯುವ ದಿಸೆಯಲ್ಲಿ ಮುಖ ಮಾಡಿರುವ ಬೂರ್ಶ್ವಾ ಸಾಹಿತ್ಯ ಮಾನವೀಯ ಹಕ್ಕುಗಳ ನಿರಾಕರಣೆ ಸಮಸ್ಯೆಯನ್ನು ಮತ್ತು ಪ್ರಜಾಪ್ರಭುತ್ವದ ಕಂಬಳಿಯೊಳಗೆ ಹುದುಗಿರುವ ಸರ್ವಾಧಿಕಾರ ವ್ಯವಸ್ಥೆಯನ್ನು ಸಮಾನವಾಗಿ ಅರ್ಥೈಸಿದೆ. ಸಾಮಾಜಿಕ ಸಂಬಂಧಗಳ ಸಂದರ್ಭದಲ್ಲಿ ಮಾಯವಾಗಿರುವ ಆತ್ಮಗೌರವ ಸಂಸ್ಕೃತಿಯ ನಿರಂತರ ಸ್ಮೃತಿಯಲ್ಲಿ ಪ್ರಧಾನ ವಿರೋಧಾಭಾಸಕ ಮೌಲ್ಯವಾಗಿರುವುದರ ವಿರುದ್ಧ ಹೋರಾಡುವುದು ಎಷ್ಟು ಅಸಂಭವವೋ ವಿಕೃತ ಮೌಲ್ಯಗಳಿಂದ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವ ಬರಹಗಾರ

ಕುಂ. ವೀರಭದ್ರಪ್ಪ, ಗುಳೆಯಂ-518348 (ಕರ್ನೂಲ್ - ಆಂಧ್ರ ಪ್ರದೇಶ)

ಸೃಷ್ಟಿಶೀಲ ಜೀವನಕ್ಕಾಗಿ ಹೋರಾಡುವುದು ಅಷ್ಟೇ ಅಸಂಭವ. ಈ ಕಾರಣದಿಂದಾಗಿ ನಮಗೆ ದೊರೆತಿರುವ ಸ್ವಾತಂತ್ರ್ಯ ಮಾನವೀಯ ಸಂಬಂಧಗಳ ಆಳ ಮತ್ತು ಹರಹವನ್ನು ಯಾವೊಂದು ಆಲೋಚನೆಗೆ ಸಿಲುಕಿಸುವುದೇ ಇಲ್ಲ, ಸ್ವಾತಂತ್ರ್ಯದ ಕಳೇಬರದೊಳಗೆ ಒಡೆದ ವ್ಯಕ್ತಿತ್ವಗಳೇ ತುಂಬಿಕೊಂಡಿವೆ. ಮ್ಯಾಕ್ಸ್ ಆಡರ್ತ್‌ನ ಅಭಿಪ್ರಾಯದಂತೆ ಸಾಮಾಜಿಕ ಜವಾಬ್ದಾರಿಯು ವಿವೇಕದಿಂದ ಸಾಹಿತಿಯು ಸೃಷ್ಟಿ ಸ್ವತಂತ್ರವಾಗಿಲ್ಲ. ಸ್ವಾತಂತ್ರ್ಯ ಆಧುನಿಕ ಚಿಂತನೆಗೆ ಪ್ರತಿಕೂಲ ಹಾಗೂ ಆತಂಕಾರಿ ಪರಿಸ್ಥಿತಿಯನ್ನು ನಿರ್ಮಿಸಿದೆ. ಆದ್ದರಿಂದ ವ್ಯಕ್ತಿಗತಪ್ರತಿಭೆ, ಸೃಜನ ಶಕ್ತಿ ಕ್ರಿಯಾಶೀಲತೆಗಳು ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಅರಳಲು ಸಾಧ್ಯವಾಗಿಲ್ಲ. ಸಾಮಾನ್ಯ ಬದುಕಿನ ಆಚೆಗಿರಬಹುದಾದ ಶಕ್ತಿಗಳನ್ನು ಕ್ರೋಢೀಕರಿಸಿ ನಿಸರ್ಗದ ಮೂಲ ಶಕ್ತಿಗಳನ್ನು ಪ್ರೇರೇಪಿಸಲು ಸಾಮಾಜಿಕ ಬದ್ಧತೆಯನ್ನು ನಿರಾಕರಿಸುವ ಸಾಹಿತ್ಯಕ್ಕೆ ಹೇಗೆ ಸಾಧ್ಯ ? ಈ ಭೂರ್ಶ್ವಾ ಸಾಹಿತಿಗಳು ತಾವು ಹುಟ್ಟುವುದಕ್ಕಿಂತ ಮೊದಲೆ ಶ್ರೇಷ್ಠರೆನಿಸಿಕೊಂಡವರಾದ್ದರಿಂದ ನಿಮ್ನ ಜಾತಿಯವರ ಆಶೋತ್ತರಗಳ ಸ್ಮಶಾನದ ಮೇಲೆ ಹುಸಿ ಪ್ರಜಾಪ್ರಭುತ್ವ ಕೃತಕ ಇಚ್ಛೆಗಳನ್ನು ; ಕೃತಕ ಕ್ರಿಯೆಗಳನ್ನು ಸೃಷ್ಟಿಸಿದೆ. ಈ ಎಲ್ಲ ದ್ವಂದ್ವ ಸ್ಥಿತಿ ನಡುವೆ ಸಾಹಿತಿಯಾದವ Positive attitude ಗೆ ಸಾಂಕೇತಿಕವಾಗಿ ಶೂದ್ರ ಪ್ರಜ್ಞೆಯು ಹೊಸ ಸಂಸ್ಕೃತಿಯನ್ನು; ಬದುಕನ್ನು ವೈಚಾರಿಕವಾಗಿ ಒಳಗೊಂಡಂಥ ಸಮಾಜವನ್ನು ನಿರ್ಮಾಣ ಮಾಡುವತ್ತ ಗಮನವಿಡಬೇಕಾಗಿದೆ. ಹಿಂದೂ ಸಮಾಜ ವ್ಯವಸ್ಥೆ ತನ್ನೊಳಗೆ ಪೋಷಿಸಿರುವ ಕ್ರೌರ್ಯದ ವಿಶಾಲ ಚೌಕಟ್ಟಿನಲ್ಲಿ ಎಲ್ಲಾ ವರ್ಗದ ಮನುಷ್ಯರಿಗೂ ಒಂದೇ ಅರ್ಥದ ಸೌಂದರ್ಯ ಕಲ್ಪಿಸುವುದು ಒಂದೇ ವರ್ಗದ ಸಾಹಿತಿಗಳಿಗೆ ಯಾಕೆ ಸಾಧ್ಯವೆಂದರೆ ಅದರ ಸಂಕೀರ್ಣ ಜೀವನ ಪ್ರವಾಹದಲ್ಲಿನ ಧರ್ಮದ ಹಾಸ್ಯಾಸ್ಪದ ಗೋಂದಲಗಳ ಉಸಾಬರಿಗೆ ಹೋಗದಿರುವುದು. ನೈತಿಕತೆಯನ್ನು ಮೀರಿ ಮುಂದುವರಿಯುವ ಇತಿಹಾಸದ ಸಂದರ್ಭದಲ್ಲಿ ಬದ್ಧತೆಯನ್ನು ನಿರಾಕರಿಸುವ ಇಂಥ ಲೇಖಕನಿರುವಂತೆ : ಬದ್ಧತೆಯನ್ನು ಒಪ್ಪಿಕೊಂಡು ಬದುಕಿನ ಎರಡು ಪ್ರಮುಖ ಸೆಳೆತಗಳಾದ ಪ್ರೀತಿ (Eros) ಮತ್ತು ಸಾವಿನ ಇಚ್ಛೆ (Thantos) ಗಳಿಗೆ ಅಧೀನನಾಗಿ ಬರೆಯುವ ಸಾಹಿತಿಯೂ ಇದ್ದಾನೆ. ವಿಭಿನ ಮನಸ್ಥಿತಿಯ ಈ ಎರಡು ಲೇಖಕರು ಮಾನವನ ಬದಲಾವಣೆಗಳನ್ನು ಮೀರಿದ ಅಗತ್ಯಗಳಿಗೆ ಸೀಮಿತರಾದವರು. ಅಲ್ಲದೆ ಜಗತ್ತಿನ ಭ್ರಮಾತ್ಮಕವಾದ ಮತ್ತು ವೈಯಕ್ತಿಕ ಜಗತ್ತಿನ ಪ್ರಲೋಭನೆಗೆ ಒಳಗಾದವರು. ಇವರು ಭಾವಿಸುವ ಭೂರ್ಷ್ವಾ ಕ್ರಾಂತಿಯು ಮೇಲ್‌ರಚನೆ (Super structure) ಬಗ್ಗೆ ಕಾರ್ಲ್‌ಮಾರ್ಕ್ಸ್ ತನ್ನ ದಾಸ್ ಕ್ಯಾಪಿಟಲ್‌ನಲ್ಲಿ ವಿಶದವಾಗಿ ವಿವರಿಸಿದ್ದಾನೆ. ಹೆಪ್ಪುಗಟ್ಟಿದ ಸಾಮಾಜಿಕ ಸಂಬಂಧಗಳ ಅಭದ್ರತೆ ಮತ್ತು ಪ್ರಕ್ಷೋಭೆಗಳಿಂದ ಪಲಾಯನ ಮಾಡುತ್ತಲೆ ಅವುಗಳನ್ನು ಪೂರ್ವಾ

ಗ್ರಹಗಳ ಸಹಿತ ಪ್ರೇಷಿಸುವಲ್ಲಿ ಈ ಎರಡೂ ವರ್ಗದ ಸಾಹಿತಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಮನುಷ್ಯರ ; ವಸ್ತುಗಳ ; ಭಾವನೆಗಳ : ಆಲೋಚನೆಗಳ ಒಂದು ಬೃಹತ್ ಚಲನೆಯೂ ಶೋಷಣೆಯೂ ಸೂಕ್ಷ್ಮಗಳೂ ಹಾಗೂ ಹೊಕ್ಕಾಗಿರುವ ಸಮಾಜದ ಪೂರ್ಣ ಸ್ವರೂಪವನ್ನು ಬಿಚ್ಚಿ ಲೇಖಕ ಬಿಚ್ಚಿಕೊಂಡರೆ ತಾನು ಬದ್ಧನೆಂದು ಸ್ವಯಂ ಆರೋಪಿಸಿಕೊಳ್ಳುವ ಲೇಖಕ ಅದಕ್ಕೆ ನಿಕಟನಾಗಿ ತನ ಆಲೋಚನಾ ಕ್ರಮಗಳನ್ನು ನಿಯಂತ್ರಿಸಿಕೊಳ್ಳಲು ಕಲಾತ್ಮಕತೆಗೆ ಎಲ್ಲಿ ದಕ್ಕೆ ಒದಗುವುದೋ ಎಂದು ಯೋಚಿಸದೆ ಇರಲಾರ. ಈ ಕಾರಣಗಳಿಂದ ಈ ಎರಡೂ ವರ್ಗದ ಸಾಹಿತ್ಯ 'ಕಮಾಡಿಟಿ ಫೆಟಿಷಿಸಂ' ಆಗುತ್ತದೆ. ಎಡಲಾಪಕೆ ವಿರುದ್ಧ ಮಾತಾಡುವುದು ಮತ್ತು ಬಲಲಾಪಕೆಯನು ಕ್ರಾಂತಿಯನ್ನು ವೈಭವಗೊಳಿಸುವುದು ಎರಡೂ ಒಂದೇ ಆಗಿದೆ. ಇದು ಒಂದು ರೀತಿಯ ಸ್ವಾರ್ಥ ಪ್ರೇರಿತ Rigid ಆದ ಕಲ್ಪನೆ. ಆಧುನಿಕ ವಿಮರ್ಶೆಯ ವ್ಯಾಖ್ಯಾನ (Interpretation) ಸಾಹಿತ್ಯ ಕೃತಿಯಲ್ಲಿ ರಸಾನುಭೂತಿಯ ಅನಿರ್ವಚನೀಯತೆಯ ಬಗ್ಗೆ Structures ಗಳನ್ನೊಳಗೊಂಡ ಒಂದು Text ಮಾತ್ರ. ಲೆಸ್ಲೀಫೀಡರ್ ಹೇಳುವಂಥ ಬೆಳಕಿನ ವಿವರಣೆಗಳಲ್ಲಿ ಕತ್ತಲೆಯ ನಿಗೂಢಗಳನ್ನು ಪರಿವರ್ತಿಸುವ ರೀತಿ ಬದ್ಧತೆಯನ್ನು ನಿರಾಕರಿಸುವ ಲೇಖಕನಲ್ಲಿದೆಯೇ ಎಂಬ ಪ್ರಶ್ನೆ ಕಾಡುತ್ತದೆ. ಸಾಮುದಾಯಿಕ ಕ್ರಿಯಾಶಕ್ತಿಯನ್ನು ಸಂಯೋಜಿಸಿಕೊಳ್ಳುವುದರಲ್ಲಿರುವ ವೈಫಲ್ಯ ಈ ಪ್ರಶ್ನೆಗೆ ಉತ್ತರವಾಗಿದೆ. ಬದ್ಧನಾಗಿ ಬರೆಯುವ ಲೇಖಕನ ಸೃಜನಶೀಲತೆಗೆ ಸಹಜವಾದ Insight ಎಂದರೆ ಪರಕೀಯ ಪ್ರಜ್ಞೆ : ನಿರರ್ಥಕತೆ ; ಏಕಾಂಗಿತನ ಇಂಥ ನಿಷೇಧಾತ್ಮಕ ಭಾವನೆಗಳು ಕಾಡದೆ ಇರುವುದು.

ಪರಕೀಯ ಪ್ರಜ್ಞೆ ಬಡತನದ ಬಗ್ಗೆ ಅನನ್ಯವಾದ ರೀತಿಯಲ್ಲಿ ಸಹಾನುಭೂತಿ ತೋರುವವರಲ್ಲೂ ಇರಬಹುದು. ಬಡತನ ದಾರಿದ್ರ್ಯ ಸಮಾಜದ ಎಲ್ಲ ಅಸಮಾನತೆಗಳ ಬಗ್ಗೆ ಅಸಮಾಧಾನ ಪ್ರಕಟಿಸುವವರಲ್ಲೂ ಇರಬಹುದು. ವ್ಯಕ್ತಿ ಮತ್ತು ಸಮಾಜದ ನೈತಿಕ ಜೀವನದ ಬಗ್ಗೆ ಸುದೀರ್ಘ ಆಲೋಚನೆ ಮಾಡುವುದರ ಮೂಲಕ ಇರಬಹುದು. ಆದರೆ ಈ ರೀತಿಯ ಪರಕೀಯ ಪ್ರಜ್ಞೆ ಕಲಾವಂತಿಕೆಯ ಪ್ರಜ್ಞೆಯೂ ಆಗಿರಬಹುದು. ಭಾಷೆಯ ಗರಡಿಯೊಳಗೆ ಶೋಷಣೆಯ ಪಟ್ಟುಗಳನು ಮೂರ್ತಗೊಳಿಸುವಲ್ಲಿ ರೂಪುಗೊಳ್ಳುವ ಆಲೋಚನೆಯ ಹಂದರದೊಂದಿಗೆ ಪರಕೀಯ ಪ್ರಜ್ಞೆಯ ಸಂಬಂಧ ಎಂಥಾದ್ದು : ಪರಕೀಯಪ್ರಜ್ಞೆ ಸಾಹಿತ್ಯದ ಸ್ಥಾಯಿಭಾವವಾದಾಗ ಅಥ ವ್ಯಕ್ತಿ ಸಾರ್ಥಕತೆಯನು ಪಡೆಯುವುದಿಲ್ಲ ! ಇದು ಒಂದು ರೀತಿಯ Absordity ಆಗಬಹುದು. ಕ್ರಿಸ್ತ ಧರ್ಮ ಘೋಷಿಸುವ 'Love thy neighbour' ಎಂಬ

ನೀತಿಯಷ್ಟು ಸರಳ ಆಗಿಬಿಡಬಹುದು. Abstract painting ಮತ್ತು ಪರಕೀಯ ಪ್ರಜ್ಞೆ ನಡುವೆ ವ್ಯತ್ಯಾಸ ಕಾಣಸದಿರಬಹುದು. Demoralising ವಾತಾವರಣದಲ್ಲಿ ಪರಕೀಯ ಪ್ರಜ್ಞೆ ಲೇಖಕನಲ್ಲಿ ಮೂಲಭೂತ ವಿಷಣ್ಣತೆಯನ್ನು ಹುಟ್ಟು ಹಾಕುತ್ತದೆ. ಕಾಳಿದಾಸ ; ಟಾಲ್‌ಸ್ಟಾಯ್ : ಲಾರೆನ್ಸ್‌ರಂಥ ದಾರ್ಶನಿಕರಲ್ಲಿ ಕಂಡು ಬರುವಂಥ ವಿಷಣ್ಣತೆ ಅಲ್ಲದೆ ಲೇಖಕನೊಳಗಿನ ತೀವ್ರತೆ Createv myth ಆದಾಗ ಉಂಟಾಗುವಂಥ Ethical mode ರೀತಿಯದ್ದು. ಬರವಣಿಗೆಯ ಪ್ರಧಾನ ಸತ್ವ ಅನುಭವ ದ್ರವ್ಯದ ಸಾಂದ್ರತೆಯ ಮೂಲಕ ಬಾರದಿದ್ದಾಗ ಅತಿ ಶಿಷ್ಟತೆ (Sophisticatad) ವಿಷ್ಣ್ಣತೆ ಪರಕೀಯ ಪ್ರಜ್ಞೆಗಿಂತ ಬೇರೆ ಏನೂ ಅಲ್ಲ.

ಸಾಹಿತ್ಯದ ನಿರೀಕ್ಷಿಕನ : ಶೋಧಕನ : ನಿರೂಪಕನ ನಿಲುವಿನ ಪ್ರಧಾನ ಲಕ್ಷಣ ವಾದ ನಿರರ್ಥಕತೆ ಪರಂಪರಾಗತ ಮೌಲ್ಯವನ್ನು ಶೋಧಿಸುವಾಗಿನ ಅಂತಿಮ ರೂಪ. ಲಾರೆನ್ಸ್‌ನ Women in love ಗುಡ್ರೂನ್ ಮತ್ತು ಝೆರಾಲ್ಡರ ಹಿಂಸಾತ್ಮಕ ಪ್ರೇಮದ ಸ್ಥಾಯಿ ಭಾವವೇ ಇಂಥ ನಿರರ್ಥಕತೆ. ಮನುಷ್ಯನನ್ನು ಕೃತಿ ಆಯಾಮ ದೊಳಗೆ Concept ನ ಸಂಕೇತವಾಗಿ ನೋಡದಿದ್ದಾಗ ಇಂಥ ನಿರರ್ಥಕತೆ ಹುಟ್ಟು ತ್ತದೆ. ಇದರಿಂದಾಗಿಯೇ ಟಾಲ್‌ಸ್ಟಾಯ್ Anna Karenina ದಲ್ಲಿ ವ್ರಾಂಸ್ಕಿ ; ಕಿಟ್ಟಿ ; ಲೆವಿನ್ ಇಂಥ ಪಾತ್ರಗಳ ಮೂಲಕ ಬದುಕನ್ನು ಸತ್ವದ ಒರೆಗಚ್ಚಿ ನೋಡಲು ಸಾಧ್ಯವಾಯಿತು. ಲಾರೆನ್ಸ್‌ನ ಕಾದಂಬರಿಗಳಲ್ಲಿ ಬರುವ ಆದರ್ಶದ ಪ್ರಸರುಕ್ತಿ ಟಾಲ್‌ಸ್ಟಾಯ್‌ರಂಥ ಮಹಾನ್ ಲೇಖಕರಲ್ಲಿ ಕಡಿಮೆ ಇರುವುದಕ್ಕೆ ಇದೇ ಕಾರಣ ವಿರಬೇಕು. ವಾಸ್ತವದ ಗ್ರಹಿಕೆ ಮತ್ತು ಆಲೋಚನಾಕ್ರಮದ ಅಂತರ ಹೆಚ್ಚಾದಾಗಲೂ ನಿರರ್ಥಕತೆ ನಿರ್ಧಿಷ್ಟ ಪದಾರ್ಥಗಳ ವರ್ಣನಾ ರೂಪದಲ್ಲಿ ಕಾಣಿಸಬಹುದು.

ಜೀವನದ Elemental ಸಂಗತಿಗಳೊಡನೆ ಮುಖಾಮುಖಿಯಾದಾಗ ನಿಯಂತ್ರಣದಲ್ಲಿಲ್ಲದ ಶಕ್ತಿಗಳ ವಾಸ್ತವದ ಅರಿವಾಗುತ್ತದೆ. ಈ ಅರಿವು ಲೇಖಕನ ಮನಸ್ಸಿನ ಅಮೂರ್ತತೆಯನ್ನು ಮತ್ತು ಈ ಅಮೂರ್ತತೆಯನ್ನು ನಿರ್ಣಾಯಕ ರೀತಿ ಯಲ್ಲಿ ಭಾಷೆಯ ನಿರಂತರತೆಯ ಮೂಲಕ ಸಾಕ್ಷಾತ್ಕಾರಗೊಳಿಸುವಲ್ಲಿ ಒದಗುವ ಗೊಂದಲವೇ ಮತ್ತೊಂದು ಅರ್ಥದ ಏಕಾಂಗಿತನ. ಇದರ ಮೂಲ ದ್ರವ್ಯ ಅನಂತತೆಯ ಬೇಸರವಲ್ಲೂ ಇರಬಹುದು. ಥಾಮಸ್ ಹಾರ್ಡಿಯ ನಾಯಕ ಹೆಂಚರ್ಡಿಯಲ್ಲೂ ; ಲಾರೆನ್ಸ್‌ನ I am free as the rooted tree is tree ಎಂಬ ಮಾತಿನಲ್ಲೂ ನಿಗೂಢವಾಗಿ ಅಡಗಿರುವ ಏಕಾಂಗಿತನ ತುಂಬ ಅರ್ಥಗರ್ಭಿತವಾಗಿದೆ. ಜೀವಂತ

ಅಸದ ಮೌಲ್ಯಗಳ ಚೌಕಟ್ಟಿನಿಂದ ಹೊರಬಂದಾಗ ಕ್ರಮೇಣ ಕಾಣಿಸಿಕೊಳ್ಳುವ ನಿರ್ದಿಷ್ಟ ತನದೇ ಏಕಾಂಗಿತನವೆಂದು ಅಭಿಪ್ರಾಯ ಪಡುವೆ. Demoralising ವಾತಾವರಣದಲ್ಲಿ ಈ ಏಕಾಂಗಿತನ misfit ಆಗುತ್ತದೆ. ಮಾನವನ ವೈಚಾರಿಕ ಹಾಗೂ ಅಭಿವೃತ್ತಿಗಳ (Attitudes) ಪ್ರಪಂಚದಲ್ಲಿ ಮರುಹುಟ್ಟು ಪಡೆದ ಏಕಾಂಗಿತನಕ್ಕೆ ಮಾತ್ರ ವಿವೇಚನಾಶಕ್ತಿ (Reason) ಮತ್ತು ನೈತಿಕ ಪ್ರಜ್ಞೆ ಇದ್ದು ಭಾವಾವೇಶ (Passion) ದ ಪಾತ್ರ ಕಡಿಮೆ ಇರುತ್ತದೆ. ಪ್ರಸಿದ್ಧ ಮನಶ್ಶಾಸ್ತ್ರಜ್ಞ ಆಲ್ಫ್ರೆಡ್ ಎಡ್ಲರ್ ಪ್ರತಿಪಾದಿಸಿರುವ ಕೀಳರಿಮೆ (Inferiority complex) ಸಿದ್ಧಾಂತ ಒಂಟಿತನದಿಂದ ಪ್ರೇರಿತಗೊಂಡಂತದ್ದು. ಈ ಹಂತದಲ್ಲಿಯೇ ಸಾಹಿತಿ ತನ್ನ ಭಾವಸ್ಥಿತಿ (Moodes) ಯನ್ನು ವೈಚಾರಿಕವಾಗಿಟ್ಟುಕೊಳ್ಳುವುದು ಸಾಧ್ಯವಾಗುವುದು.

ಆದರೆ..

ಎಡಪಂಥೀಯ ವಿಚಾರಧಾರೆಗೆ ಬದ್ಧನಾಗಿ ಬರೆಯುವ ಲೇಖಕ ತಾನು ಬದುಕುವ ಸಮಾಜದೊಂದಿಗೆ ಬರಹದ ಮೂಲಕ ಕಲಾತ್ಮಕ ಸಂಬಂಧ ಸ್ಥಾಪಿಸಿಕೊಳ್ಳುತ್ತಾನೆ. ಬರೀ ಜಾಗೃತಾವಸ್ಥೆಯಲ್ಲಿ ಬದ್ಧನಾಗಿದ್ದರಷ್ಟೆ ಸಾಲದು. ಅಜ್ಞಾತ ಸುಪ್ತಪ್ರಜ್ಞೆಯ ಬುದ್ಧಿ ಪ್ರಮಾಣದಲ್ಲೂ ಬದ್ಧತೆಗೆ ತೊಡಕನ್ನುಂಟು ಮಾಡುವ ಸಂದಿಗ್ಧತೆಗಳು (Ambiguities) ಇರಬಾರದು. ದೈಹಿಕ ಮತ್ತು ಮಾನಸಿಕ ಅಂತರ್ರಚನೆ (Texture) ಮನುಷ್ಯನೊಳಗಿನ ಮನುಷ್ಯನನ್ನು ಹುಡುಕುವ ದಿಸೆಯಲ್ಲಿ ಸಮೀಕರಣಗೊಂಡಿರಬೇಕೆಂದು ನನ್ನ ಭಾವನೆ. ಮನುಷ್ಯನ ಆಳ ನಿರಾಳಗಳನ್ನರಿಯುವ ಪ್ರತಿಭೆ Anna Karenina ದಂಥ ಅಪೂರ್ವ ಪಾತ್ರ ಸೃಷ್ಟಿಸಿದ ಟಾಲ್‌ಸ್ಟಾಯ್‌ರಂಥವರ ನಿಜವಾದ ಸ್ವತ್ತು ಇದೇ ಕಾರಣಕ್ಕಾಗಿ... ಜೀವನದ Elemental ಸಂಗತಿಗಳೊಡನೆ ಸದಾ ಮುಖಾಮುಖಿಯಾಗುವ ತೃತೀಯ ಜಗತ್ತಿನ ತೃತೀಯ ಶಕ್ತಿಯ ಕೇಂದ್ರೀಕರಣಕ್ಕಾಗಿ ಬಂಜರು ವ್ಯವಸ್ಥೆಯನ್ನು ನವನಾಗರೀಕತೆಯ ಸಮ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಬದಲಾಯಿಸಲು ಯೋಚಿಸುವುದು. ಬದುಕುವ ಮತ್ತು ಕೆಳಗಿನ ಸ್ತರದಲ್ಲಿ ಬದುಕುತ್ತಿರುವ ಮಾನವ ಸಮುದಾಯವನ್ನು ಅರ್ಥಮಾಡಿಕೊಳ್ಳಲು ಯಾವ ಮಾಪನಗಳನ್ನು ಉಪಯೋಗಿಸುತ್ತಾರೆಂಬುದರ ಮೇಲೆ ಅಂಥಾ ಲೇಖಕನ ಬದ್ಧತೆಯ ಅಸ್ತಿತ್ವ ಅವಲಂಬಿಸಿರುತ್ತದೆ. ಬದ್ಧನಾಗಿ ಬರೆಯುವ ಲೇಖಕನಿಗೆ ಅಭಿವ್ಯಕ್ತಿ (Expression) ಮತ್ತು ಸಂವಹನ (Communication) ಗಿಂತ ಮುಖ್ಯವಾದದ್ದು ಸಮಾಜದ ಉತ್ಪಾದಕ ಶಕ್ತಿಗಳಿಗೆ ಅಗತ್ಯವಾದ ಪ್ರೇರಕ ಶಕ್ತಿ

ಯನ್ನು ಬಿಂಬಿಸುವುದು ಅಥವ ಒಳಗೊಳ್ಳುವುದು. ಆಗ ಮಾತ್ರ ಕವಿ ತನ್ನ ಭ್ರಮಾತ್ಮಕ ಆವರಣ ಕಳಚಿಕೊಂಡು ಬೂರ್ಶ್ವಾ ವೈರುದ್ಧದ ಎದುರು ಕ್ರಾಂತಿಶೀಲನಾಗುತ್ತಾನೆ. ಆಗಮಾತ್ರ ಗುಲಾಮಿ ಬದುಕು ಅಥವ ವ್ಯವಸ್ಥೆ ವಿರುದ್ಧ ಪತ್ರನಿಷ್ಟೆ ಹಾಗು ವೈಯಕ್ತಿಕತೆಗಳನ್ನು ಮೀರಿನಿಂತು ಶ್ರಮ ಜೀವಿಗಳ ಮನಸ್ಸಿನಲ್ಲಿ ಆವಿಷ್ಕಾರಗೊಳ್ಳುವುದು. ಹೆಚ್. ಇ. ಬೇಟ್ಸ್ ತನ್ನ Mind and nature ಪುಸ್ತಕದಲ್ಲಿ ಸೃಜನಶೀಲ ಮನಸ್ಸಿಗೆ ಸಮಸ್ಯೆಯಾಗುವ ಆತಂಕಗಳನ್ನು ವಿವರಿಸಿದ್ದಾನೆ.

ಈ ಮೇಲ್ಕಾಣಿಸಿದ ಆಲೋಚನಾ ವಿಧಾನದಲ್ಲಿಯೇ ಕಾವ್ಯ ಜನಸಾಮಾನ್ಯನಿಗೆ ಅರ್ಥವಾಗಬಾರದೆಂದು ವಾದಿಸುವವರ ಕಲಾಸೃಷ್ಟಿ ಮನೋ ವೈಜ್ಞಾನಿಕವಾಗಿ ವ್ಯವಹರಿಸುವ ಸಾಮಗ್ರಿ ಏತರೆಂದಾಗಿದೆ ಎಂದು ಅರ್ಥಮಾಡಿಕೊಳ್ಳುವುದು ನಾನು. ಇಂಥವರು ಅನುಭವಗಳಿಂದಾವೃತ ವಿಶ್ವವನ್ನು ಪ್ರವೇಶಿಸಲಾರರಲ್ಲದೆ ಮಾನವೀಯ ಸೀಮೆಗಳನ್ನು ಅರ್ಥಮಾಡಿಕೊಳ್ಳಲಾರರು. ಸಾಹಿತ್ಯ ಸಾಹಿತಿಯಾದವನ ವೈಯಕ್ತಿಕ ಅನುಭವದಿಂದ ನಿಷ್ಪೃತ್ತಿಗೊಳ್ಳಬೇಕೆಂದು ನನ್ನ ಈ ಲೇಖನದ ಹಠವಲ್ಲ. ಪ್ರತಿಯೊಬ್ಬ ಮಾನವನಿಗೂ ಒಂದು ನಿಕಟವೂ ವೈಯಕ್ತಿಕವೂ ಆದ ಅನುಭವ ಇದೆ ಎಂದ ಮಾತ್ರಕ್ಕೆ ಸಾಹಿತ್ಯ ಸೃಷ್ಟಿಯನ್ನು ವೈಯಕ್ತಿಕ ಸಂಗತಿಯ ಮಟ್ಟಕ್ಕಿಳಿಸುವ ಔಚಿತ್ಯವನ್ನು ಪ್ರಶ್ನಿಸುವ ಅಗತ್ಯ ತುಂಬ ಇದೆ. ಸಾಹಿತಿ ತನ್ನ ಅಸ್ಪಷ್ಟ ತಿಳುವಳಿಕೆಗಳಿಗೆ ಸಾಮಾಜಿಕ ಸ್ಥಿರ ಸ್ವರೂಪ ಕೊಡಬೇಕೆಂಬ ಪ್ರಯತ್ನಗಳು ಇಂದು ನಿನ್ನೆಯವಲ್ಲ. ಹಳೆಯ ಶಿಲಾಯುಗದ ರೋಡೆಷಿಯನ್ ಬಂಡೆ ಚಿತ್ರಗಳಲ್ಲಿ ಅಮೂರ್ತ ವಿನ್ಯಾಸದ ಮೂಲಕ ವ್ಯಕ್ತಪಟ್ಟಿವೆ. ಆದರೆ ಬವ ತೆಯನ್ನು ಪೂರ್ಣ ಪ್ರಮಾಣದಲ್ಲಿ ಒಳಗೊಳ್ಳಲು ಒಂದು ವರ್ಗದ ಸಾಹಿತಿಗಳಿಗೆ ಇರುವ ತೊಂದರೆ ಮಾತ್ರ ಸ್ಪಷ್ಟ. ಅನುವಂಶಿಕತೆಯ ಶಕ್ತಿಗಳಿಂದ ರೂಪಿತವಾದ ಒಂದು ನಿರ್ದಿಷ್ಟ ಮನೋವರ್ಗದಿಂದ ಅವರ ಸಾಮಾಜಿಕ ಪ್ರಜ್ಞೆ ಬೆಳೆದಿರುವುದು. ಇಂಥವರ ದೇಹದ ಭೌತಿಕ ರಚನೆಯಲ್ಲಿ ವಿಕಾಸದ ಪೂರ್ವ ಪಟ್ಟಿಗಳ ಕುರುಹುಗಳೇ ಇಲ್ಲ. ಚಿತ್ತರೂಪ ತನ್ನ ರಚನೆಯಲ್ಲಿ ವಿಕಾಸ ನಿಯಮಕ್ಕನುಗುಣವಾಗಿ ಮಾನಸಿಕ ಸರಕುಗಳನ್ನು ಸರ್ವಕಾಲಿಕ ಸತ್ಯವನ್ನು ಸಾಮಾಜಿಕವಾಗಿ ಆರೋಪಿಸಲಾರದ ಇವರು ಆಧುನಿಕ ವಸ್ತ್ರಧಾರಣೆ ಮಾಡಿದ ಪೌರಾಣಿಕ ಪ್ರತಿಮೆಗಳಷ್ಟೆ.

ಕುಂಡಜ್ಜನ ಪರ್ಸಂಗ

—ಕೃಷ್ಣಮೂರ್ತಿ ಹನೂರು

ಕುಂಡಜ್ಜ ಹುಟ್ಟಿದ ಕಾಲಕ್ಕೆ ಅವನ ತಂದೆತಾಯಿಗಳು ಕೊಂಡಯ್ಯ ಎಂದು ಹೆಸರಿಟ್ಟರಾದರೂ ಹುಡುಗನು ಬೆಳೆಯುತ್ತ, ಊರವರೆಲ್ಲ ಅವನನ್ನು ಕುಂಡಯ್ಯ ಕುಂಡಯ್ಯ ಅಂತಲೇ ಕರೆದರು. ಯಾಕೆಂದರೆ ಇವನು ಬಲದಿಕ್ಕಿಗೆ ಇರುವವರನ್ನು ಎಡದಿಂದಲೂ, ಎಡದಿಕ್ಕಿಗೆ ಇರುವವರನ್ನು ಬಲದಿಂದಲೂ ನೋಡುತ್ತಿದ್ದನು. ಆದ್ದರಿಂದ ಇವನ ಹೆಸರು ಕೊಂಡಯ್ಯ ಇರಲಾರದು, ಕುಂಡಯ್ಯನೇ ಇರಬೇಕೆಂದು ಹಾಗೆ ಕರೆದರು.

ವಯಸ್ಸಾದ ಮೇಲೆ ಯಾರಾದರೂ ತಮಾಷೆಗೆ ಕುಂಡಯ್ಯನನ್ನು, 'ಕಣ್ಣು ಯಾಕಯ್ಯ ವಂಡ್ರಗಣ್ಣಾಯ್ತು'' ಎಂದು ಕೇಳಿದರೆ ಅದಕ್ಕೆ ಅವನು ಒಂದು ಪರ್ಸಂಗವನ್ನೇ ಹೇಳುತ್ತಿದ್ದ : ''ಸ್ವಾಮಿ, ನಾನು ತುಂಬಿದ ಪ್ರಾಯಸ್ಥನಾಗಿ ಗಂಟಲದನಿ ಒಡೆದು, ಚಿಗುರು ಮೀಸೆ ಮೂಡುವ ಕಾಲದಲ್ಲಿ ಲಗ್ನ ಆಗಬೇಕು ಅಂತ ರೊಟ್ಟಿಬುತ್ತಿ ಕಟ್ಟಿಕೊಂಡು ಊರು ಕೇರಿ, ಕಾಡು, ಮೇಡು ಅನ್ನದೆ ಹೊರಟೆ. ಅಲ್ಲೊಂದು ಪಟ್ಟಣ ಸಿಕ್ಕಿತು. ಆ ಪಟ್ಟಣದಲ್ಲಿ ಒಬ್ಬಳು ಸೂಳೆ. ಅವಳು ಊರ ಮುಂದೆ ಒಂದು ನಗಾರಿ ಮಡಗಿದ್ದಳು. ಆ ನಗಾರಿಗೆ ಒಂದೇಟು ಹೊಡೆದವನು ಒಂದು ಸಾವಿರ ಕೊಟ್ಟು ಒಂದು ರಾತ್ರಿ ಅವಳನ್ನು ಊಟಮಾಡಬಹುದಾಗಿತ್ತು. ಎರಡೇಟು ಹೊಡೆದವನು ಎರಡು ಸಾವಿರ, ಎರಡು ರಾತ್ರಿ ಹೀಗೆ. ಸರಿ, ಲೋಕದ ಮೇಲಿನ ಸಿರಿವಂತರು, ರಾಜನ ಮಕ್ಕಳು, ಮಂತ್ರಿ ಮಕ್ಕಳು ಎಲ್ಲ ಅವಳ ತಾವು ಹೋಗುತ್ತಿದ್ದರು. ಆ ಮಾರ್ಗವಾಗಿ ಹೋದಂಥ ನಾನು ಅದು ಸೂಳೆ ನಗಾರಿ ಅಂತ ಗೊತ್ತಿಲ್ಲದೆ, ಮೊಣ್ಣೆ ತಗಂಡು ಢಮಢಮ ಅಂದು ಬಾರಿಸಿಬಿಟ್ಟೆ. ಅಷ್ಟಿಷ್ಟು ಇಷ್ಟು ಏಟು ಹೊಡೆದಂಥ ಧನಿಕ ಇನ್ನೆಂಥವನಿರಬಹುದು ಅಂದು ಊರ ಜನವೆಲ್ಲ ಬಂದು ನನ್ನ ನೋಡಿ ನಗಾಡಿದರು. ಅಷ್ಟು ಹೊತ್ತಿಗೆ, ಅವಾ ಅಷ್ಟು ಏಟು ಹೊಡೆದು ನನ್ನ ಭೋಗ ಮಾಡಕೆ ಬರುತ್ತಾ ಇರಪ್ಪರ ನಾನೇ ಹೋಗಿ ಆರತಿ ಹಿಡಿದು ಕರಕೊಂಡು

ಕೃಷ್ಣಮೂರ್ತಿ ಹನೂರು, ಜಾನಪದ ವಿಭಾಗ, ಏಷ್ಯನ್ ಅಧ್ಯಯನ ಸಂಸ್ಥೆ,
10ನೇ ಪೂರ್ವ ಬೀದಿ, ತಿರುವಾನ್ಮಿಯೂರ್, ಮದರಾಸು–600 041.

ಬರುವುದು ಸರಿ ಅಂದು ಆ ನಾಯಕಸಾನಿ ಬಂದಳು. ಬಂದು ನನ್ನ ನೋಡಿದ್ದೇ ಅವಳಿಗೆ ಎಲ್ಲಿಲ್ಲದ ರುದ್ರಕೋಪ ಬಂತು. ಆ ಕಣ್ಣಿಗೊಂದು ಈ ಕಣ್ಣಿಗೊಂದು ಬಾರಿಸಿದಳು. ಆಗಲೀಗ ಎಡಗಡೆ ಕಣ್ಣು ಬಲಕ್ಕೆ. ಬಲಗಡೆ ಕಣ್ಣು ಎಡಕ್ಕೆ ಬಂತು,...

ಮೇಲೆ ಹೇಳಿದ ಪ್ರಸಂಗ ನೋಡಿದರೆ ಕುಂಡಜ್ಜ ಒಳ್ಳೆಯ ಕಥೆಗಾರನೇ ಇರಬಹುದು ಎನಿಸುತ್ತದೆ, ಅನ್ನಿಸುವುದೇನು ಬಂತು, ಆ ಮಾತು ನಿಜ. ಕುಂಡಯ್ಯ ಹುಟ್ಟುವುದಕ್ಕೆ ಮೊದಲು ಅವನ ತಂದೆ ತಾಯಿಗಳು ಸ್ವಾಮಿ ಕಾರಯ್ಯನು ತಮಗೆ ಒಂದು ಗಂಡು ಸಂತಾನವನ್ನು ಕರುಣಿಸುವುದಾದರೆ, ಆ ಮುಂದಿನ ಯಾವುದಾದರೂ ಒಂದು ವರ್ಷ ಸ್ವಾಮಿಯ ಗುಡ್ಡಕ್ಕೆ ಯಾತ್ರೆ ಬಂದು ಗಂಡ ಹೆಂಡತಿಯರಿಬ್ಬರೂ ತಲೆಮುಡಿ ಕೊಡಿಸಿ, ಉರುಳು ಸೇವೆ ಮಾಡಿ ಬರುವುದಾಗಿ ಹರಕೆ ಕಟ್ಟಿಕೊಂಡಿದ್ದರು. ಅದರಂತೆ ಕುಂಡಯ್ಯ ಹುಟ್ಟಿದ ಏಳನೇ ವರ್ಷದಲ್ಲಿ ಹರಕೆ ತೀರಿಸಿ ಬರಲು ಹೊರಟರು. ಆ ವರ್ಷ ಕಾರಯ್ಯನ ಗುಡ್ಡದ ಬುಡದಲ್ಲಿ ಜನಸಮೂಹ ಬಹಳ ಸೇರಿತ್ತು. ಜಾತ್ರೆ ಶ್ರಾವಣದಲ್ಲಾದುದರಿಂದ ಮಳೆಯ ತಾಪತ್ರಯ ಬೇರೆ. ಐದು ದಿನಗಳ ಜಾತ್ರೆಯಲ್ಲಿ ಮೂರು ದಿನ ಮಳೆ ಹೊಡೆಯಿತು. ಜಾತ್ರೆಯ ಮೈದಾನದ ಕೊಳೆ, ಕಸಕಡ್ಡಿ, ಮಲಮೂತ್ರ ಎಲ್ಲ ಮಳೆಯ ನೀರಿಗೆ ಕೊಚ್ಚಿ ಬಂದು ಗುಡ್ಡದ ಬುಡದ ಕೆರೆಗೆ ಸೇರಿಕೊಂಡಿತು. ಅದೇ ನೀರ ಬಳಸಿ ಮೈ ಕೈ ತೊಳೆಯಲಾಗಿ. ಬಹಿರ್ದೇಶ ಶುದ್ಧಿ ಮಾಡಲಾಗಿ ಆಹಾ ಓಹೋ ಅನ್ನುವುದರಲ್ಲಿ ಕಾಲರಾ ಹತ್ತಿಕೊಂಡಿತು. ನೂರಾರು ಜನ ನಿಂತ ನಿಂತಲ್ಲೇ ಕುಂತ ಕುಂತಲ್ಲೇ ವಾಂತಿ ಭೇದಿಯಾಗಿ ಭೂಮಿಗೆ ಕೈಕಾಲು ಚಾಚಿದರು.

ಹೀಗಾಗಿ ಕುಂಡಯ್ಯನ ಅಪ್ಪ ಅವ್ವಂದಿರೂ ಹೋದಲ್ಲೇ ಹೋಗಿ. ಇತ್ತ ಹುಡುಗ ಒಬ್ಬನೇ ಆದ. ಏಳನೇ ವಯಸ್ಸಿನಿಂದ ಹತ್ತು ಹನ್ನೆರಡರವರೆಗೆ ಕುಂಡಯ್ಯ ಅವರಿವರ ಮನೆಯ ಹೊಸ್ತಿಲು. ಕೊಟಿಗೆ. ತ್ವಾಟ ತುಡಿಕೆಗಳಲ್ಲಿ ಬೆಳೆದ. ಪ್ರಾಯಕ್ಕೆ ಸಲ್ಲುತ್ತಿದ್ದಂತೆ ಊರವರ ದನಗಳನ್ನು ಮೇಯಿಸುವ ಕಾಯಕ ಹಿಡಿದ. ಆ ಮೇಲಾ ಮೇಲೆ ಕುಂಡಯ್ಯ ಊರೊಳಗೆ ಬೆಳೆದುಕ್ಕಿಂತ ಕಾಡಲ್ಲಿ ಬೆಳೆದದ್ದೇ ಹೆಚ್ಚು.

ಕಾಡಿನಿಂದ ಹೈದ ಬಂದನೆಂದರೆ ತಾನೇ ಮುದ್ದೆ ತಿರುವಿಕೊಂಡು. ಉಂಡು ಒಬ್ಬನೇ ಗುಡಿಸಿಲೊಳಗೆ ಮಲಗಲು ಬೇಸರಿಕೆಯಾಗಿ ಅವರಿವರ ಜಗುಲಿ ಸೇರುತ್ತಿದ್ದ. ಅಲ್ಲಿ ನಿದ್ದೆ ಬರದ ಮುದುಕರು, ಪೋಟರೊಂದಿಗೆ ಮಲಗಿ ರಾತ್ರಿಯೆಲ್ಲ ಪ್ರಸಂಗ ಕೇಳುವುದು, ಒಡಪು ಒಡಚುವುದು ಮಾಡುತ್ತಿದ್ದ. ಕೊನೆಗೆ ಅವನೊಬ್ಬನೇ ಆದಾಗ ತನಗೆ ತಾನೇ ಮಾತಾಡಿಕೊಳ್ಳುವುದೂ ರೂಢಿಯಾಗಿ ಬಿಟ್ಟಿತ್ತು. ಹೀಗೆ ಬೆಳೆದ

ಕುಂಡಯ್ಯನಿಗೆ ಲಗ್ನ ಮಾಡುವವರೂ ಕಾಣದೆ. ಅವನಂತೆಯೇ ದಿಕ್ಕಿಲ್ಲದೆ ನಿಂತಿದ್ದ ಕಾಡಮ್ಮನನ್ನು ಅವನು ಕೂಡಿದಾಗ ವಯಸ್ಸು ನಲವತ್ತು ದಾಟುತ್ತಿತ್ತು.

ಈಚೀಚೆಗೆ ಕುಂಡಜ್ಜನಿಗೆ ಕಿವಿ ಕೇಳದೆ, ಕಣ್ಣು ಕಾಣದೆ, ಕೈಕಾಲೂ ಸಹ ಬಿದ್ದು ಹೋಗಿ, ಊರವರ ಕೆಲಸಗಳನ್ನು ಆಗಲಿ ದನ ಮೇಯಿಸುವುದೇ ಆಗಲಿ ಬಿಟ್ಟು ದಿನವೆಲ್ಲ ಅವನು ಗುಡಿಸಲ ಮುಂದೆಯೇ ಕೂರುವಂತಾಗಿದೆ. ಇಷ್ಟಾದರೂ ಕುಂಡಜ್ಜನಿಗೆ ಹೇಳುವವರೂ, ಕೇಳುವವರೂ ಯಾರೂ ಇಲ್ಲದಂತಿಲ್ಲ. ತಿಪ್ಪಮ್ಮನೆಂಬ ಮಗಳೂ ಅವಳಿಗೆ ಹುಟ್ಟಿದ ಸಿದ್ದಮಲ್ಲು, ಸಣ್ಣನಿಂಗು ಎಂಬಿಬ್ಬರು ಮೊಮ್ಮಕ್ಕಳೂ ಇರುವರು. ಮಗಳು ಕೂಲಿನಾಲಿಗೋ, ಸೌದೆಸೊಪ್ಪಿಗೋ ಹೋಗಿಬಿಟ್ಟರೆ ಮೊಮ್ಮಕ್ಕಳು ಶಾಲೆಗೆ ಹೋಗಿಬಿಡುವುವು. ಇದರಿಂದಾಗಿ ಕುಂಡಜ್ಜ ಗುಡಿಸಲ ಮುಂದೆ ಒಬ್ಬನೇ ಆಗಿ, ಹುಟ್ಟಿದ ಸೂರ್ಯ ಪರಮಾತ್ಮನ ಮುಳುಗುತ್ತಲೇ ಇರಲಿಲ್ಲ. ಹೀಗೆ ಹೊತ್ತು ಬಡಪಟ್ಟಿಗೆ ಹೋಗದ ಕಾರಣ ಕುಂಡಜ್ಜ, ಶಾಲೆಗೆ ಹೋಗದೆ ಕೇರಿಯಲ್ಲೇ ಆಡುವ ಹೈಕಳ ಕರೆದು ತಾನು ಊರವರ ದನಗಳನ್ನು ಕಾಯಲು ಹೋಗುತ್ತಿದ್ದ ಸಮಯದಲ್ಲಿ ಹುಲಿ ಕಿರುಬಗಳು ಅವುಗಳ ಮೇಲೆ ಬೀಳ ಬಂದಲ್ಲಿ ಮಿಕಗಳ ಬಾಯಿಂದ ಕಾಲ್ನಡೆಗಳನ್ನು ಹೇಗೆ ತಪ್ಪಿಸಿ ತರುತ್ತಿದ್ದನೆಂಬ ಸಂಗತಿಗಳನ್ನು ಬಣ್ಣ ಬಣ್ಣವಾಗಿ ಬಣ್ಣಿಸುತ್ತಿದ್ದ. ಮಕ್ಕಳಂತೂ ಕುಂಡಜ್ಜನ ಪ್ರಸಂಗಗಳನ್ನು ಬಿಟ್ಟ ಬಾಯಿ ಬಿಟ್ಟೇ ಕೇಳುತ್ತಿದ್ದವು.

(2)

ಕುಂಡಜ್ಜ ಅವತ್ತೂ ತನ್ನ ಗುಡಿಸಲ ಮುಂದೆ ಕೂತಿದ್ದ. ಮಂಡಿಯ ಮೇಲೆ ರೂಪಾಯಗಲದ ವ್ರಣವಿದ್ದು ಅದರ ಮೇಲೆ ಹತ್ತಾರು ನೊಣಗಳು ಆನಂದದಿಂದ ಮುಲುಗುಟ್ಟುತ್ತಿದ್ದವು. ಮುದುಕನೂ ಸಮಯ ಕಾಯ್ದು ರಪ್ಪನೆ ಕೈ ತಟ್ಟುತ್ತಿದ್ದ. ಆದರೆ ನೊಣಗಳು ಅವನ ಮಾಮೂಲಿ ಉಪಾಯಕ್ಕೆ ದಕ್ಕದೆ ಗೊಳ್ಳೆಂದು ನಗುತ್ತ ಮೇಲೆದ್ದು ಕುಣಿದಾಡುತ್ತಿದ್ದವು. ಯಾರಾದರೂ ದಾರಿಹೋಕರು ಇದನ್ನೆಲ್ಲ ನೋಡಿ ಸುಮ್ಮಗಾದರೂ, "ಇದೇನ್ ಕುಂಡಜ್ಜ ಮಂಡಿನ್ಯಾಲೆ?" ಅಂದರೆ, "ಅಯ್ಯಾ ರೂಪಾಯಿ ಬಿದ್ದಿ. ಜೇಬಿಲ್ಲ. ಜೇಬಿರಾಂಥ ಸರ್ಟಿಲ್ಲ. ಅದ್ಕಿಂದ ರೂಪಾಯ್ನ ಮಂಡಿ ಮ್ಯಾಲೆ ಮಡಿಕಂಡಿನ್ನಿ" ಅನ್ನುತ್ತಿದ್ದ. ಆಗ್ಗೆ ಅದನ್ನು ಕೇಳಿದವರು ನಗದೇ ಮುಂದೆ ಹೋಗುತ್ತಿರಲಿಲ್ಲ.

ಹಾಗೆ ಅವತ್ತು ನೊಣ ಬಡಿದೂ ಬಡಿದೂ, ಕೂತೂ ಕೂತೂ, ತನಗೆ ತಾನೇ ಮಾತಾಡಿಕೊಂಡು ಸಾಕಾಗಿ ಕುಂಡಜ್ಜ ಕೂತೇ ಇದ್ದ. ಹೊತ್ತು ನೆತ್ತಿಯಲ್ಲಿರುವಾಗಲೇ

ಮಗಳು ತಿಪ್ಪವ್ವ ರಾತ್ರಿಗೆ ಒಲೆ ಹೊತ್ತಿಸಲು ಒಂದು ಕಡ್ಡಿಯು ಸಿವುಡಿಲ್ಲವೆಂದು ಹೋಗಿದ್ದವಳು, ಹೊತ್ತು ಪಡುವಲಿಗೆ ಬಿದ್ದು ಕಣ್ಣು ಮುಚ್ಚುವುದೇ ಸರಿ ಅನ್ನುತ್ತಿದ್ದರೂ ಬಂದಿರಲಿಲ್ಲ. ಮಾಮೂಲಂತೆ ಕುಂಡಜ್ಜ ಗುಡಿಸಲ ಹಿಂದುಮುಂದಿನ ಮಕ್ಕಳ ಕರೆದ. ಮಣ್ಣೊಳಗೆ ಆಡುತ್ತಿದ್ದವು ಒಂದರ ಪೇಲೊಂದು ಸವಾರಿಯಲ್ಲಿ ಬಂದು, "ಅಜ್ಜೋ. ಅಜ್ಜೋ" ಅಂದು ಕವುಚಿಕೊಂಡವು. ಒಂದು ಹೈದನಂತೂ ಮಂಡಿಯ ಮೇಲೆ ಬಿದ್ದು ಬಿಟ್ಟಿತಾದ್ದರಿಂದ ಅದರ ಮುಸುಡಿಗೇ ವ್ರಣದ ಪಿಲ್ಕು ಮೆತ್ತಿಕೊಂಡಿತು. ಅಷ್ಟು ಹೊತ್ತಿಗೆ ಮಧ್ಯಾಹ್ನದ ಸ್ಕೂಲು ಮುಗಿಸಿ ಮೊಮ್ಮಕ್ಕಳು ಸಿವಮಲ್ಲು, ಸಣ್ಣನಿಂಗುವೂ ಬಂದವು.

ಮುದುಕನಿಗೆ ರವಸ್ಟು ಜೇಜಾರು ಕಳೆದು, "ಲೆಯ್ ಅಪ್ಪಯ್‌ಗೊಳಾ ಸುಮ್ ಸುಮ್ಗೆ ಕೂತು ಪರ್ಸಂಗ ಹಾಕಬೇಕು. ಮಧ್ಯ ಸದ್ದ್ಗಿದ್ದು ಏನಾರ ಮಾಡಿದರೋ ನಾ ಮಾತ್ರ ಸುಮ್ಗಿರವ್ನಲ್ಲ" ಅಂದು ಆಜ್ಞೆ ಮಾಡಿದನು. ಕುಂಡಜ್ಜನ ಮಾತನ್ನೂ ಕೇಳುತ್ತಿದ್ದವರು ಆ ಮಕ್ಕಳು ಮಾತ್ರವೇ ಆಗಿರುತ್ತಿದ್ದುದರಿಂದ ಅಜ್ಜನು ಅವರ ಮುಂದೆ ಜೋರಾಗಿಯೇ ಇರುತ್ತಿದ್ದ. ಯಾವಾಗ ಅಜ್ಜ ಪರ್ಸಂಗ ಹೇಳುತ್ತೇನೆಂದನೋ ಮಕ್ಕಳು ಸುತ್ತ ಒಂದಕ್ಕೊಂದು ತಬ್ಬಿ ಕೂತವು.

——ಇದೇ ಥರ ಕಾಡಿನೊಳಗೆ ದನಕರು ಮೇಯಿಸುತ್ತಿದ್ದಂಥ ವೇಳೆ. ಒಂದು ಹಸು ಗಬ್ಬ ಹಿಡಿದಿತ್ತು. ಈಯ್ದರೆ ಒಂದು ಬಿಂದಿಗೆ ಹಾಲು ಕರೆಯುವಂಥ ಹಸು. ಅದು ಮೇಯುತ್ತಿರುವಲ್ಲಿ ಹಿಂದಿನಿಂದ ಏಳುಪಟ್ಟಿನ ಪಟ್ಟೆ ಹುಲಿ ವಾಸನೆ ಹಿಡಿದುಕ ಬಂತು. ನಾನು ಯಾವಾಗ ಅದಕಂಡನೋ ಹೋದವನೋ ಹುಲಿ ಮುಂದೆ ಕೈಯ್ಯಲ್ಲಿದ್ದ ಬಡಿಗೆಯನ್ನೂರಿ ನಿಂತುಕೊಂಡೆ. ಹುಲಿ ಬಾಯೊಳಗಿನ ಬಾಕಿನಂಥ ಹಲ್ಲು ತೋರಿಸುತ್ತ. ಕಣ್ಣುಗಳಿಂದ ಕೆಂಡ ಉದುರಿಸುತ್ತ ರೌದ್ರಾವತಾರ ಮಾಡಿ ನಿಂತಿತ್ತು. ಮುರ್ನಾಕು ಕ್ಷಣ ಹಾಗೆ ನಿಂತುಕೊಂಡಿದ್ದ ಮಿಕ ಇದ್ದಕ್ಕಿದ್ದಂತೆ ಬಾಲವನ್ನು ನೆಲಕ್ಕೆ ಬಡಿದು ಛಂಗನೆ ಹಾರಿತು. ಆಗಲೀಗ ನನಗೂ ಭೂಮಿಗೂ ಋಣ ತೀರಿತು ಅಂದುಕೊಂಡರೆ. ನನ್ನ ಕೈಯ್ಯಲ್ಲಿದ್ದ ಮಾರುದ್ದದ ಬಡಿಗೆ ನೋಡಿ ಹೆದರಿ ಹುಲಿಯೇ ತಪ್ಪಿಸಿಕೊಂಡಿತ್ತು. ಯಾವಾಗ ಹಸುವನ್ನು ಹುಲಿಯ ಬಾಯಿಂದ ತಪ್ಪಿಸಿ ತಂದೆನೋ ಹಸುವಿನ ಯಜಮಾನರು 'ಕುಂಡಾ ಭೇಷ್" ಅಂದರು. ಹಾಗಂದು ಅವರದೊಂದು ಜೆಡ್ಡಿ ಇನಾಮು ಕೊಟ್ಟರು....

ಕುಂಡಜ್ಜ ಈ ಸಾಹಸ ಸಂಗತಿಯ ವರ್ಣಿಸುತ್ತಿರಬೇಕಾದರೆ ಅವನ ಇಬ್ಬರ ಮೊಮ್ಮಕ್ಕಳ ಧ್ಯಾನ ಮಾತ್ರ ಗುಡಿಸಲ ಕಡೆಗೆ ಇತ್ತು. ಯಾಕೆಂದರೆ ತೋರವಾಗಿದ್

ಕಂದು ಬಣ್ಣದ ಊರನಾಯಿಯೊಂದು ಗುಡಿಸಿಲ ಸುತ್ತ ಗಸ್ತು ಹೊಡೆದು ಒಳಗೆ ನುಗ್ಗುವ ಸಂಚು ಮಾಡುತ್ತಿತ್ತು.

ಕುಂಡಜ್ಜನ ಗುಡಿಸಲೆಂದರೆ ಅದು ಅವನು ಲಗ್ನವಾದ ಕಾಲದಲ್ಲಿ ಕಟ್ಟಿದ ಗುಡಿಸಲಾಗಿತ್ತು. ಉದ್ದಕ್ಕೂ ಊರವರ ದನ ಕಾಯ್ದು ಕಾಡಿನಲ್ಲೇ ಕಾಲ ತಳ್ಳಿದ್ದನಾದ್ದರಿಂದ ಅವನಿಗೆ ಸ್ವಂತ ಕಟ್ಟಡದಮೇಲೆ ಕೈಯಾಡಿಸಲು. ರಿಪೇರಿ ಮಾಡಲು ಸಮಯವೇ ಸಿಕ್ಕಿರಲಿಲ್ಲ. ಆದ ಕಾರಣ ಒಂದಂಕಣಕ್ಕೆ ಕಟ್ಟಿದ್ದ ಗುಡಿಸಲ ನಾಲ್ಕು ಗೋಡೆಯಲ್ಲಿ ಒಂದು ಪಾರ್ಶ್ವವು ಬಿದ್ದು ಅಲ್ಲಿಗೆ ತಡಿಕೆ. ಮಟ್ಟಾಳೆ. ಗೋಣಿಚೀಲ ಇತ್ಯಾದಿಗಳನ್ನು ಇಟ್ಟು ಮುಚ್ಚಲಾಗಿತ್ತು. ಹೀಗೆ ಗೋಡೆ ಬಿದ್ದು ತೇಪೆ ಹಾಕಿದಕಡೆ ನಾಯಿ ಕೂತು ಅಲ್ಲಿದ್ದ ಕಂಡಿಯನ್ನೇ ಗುರುಗಾಯಿಸಿ ನೋಡುತ್ತಾ ಇದ್ದಕ್ಕಿದ್ದಂತೆಯೇ ನೆಗೆದು ಒಳಸೇರಿತು.

ಪರ್ಸಂಗ ಕೇಳುತ್ತಿದ್ದ ಸಿವಮಲ್ಲು ಎದ್ದು ಬಂದವನೇ ಕಂಡಿಯಲ್ಲಿ ಕಣ್ಣಿಟ್ಟು ಸಣ್ಣಿಂಗನನ್ನು ಕರೆದ. ಇಬ್ಬರೂ ತಿರುಗಿ ಕಂಡಿಯಲ್ಲಿ ಕಣ್ಣಿಟ್ಟು ನೋಡಿದರು. ಒಳಗಣ ಅಡ್ಡಗೋಡೆಯ ಇತ್ತಕಡೆ ಎತ್ಮೊಲೆ. ಅದರ ಮೇಲೆ ಮಡಕೆ. ನಾಯಿ ಮಡಕೆಯ ಮುಚ್ಚಳ ಉದುರಿಸಿ ರಾಗಿ ಮುದ್ದೆಯನ್ನು ಕಡವಿ ಬಾಯಾಡಿಸುತ್ತಿತ್ತು. ಸಣ್ಣಸಿಂಗ ಅಲ್ಲೇ ಇದ್ದ ಬಿದಿರ ದೊಣ್ಣೆ ತೆಗೆದು ಕಂಡಿಗೆ ತೂರಿಸಿ ನಾಯಿ ಕುಂಡಿಗೆ ತಿವಿದ. ರಾಗಿ ಮುದ್ದೆ ಸಿಕ್ಕದ ಸಂಭ್ರಮದಲ್ಲಿದ್ದ ನಾಯಿ ಕೋಲು ತೋರಿಸುತ್ತಿದ್ದ ಹೈದನ ಕಂಡು ಹಲ್ಲುಗಿಂಜಿ ಕಣ್ಣಲ್ಲೇ ಗುರ್ರೆಂದಿತು. ಹುಡುಗರು ಗಳುವನ್ನು ಇತ್ತ ಆಡಿಸಿದರೆ, ಮುದ್ದೆ ಕಚ್ಚಿದ ನಾಯಿ ಅತ್ತ ಹಾರುವುದು. ಅತ್ತ ಆಡಿಸಿದರೆ ಇತ್ತ ನೆಗೆಯುವುದು ಮಾಡುತ್ತ ಕೊನೆಗೆ ಇದ್ದ ಇನ್ನೊಂದು ಮುದ್ದೆಯ ಕಚ್ಚಿ ಆ ಕಡೆ ಗೋಡೆಯ ಗವಾಕ್ಷದಿಂದ ನೆಗೆದು ಹೊರಬಿದ್ದಿತು. ಮುದ್ದೆ ಕಚ್ಚಿದ ನಾಯಿ ಮುಂದು ಮುಂದು; ದೊಣ್ಣೆ ಹಿಡಿದ ಹೈದರು ಹಿಂದು ಹಿಂದು. ಅಷ್ಟು ದೂರ ಬಂದ ಮೇಲೆ ನಾಯಿ ಊರ ದಾರಿ ಹಿಡಿದು ಅಲ್ಲಿ ನಡುವಿನೆತ್ತರಕ್ಕಿದ್ದ ಬೇಲಿ ನೆಗೆದು ಆಚೆ ಓಡಿತು. ಗಳು ಹಿಡಿದ ಸಣ್ಣಸಿಂಗ "ನೀನು ಪಾತಾಳ ಸೇರಿದರ ತಾನೆ ಬುಟ್ಟೇನ" ಅಂದವನು ಓಡಿ ಬಂದ ಬಿರುಸಿನಲ್ಲಿಯೇ ಮುಳ್ಳುಬೇಲಿ ಹಾರಿದ. ಹಾರಿದವನು ಆಚೆ ನೆಗೆಯಲಿಲ್ಲ. ಬೇಲಿ ಮೇಲೆ ಬಿದ್ದ. ಹಿಂದಿನಿಂದ ಬಂದ ಸಿವಮಲ್ಲು ಬೇಲಿಯೊಳಗೆ ಬಿದು ಒದ್ದಾಡುತ್ತಿದ್ದವನನ್ನು ಈಚೆ ಎಳೆದು ಹಾಕಿ ಮೈಗಂಟಿಕೊಂಡಿದ್ದ ಮುಳ್ಳನ್ನೆಲ್ಲ ಬಿಡಿಸಿದ. ಒಂದೊಂದು ಮುಳ್ಳು ಕೀಳುವಾಗಲೂ ಸಣ್ಣಸಿಂಗ 'ಅವ್ವೆ ಅವ್ವೆ ಸತ್ತವ್ವೆ" ಅಂದು ಮಿಕ್ಕಾಡುತ್ತಿದ್ದ.

ಇತ್ತ ಹಟ್ಟಿ ಮುಟ್ಟಿದ ತಿಪ್ಪವ್ವ ತಲೆಯ ಮೇಲಿನ ಸೌದೆ ಹೊರೆ ಇಳಿಸಿ "ವುಸ್ಸೋ" ಎಂದಳು. ಪರ್ಸಂಗ ಹೇಳುತ್ತಿದ್ದ ಮುದುಕನನ್ನೂ, ಕೇಳುತ್ತಿದ್ದ ಹೈಕಳನ್ನೂ ಕಂಡು. "ಅಯ್ ಇವುಕ್ಕ ಬ್ಯಾರೆ ಏನಾರ ಕೇಮಿದ್ರುಲ್ವ, ಕೂತ್ಗಂಡಿನ್ನೇನ್ ಮಾಡಿವು" ಅಂದು ನಡುವಿನ ದಾರದ ಎಸಳಲ್ಲಿ ಗುಡಿಸಿಲ ಕದದ ಬೀಗ ಬಿಡಿಸಿದಳು. ತಿಪ್ಪವ್ವ ಎಲ್ಲಿ ಹೋದರೂ ಬಾಕಲಿಗೆ ಬೀಗ ಹಾಕಿಕೊಂಡೇ ಹೋಗುತ್ತಿದ್ದಳು. ಮಕ್ಕಳು ಹ್ಯಾಗೂ ಇಸ್ಕೂಲು ಮುಗಿಸಿಕೊಂಡು ಹೊತ್ತು ತಿರುಗಿದ ಮೇಲೆ ಬರುತ್ತಿದ್ದವು. ಕುಂಡಜ್ಜನಿಗೆ ಕಣ್ಣು ಕಿವಿ ಮಂದವಾಗಿದ್ದದರಿಂದ ಗುಡಿಸಿಲ ಮುಂದೆ ಪ್ರಯೋಜನವಿರಲಿಲ್ಲ,

(3)

ಈ ಹಿಂದೆಯೇ ಹೇಳಿದಂತೆ ಕುಂಡಯ್ಯ ಕಾಡಮ್ಮನನ್ನು ಲಗ್ನವಾಗುವ ಕಾಲಕ್ಕೆ ಅವನ ವಯಸ್ಸು ನಲವತ್ತು ಮುಟ್ಟಿಹೋಗಿತ್ತು. ಇಷ್ಟಾಗಿ ಲಗ್ನವಾದ ಮೇಲೆ ಕುಂಡಯ್ಯನಿಗೆ ಹುಟ್ಟಿದ ಶಿಶುಗಳೆಲ್ಲ ಯಾಕೋ ಎಂತೋ ತೀರಿಕೊಳ್ಳುತ್ತಿದ್ದವು. ಆಗ ಆರನೆಯ ಶಿಶುವನ್ನು ಹಾದಿಬೀದಿಯವರು ಅಂದಂತೆ ತಿಪ್ಪೆಗೆ ಇಟ್ಟು ಅಲ್ಲಿಂದ ಎತ್ತಿಕೊಂಡರು. ಇದು ತಮಗೆ ಹುಟ್ಟಿದ್ದಲ್ಲ, ತಿಪ್ಪೆಯಲ್ಲಿ ಸಿಕ್ಕಿದ್ದು ಎಂದುಕೊಂಡದ್ದರಿಂದಲೊ, ಆಕಸ್ಮಾತ್ತಾಗಿಯೋ ಕಾಡಮ್ಮನಿಗೆ ಮತ್ತೆರಡು ಮಕ್ಕಳಾಗಿ ಅವುಗಳೊಡನೆ ಅವಳೂ ರೇಷ್ಮೆ ಬಾಯಿಲೆಗೆ ತುತ್ತಾಗಿ ತೀರಿಕೊಂಡಳು.

ಆ ಮುಂದೆ ತಿಪ್ಪಮ್ಮ ಒಬ್ಬಳೇ ತಂದೆಯೊಡನೆ ಬೆಳೆದು ದೊಡ್ಡವಾದ ದಿನಗಳಲ್ಲಿ ಕುಂಡಜ್ಜ ಅದೇ ಕೇರಿಯ ತಮ್ಮಣ್ಣನಿಗೆ ಕೊಟ್ಟು ಲಗ್ನ ಮಾಡಿದ. ತಮ್ಮಣ್ಣನೂ ಊರವರ ತ್ವಾಟ ತುಡಿಕೆ, ಮನೆಗಿನೆಗಳಲ್ಲಿ ಕೂಲಿ ಮಾಡಿಕೊಂಡಿದ್ದ.

ಹೀಗೊಂದು ದಿನ ಊರೊಳಗೆ ವ್ಯಾಪಾರಗಾರರಾಗಿದ್ದ ಲಕ್ಷ್ಮೀಪತಿ ಶೆಟ್ಟರು ತಮ್ಮ ಹಳೆಯ ಮನೆಯನ್ನು ಕೆಡುವಿಸಿ ಆ ಜಾಗದಲ್ಲಿ ಕಾಲಕ್ಕೆ ತಕ್ಕಂತ ಹೊಸ ನಮೂನೆಯಾಗಿ ಒಂದು ಮಹಡಿಮನೆ ಕಟ್ಟಿಸಬೇಕೆಂದು ಹೊರಟರು. ತಳಪಾಯ ತೋಡುವ ಕೆಲಸ ನಡೆದು. ಅದು ಐದು ಆರು ಅಡಿಯಷ್ಟಾದರೂ ಕೆಳಗೆ ಹೋಗಿತ್ತು. ಶೆಟ್ಟರು ಬಿಸಿಲಿಗೆ ಛತ್ರಿ ಹಿಡಿದು ಆಳುಗಳ ಬೆನ್ನಮೇಲೆಯೇ ನಿಂತು ಕೆಲಸ ಮಾಡಿಸುತ್ತಿದ್ದರು. ಹೆಚ್ಚೆಚ್ಚು ಕೆಲಸ ಮಾಡಿದ ಆಳುಗಳಿಗೆಲ್ಲ ಹಳೆಯ ಚಡ್ಡಿ ಷರ್ಟು ಪಂಚೆ ಇನಾಮಾಗಿ ಕೊಡಲಾಗುವುದು ಎಂದು ಉತ್ಸಾಹ ತುಂಬುತ್ತಿದ್ದರು. ತಳಪಾಯ ಇನ್ನೂ ಒಂದು ಅಡಿ ಆಳಕ್ಕೆ ಇಳಿಯುವಾಗ್ಗೆ ಅಲ್ಲೊಂದು ತೂಕದ ಕಲ್ಲು ಸಿಕ್ಕಿತು. ಒಬ್ಬ ಆಳಿದ್ದು, ಅದನ್ನು ಒಡೆದು ಮೂರು ಚೂರು ಮಾಡಿ ಮೇಲೇತ್ತಿ ಬಿಸಾಡುವುದು ಅಂದರೆ. ಶೆಟ್ಟರು ಕೆಲಸ ತಡವಾಗುವುದೆಂದು ಬಗೆದು. "ಲೇ ಹೈಕ್ಳಾ. ಯಾವನು ಆ ಕಲ್ನ ಒಬ್ನೆ ತೂಕಿ ಮ್ಯಾಲೆ ಬಿಸಾಕಿನೋ ಅವುನ್ಗೀವತ್ತು ಉಣ್ಣಕೆ ಒಂದು ರಾಗಿಮುದ್ದೆ. ಹಿಡಿಯನ್ನ ಜಾಸ್ತಿ"

ಬಂದರು. ಅತ್ತ ಏಕ್ಸೋ ಇದ್ದ ತಮ್ಮಯ್ಯ ಕೈಯ್ಯ ಸೂಕಿದ ಬಿಸಾಡಿ ಬಂದ. ಎರಡೂ ಕೈಹಾಕಿ ಕಲ್ಲುಗುಂಡ ಎತ್ತಹೋದರೆ ಕೆಳಗೆ ಸೇರಿಕೊಂಡಿದ್ದ ಯಮಚೇಳು ಬಾಲದ ಕೊಂಡಿಯ ವಿಷವೆಲ್ಲ ಮೈಗೆ ಏರುವಂತೆ ಅಂಗೈಯನ್ನು ಕಚ್ಚಿತು. ಚೇಳು ಕಚ್ಚಿದ್ದೇ ತಮ್ಮಣ್ಣ ಎತ್ತಿದ್ದ ಕಲ್ಲನ್ನು ಬಿಟ್ಟ. ಕಲ್ಲು ಕಾಲ ಮೇಲೆ ಬಿದ್ದು ಪಾದಗಳು ಜಜ್ಜಿ ಹೋದವು.

ಕುಂಡಯ್ಯ ಅಳಿಯನ್ನು ಹೊತ್ತುಕೊಂಡು ಮಂತ್ರಹಾಕುವವರ ಮನೆ. ತೀರ್ಥ ಕೊಡುವ ಗುಡಿಗುಂಟಾರಗಳಿಗೆಲ್ಲ ತಿರುಗಿದ. ಆದರೂ ತಮ್ಮಣ್ಣನ ಮೈ ನೀಲಿಯಾಗಿ ಬಂದು ದಿನವೆಲ್ಲ ಉರಿಹತ್ತಿ ಒದ್ದಾಡಿ ಕೊನೆಗೆ ಮರಗಟ್ಟಿಹೋದ. ಗಂಡ ತೀರಿ ಕೊಂಡಂದು ತಿಪ್ಪವ್ವ ಅಳಲು ತೊಡಗಿ ಹಾಗೆಯೇ ಕಾಲ ದಿನನಿತ್ಯ ನೆತ್ತಿಯಮೇಲೆ ಹಾಯುತ್ತ. ಅವಳ ಮುಖ ಮೈ ಮತ್ತು ಮುಂಡೆ ಕೂದಲೆಲ್ಲ ಬಣ್ಣ ಕಳೆದುಕೊಂಡವು.

ಅಳಿಯ ಸತ್ತದ್ದಕ್ಕೆ ಕುಂಡಜ್ಜನಾದರೋ. "ಯಲಾ ನಮ್ಮ ಅಳಿಯ ದೇವ್ರು ಸತ್ತಿಲ್ಲ. ಇದೇ ಮೈಸೂರು ಸೀಮೆಯನಾಳುವಂಥ ಮಹಾರಾಜರಿಗೊಬ್ಬಳು ರೂಪ್ರ ರೇಖ ರುದ್ರಸಿಂಗಾರವಾರುವಂಥ ಮಗಳಿರುವಳು. ಆಯಮ್ಮ ವಾಸಮಾಡುವಂಥ ಅಂತಃಪ್ರುರದೊಳಗೆ ಒಂದು ಕೊಳವುಂಟು. ಆ ಕೊಳದಲ್ಲಿ ಪಚ್ಚೆ ತೊಟ್ಟು. ರನ್ನದ ಎಲೆ. ಮುತ್ತಿನದಳ ಬಿಡುವಂಥ ಹೂವಿನಗಿಡ ಇರಬೇಕು ಅಂತ ಘ್ರಮಿಸಿರುವಳು. ಮಹಾ ರಾಜರಾದರೋ ಇರುವಂಥ ಒಬ್ಬಳೇ ಮಗಳ ಮಾತ ನೆರವೇರಿಸಬೇಕಂತ. ಆ ಹೂವಿನ ಗಿಡ ತರುವ ಶೂರಾದಿಶೂರ ನನ್ನ ಅಳಿಯ ಆಗುವನು. ರಾಜ್ಯವಾಳುವನು ಅಂತ ಡಂಗೂರ ಹೊಡೆಸಿರುವರು. ನಮ್ಮ ಅಳಿಯ ತಮ್ಮಣ್ಣ ಬೇಡಬೇಡವೆಂದರೂ ಕೇಳದೆ ಅದನ್ನು ತರಲೋಗಿರುವನು. ಇನ್ನೇನು ವಾಪಸು ಬರುವ. ಬರುವ" ಎಂದು ಪರ್ಸಂಗ ಹೇಳುತ್ತಿದ್ದ. ಇದ ಕೇಳಿದ ಜನ ನಕ್ಕು ಕುಂಡಜ್ಜನಿಗೆ, ಕಣ್ಣು ಕಿವಿಯೊಂದಿಗೆ ತಲೆಯೂ ಐಬಾಯಿತೆಂದರು. ಒಟ್ಟಿನಲ್ಲಿ ತಮ್ಮಣ್ಣನು ಸಾಯುವ ಹೊತ್ತಿಗೆ ತಿಪ್ಪವ್ವನಿಗೆ ಎರಡು ಗಂಡು ಮಕ್ಕಳಿದ್ದವು.

(4)

ತಿಪ್ಪವ್ವ ಸೌದೆ ಹೊರೆಯನ್ನು ಹಟ್ಟಿ ಮುಂದೆ ಹಾಕಿ ಬಾಗಿಲ ಬೀಗ ಕಳೆದು ಯಾವಾಗ ಒಳಗಾದಳೋ, ಒಳಗಿಂದ ಅಳುವಿನ ರಾಗ ಈಚೆ ಬಂತು. "ಅಯ್ಯೋ ಸಿವ್ನೆ ವಠಾರದ್ದು ಇದ್ದ ಬದ್ದ ರಾಗಿಕಾಳೆಲ್ಲ ಬೀಸಿ ನಾಕು ಮುದ್ದೆ ಕಟ್ಟಿದ್ನಲ್ಲೋ. ಯಾವ ಮಾಯದಲ್ಲಿ ಬಂದು ಎತ್ಕಂಡೋಯ್ತೋ ಬಗವಂತಾ" ಎಂದು ರಾಗಹಾಡತೊಡಗಿದಳು. ಅವಳ ದುಃಖವು ಕ್ರಮೇಣ ಸಿಟ್ಟಾಗಿ ಪರಿವರ್ತಿತವಾಗಲು ಇದ್ದಕ್ಕಿದ್ದಂತೆ ಕೈಯಲ್ಲಿ ಬೆಟ್ಟ ತಿರುಗುವ ಕೋಲು ಹಿಡಿದು ಕೆಂಡಗಣ್ಣಾಗಿ ಬಂದು, ಗುಡಿಸಲಿಂದ ಈ ಕಡೆಗ

ಹೊಟ್ಟೆಯಡಿ ಮಂಡೆ ತೂರಿಸಿ ಮಲಗಿದ್ದ ನಾಯಿಯ ಮುಸುಡಿಗೆ ಬಲವಾಗಿ ಇಡುವಿದಳು. ಭಂಗಸಿದ್ದ ನಾಯಿ ಆಕಾಶಭೂಮಿಯನ್ನು ಒಂದು ಮಾಡಿ ಗಳ್ಳಾಕುತ್ತ ದಿಕ್ಕು ತಪ್ಪಿ ಓಡಿತು. ವಾಸ್ತವವಾಗಿ ಗುಡಿಸಿಲಿಂದ ಮುದ್ದೆ ಕಚ್ಚಿಕೊಂಡು ಹೋದ ನಾಯಿ ಅದಾಗಿರಲಿಲ್ಲ.

ಇತ್ತ ನಾಯಿ ಓಡಿಸಿಕೊಂಡು ಬೇಲಿಯೊಳಗೆ ಬಿದ್ದು ಬಂದು ಅಜ್ಜನ ಮುಂದೆ ಪರ್ಸಂಗ ಕೇಳುತ್ತಿದ್ದ ಸಿವಮಲ್ಲು "ಅಪ್ಪೋ ಅದಲ್ಲಕವ್ವ, ಅದ್ಯಾವದೋ ಊರ ಪಿಟ್ನಮುದ್ದೆ ಕಚ್ಕಂಡು ಪೋಯ್ತು" ಅಂದ. ಇನ್ನೂ ಸಿಟ್ಟಿನಮೇಲಿದ್ದ ತಿಪ್ಪವ್ವ "ಮುಚ್ಚಲೇ ಬಾಯ" ಅಂದು ಅಲ್ಲೇ ಬಿದ್ದ ಸೆಲ ಸಾರಸಿ. ತನ್ನ ಹುಟ್ಟನ್ನು ಹಳಿದು ಕೊಳ್ಳತೊಡಗಿದಳು. "ಪೋದ ಜಲಮದಲ್ಲಿ ನಾನು ಯಾವ್ ಪಾಪ ಮಾಡಿದ್ನಪ್ಪೋ. ಅನ್ನ ಕೇಳ್ದವ್ರುಗ್ಗೆಲ್ಲ ಸುಣ್ಣ ಕೊಟ್ಟಿದ್ದ ತಾಯಿ. ಗಂಡನ್ನ ತಿಂದ್ಕಂಡು ಮುಂಡ್ಯಾದ ನಲ್ಲೋ, ಈ ಮಕ್ಕಳುನೂ ಮುದಕುನ್ನು ಹೆಂಗಪ್ಪೋ ನಾ ಬಾಳುಸ್ಲಿ" ಅನ್ನುವ ಮಾತು ಅವಳ ಅಳುವಿನ ಮಧ್ಯ ಕೇಳಿಸಿ ಬಂದವು.

ಸಿವಮಲ್ಲು ಇದ್ದವನು ಅಜ್ಜನ ಕಿವಿಗೆ ಬಾಯಿಕೊಟ್ಟು ಜೋರಾಗಿ. "ಅಜ್ಜೋ ಅಜ್ಜಾ ಅದೂ ಊರ ನಾಯಿ ಅಟ್ಟಿವಳಗ ನುಗ್ಗಿ ರಾಗಿಮುದ್ದ ಎತ್ಕಂಡು ವಂಟೋಯ್ತು. ಅದ್ಕ ಅವ್ವ ಅಳ್ತಾವ್ಳೆ" ಅಂದ.

ಮುದುಕ ಮಗಳು ಅಳುತ್ತಿದ್ದ ಕಡೆಗೆ ಅಂದಾಜು ಮಾಡಿ ತಲೆ ತಿರುಗಿಸಿ, "ಕೂಸು ತಿಪ್ಪಿ ಅಳದ್ಯಾಕವ್ವ. ಆ ನಾಯೂ ಒಂದೊತ್ತು ತಿಂದ್ಕಳ್ಳಿ ಬುಡು" ಅಂದ. ಕುಂಡಜ್ಜನ ದಿವ್ಯ ನಿರ್ಲಕ್ಷ್ಯದ ಉತ್ತರದಿಂದಾಗಿ ತಿಪ್ಪವ್ವನಿಗೆ ಕತ್ತು ಕತ್ತರಿಸಿ ಬಿಸಾಡಿದಂತಾಯಿತು. ಅವಳಿಗೆ ನಾಯಿ ಹಿಟ್ಟಿನ ಮುದ್ದೆಯನ್ನು ಅಪಹರಿಸಿತು ಎಂದು ತಿಳಿದಾಗ ಆದ ದುಃಖಕ್ಕಿಂತಲೂ ಅಪ್ಪನ ನಿರ್ಲಕ್ಷ್ಯದ ಉತ್ತರ ಹೆಚ್ಚು ದುಃಖವನ್ನು ತಂದಿತು. ಅಜ್ಜ. ತಪ್ಪಾಯಿತೆಂತಲೋ. ಕಣ್ಣು ಕಾಣದ್ದರಿಂದ ಹಾಗಾಯಿತೆಂತಲೋ. ಇಲ್ಲ ಮೊಮ್ಮಕ್ಕಳು ಗುಡಿಸಿಲ ಕಡೆ ಸರಿಯಾಗಿ ನೋಡಿಕೊಳ್ಳಲಿಲ್ಲವೆಂದು ಅವರನ್ನು ದಂಡಿಸಿಯೋ ತನ್ನ ಪ್ರತಿಕ್ರಿಯೆ ವ್ಯಕ್ತಪಡಿಬಸಹುದೆಂದು ಬಗೆದಿದ್ದ ತಿಪ್ಪವ್ವನಿಗೆ ಅಗಾಧ ನಿರಾಶೆಯಾಗಿ ತಾನು ಆ ಘಳಿಗೆಯಲ್ಲಿ ಸಾಯುವುದು ಶ್ರೇಯಸ್ಕರವೆಂದುಕೊಂಡಳು. ಅದಕ್ಕಾಗಿ "ಈ ಕಣ್ಕಾಣದ ಮುದುಕುನ್ನೂ. ನನ್ನೂ ಯಾವತ್ತಪ್ಪ ಪರಮಾತ್ಮ ನಿನ್ನ ಪಾದಕ್ಕ ಕರ್ಕಂಡಿಯೋ" ಅಂದು ರಾಗ ಎಳೆದಳು.

ಕ್ಷಣ ಹೊತ್ತು ಯಾವುದೋ ಧ್ಯಾನದಲ್ಲಿದ್ದವನಂತೆ ಇದ್ದ ಕುಂಡಜ್ಜ. "ಮಗಳೇ ಸವುದೆಪ್ರುಳ್ಳೆ ಆಯ್ಕಂಡು ಬಂದಿದ್ದಯಲ್ಲ ಊರಾಕೋಗಿ ಅವ ಮಾರ್ಕಂಡು ಬಾ ಮತೆ, ಯಾರಾದರೂ ತಕ್ಕವಲ್ರು ಒಂದು ರೂಪಾಯಿಗ. ಅದಕ್ಕೊಂದ್ ಬಳ್ಳರಾಗಿ ಬರವ ?" ಅನ್ನುವ ಒಂದು ಸಲಹೆ ಕೊಟ್ಟ.

ಒಂದೇ ಉಸುರಿನಲ್ಲಿ ತಿಪ್ಪವ್ವ. "ಬತ್ತದ ಬತ್ತದ ಬಳ್ಳನೂ ಬತ್ತದ ಕೊಳಗ ರಾಗಿನೂ ಬತ್ತದ. ಸೌದೆ ಮಾರಿ ರಾಗಿ ತಂದ್ರು ಪಲಿ ಉರಿಸಕೇನ್ಮಾಡಿಯೆ. ಕೈಕಾಲು ಮುರುದಾಕೀಯಾ" ಅಂದು ದಿಮ್ಮಗೆ ಆಕಾಶ ನೋಡುತ್ತಾ ಕೂತಳು.

ಇಟ್ಟಾದ ಏಷ್ಟೋ ಹೊತ್ತಿನ ಮೇಲೆ ಕೇರಿಯ ಕಡೆಗೆ ಸೂರನಾಯಕರು ಬಂದರು. ಅರವತ್ತು ವಯಸ್ಸು ದಾಟಿದ್ದ ನಾಯಕರು ಊರ ಮುಖಂಡರಲ್ಲಿ ಒಬ್ಬರು. ಇಪ್ಪತ್ತೊಮ್ರನೆಯ ವಯಸ್ಸಿನಲ್ಲಿ ಅವರಿಗೆ ವಿವಾಹವಾಗಿ ಈಗ ಪ್ರಾಯಸ್ಥ ಮಕ್ಕಳು ಮೊಮ್ಮಕ್ಕಳು ಇರುವರು. ಇಷ್ಟಾಗಿ ಅವರು ವಿವಾಹ ಪೂರ್ವದಲ್ಲಿ ರವಸ್ಟು ಚೇಷ್ಟೆಯ ಮೇಲೆ ಇದ್ದದ್ದರಿಂದ ಬೀದಿಯ ಆ ತುದಿಗೆ ಇನ್ನೊಂದು ಸಂಬಂಧವೂ ಇದ್ದು. ಆ ಸಂಬಂಧಕ್ಕೂ ಮಕ್ಕಳು ಮರಿಗಳು ಇದ್ದವು. ಇದರಿಂದ ನಾಯಕರ ರಕ್ತ ಸಂಬಂಧ. ಬಂಧುಬಳಗ. ದೊಡ್ಡದಿದ್ದು. ಅವರಿಗೆ ಯಾವತ್ತೂ ಮೈಯ್ಯ ಒಂದು ಕೂದಲು ಚುಳ್ಳೆಂದರೂ. ಹೆಂಡತಿಯರ ಮಕ್ಕಳು ಮೊಮ್ಮಕ್ಕಳ ಆರೋಗ್ಯ ತಪ್ಪಿ ಬಿಡುತ್ತಿತ್ತು. ಈ ಕಾರಣ ವಯಸ್ಸು ಅರುವತ್ತಾಗಿದ್ದರೂ ಅವರ ಅಂಗೋಪಾಂಗಗಳು ಆರೋಗ್ಯದಿಂದ ಇದ್ದವು.

ಊರಾಚೆ ಹೇರಳವಾಗಿದ್ದ ಅವರ ಭೂಮಿಕಾಣೆಯಲ್ಲಿ ರಾಗಿ ಭತ್ತ ಕಬ್ಬು ಇತ್ಯಾದಿ ಬೆಳೆ ಬೆಳೆಯುವುದಿದ್ದು ಅಲ್ಲಿ ವರ್ಷವೆಲ್ಲ ಹತ್ತಾರು ಆಳುಕಾಳು ಕೂಲಿಯ ಮೇಲಿರುತ್ತಿತ್ತು. ಅವತ್ತೂ ಆಳು ಕರೆಯಲು ಬೆಳ್ಳಿ ಕಟ್ಟಿನ ಕೋಲು ಊರಿ ನಿಧಾನವಾಗಿ ಕೇರಿಯ ಕಡೆ ಬಂದ ಸೂರನಾಯಕರು ಬೇವಿನ ಮರದಡಿಯಲ್ಲಿ ನಿಂತು "ಯಾರ‍್ರಲಾ ಅದು ನಾಳೆ ತ್ವಾಟದ ಕೂಲಿಗೆ ಬರವ್ರುದು" ಅಂದು ಕರೆದರು.

ನಾಯಕರು ಕೂಲಿಗೆಂದು ಬಾಯಿಬಿಟ್ಟು ಕರೆಯುವುದರ ಮೊದಲೇ ಕೇರಿಯ ಹೆಣ್ಣು ಗಂಡೆಲ್ಲ ಗುಂಪಾಗಿ. ಅಲ್ಲಿ ತಿಪ್ಪವ್ವನೂ ಇದ್ದಳು. ಗಂಡಾಳಿಗೆ ಮೂರರಂತೆ, ಹೆಣ್ಣಾಳಿಗೆ ಎರಡರಂತೆ ಮುಂಗಡ ಕೂಲಿ ಬಟವಾಡೆ ಆಯಿತು. ತಿಪ್ಪವ್ವ ದುಡ್ಡನ್ನು ಬಲಗೈಲಿ ಒಡಿದು ಹಾಗೆಯೇ ಲಕ್ಷ್ಮಿಪತಿ ಶೆಟ್ಟರ ಅಂಗಡಿಗೆ ಬಂದಳು.

ಇತ್ತ ಕೂಲಿ ಬಟವಾಡೆ ಮಾಡಿದ ನಾಯಕರು. ಅದೇ ಬೀದಿಯನ್ನು ಕೋಲೂರಿ ನಿಧಾನವಾಗಿ ದಾಟಿ ಊರಾಚೆಗಿದ್ದ ತಮ್ಮ ಗದ್ದೆಗೆ ಹೋಗುವುದು ರೂಢಿ. ಅವರು ಕೇರಿಯ ತುದಿಗೆ ಬಂದಾಗ ಕುಂಡಜ್ಜ ರೂಢಿಯಂತೆಯೇ ಮಕ್ಕಳ ಮಧ್ಯೆ ಕೂತಿದ್ದ. ನಾಯಕರೂ ಮಾಮೂಲಾಗಿ. "ಏನಲೇ ಕುಂಡಾ ಯಾಗಿದ್ದೀಯೆ" ಅಂದರು. ಮುದುಕ ಆ ದಿನ ಊರ ಸಾಹುಕಾರರದೆಂಬುದನ್ನು ಗುರುತು ಮಾಡಿ "ದಣಿಗೋಳೆ" ಅಂದ. ನಾಯಕರು "ಏನ್ಸಮಾಚಾರ ಪರ್ಸಂಗ ಏನಾರು ಉಂಟೋ" ಅಂದು ಗೇಲಿ ಮಾಡಿ ನಕ್ಕರು.

ಕುಂಡಜ್ಜ ಹೇಳಿದ: "ದಣಿ ನಿನ್ನೆ ರಾತ್ರಿ ನಾನು ಮಲಗಿದ್ದಾಗ ರವಸ್ಟು ನಿದ್ದೆ ಬಂದಿತ್ತು. ಆಗೇನಾಯ್ತು ಮೀಸೆಮ್ಯಾಲೆ ಕೈಮುಡಗಿ ಕ್ವಾಣನ ಮೇಲೆ ಬಂದ ರೂಪೊಂದು ಏಳಿ ಮುದಕಾ ಅಂತು. ನಾನು ಆ ಸ್ವಾಮಿನಾ ಕಂಡು ಕೈ ಮುಗುದು ಆಹಾ ನನಭಾಗದ ಪರಮಾತ್ಮ ನಿನ್ನ ಲೋಕಕ್ಕೆ ಕರಕಂಡೋಗಕೆ ಈಗಲಾದುರು ಬಂದ್ಯಲ್ಲಪ್ಪ ಅಂತಂದೆ. ಆಗ ಸ್ವಾಮಿ ಮೀಸೆ ಕುಣಿಯಂಗೆ ನಕ್ಕು ಅಯ್ಯಾ ಮುದುಕಾ ಈಗ ನೀನಿರದು ಇಸ್ಯಾರ ಲೋಕ್ದಲ್ಲಿ ಅಂತು. ಆ ಮೇಲೆ ನಾನಿದ್ದು ಭಗವಂತಾ ರವಸ್ಟು ಕಣ್ಣುಬುಟ್ಟು ನೋಡು ಅಂತ ಅಡ್ಡಬಿದ್ದೆ. ದೇವ್ರು ಇದ್ದು ಮುದುಕಾ ಇಲ್ಲಿ ಇಲ್ಲಿ, ನಿಂಗೆ ಇಲ್ಲಿ ಬಿಟ್ನೀ ಇದ್ದು ಇದ್ದು ಬೇಜಾರು ಬಂದದೆ. ಇಗೋ ಇನಕೂಡೆ ಕುಂಡಣ್ಣನ್ನೂ, ಕಿವುಡಯ್ಯನ್ನೂ, ಗೂನಪ್ಪನ್ನೂ ಬಿಟ್ಟಿಷ್ನಿ. ಬೇಕಾದರ ಹುಚ್ಚಪ್ಪನ್ನೂ ಸೇರಿಸ್ಕೊ, ಇವರ ಕೂಡಲ್ಲ ಅಡ್ಕಂತ ಬೇಜಾರು ಕಳಕಂತ ಇರು ಅಂತ ಕ್ವಾಣನ್ನ ತಿರುಗಿಸೇಬಿಡದಾ ದಣಿ........" ಅಂದ ಕುಂಡಜ್ಜ ಕನಸಿನ ಪರ್ಸಂಗ ಹೇಳಿದ.

ಕುಂಡಜ್ಜನ ಮಾತು ಕೇಳಿದ ನಾಯಕರು ಅಷ್ಟು ಹೊತ್ತು ತಡೆದಿದ್ದ ನಗುವನ್ನು ಬಿಟ್ಟೇ ಬಿಟ್ಟರು. ಮೈ ಕುಲುಕುವಂತೆ ನಕ್ಕು ಕೋಲೂರುತ್ತ ತಮ್ಮ ತೋಟದ ಮುಖವಾದರು.

(5)

ಅಂಗಡಿಯಿಂದ ಬಳ್ಳರಾಗಿ ತಂದ ತಿಪ್ಪವ್ವ ಕಾಸು ಎಟುಕದೆ ಸೀಮೆಎಣ್ಣೆ ತಂದಿರಲಿಲ್ಲ. ಹೀಗಾಗಿ ನೆರುಕೆಯೊಳಗೆ ದೀಪಾಲೆ ಕಂಭದ ಮೇಲೆ ಕೂತಿದ್ದ ಜುಡ್ಡಿದೀವಿಗೆ ಕಣ್ಣು ಬಿಟ್ಟಿರಲಿಲ್ಲ. ಒಲೆಯೊಳಗೆ ಉರಿಯುತ್ತಿದ್ದ ಸೌದೆಯು ಬೆಂಕಿ ಹಟ್ಟಿಯೊಳಗೆಲ್ಲ ಬೆಳಕು ಮಾಡಿತ್ತು. ಬೆಲವಿನ ಮರದ ಬಳಿಯ ಕಂಭದ ಲೈಟೂ ರವಸ್ಟು ಬೆಳಕು ಕರುಣಿಸಿತ್ತು.

ತಿಪ್ಪವ್ವ "ಇವತ್ತು ಸಾವ್ಕಾರ್ರು ಬಂದು ತ್ವಾಟದ ಕೂಲಿಗೆ ಕರದೇ ಹೊಗಿದ್ರ ಉಪಾಸ ಮನಿಕಬೇಕಾಗಿತ್ತು ಕನಾಕ್ಕ" ಅಂದು ತನಗೆ ತಾನೇ ಮಾತಾಡಿಕೊಳ್ಳುತ್ತ ಒಲೆಯ ಮೇಲಿನ ಮಡಕೆಯ ಕುದಿನೀರಿಗೆ ರಾಗಿಹಿಟ್ಟು ಸುರಿದು ಕೋಲಿಟ್ಟು ತಿರುವಿ ಮುದ್ದೆ ಕಟ್ಟುತ್ತಿದ್ದಳು. ಇತ್ತ ಅಂಗಳದಲ್ಲಿ ಅಜ್ಜನ ಸುತ್ತ ಇದ್ದ ಮಕ್ಕಳನ್ನು ಅವರವರ ಅಪ್ಪಂದಿರು ತಂತಮ್ಮ ಗುಡಿಸಿಲಿಂದ "ಬಿಲೇ ಕೂಸೇ ಬಾಪ್ಪಾ ಉಂಡು ಮನಿಕಳವೇ ಹೊತ್ತಾಯ್ತು" ಎಂದು ಕರೆಯಲು, "ಬಂದ್ನವೈ, ಬಂದ್ನವೈ" ಅಂದು ಒಂದೊಂದಾಗಿ ಓಡತೊಡಗಿದವು.

ಸಿವಮಲ್ಲು, ಸಣ್ಣಸಿಂಗು ಅಜ್ಜನನ್ನು ಏಳಿಸಿ ಅವನ ಕೈಗೆ ಕೋಲು ಕೊಟ್ಟು ಒಳಗೆ ಕರೆದುಕೊಂಡು ಬಂದವು. ತಿಪ್ಪವ್ವ ಮುದುಕನ ಮುಂದೆ ಅರಿವಾಣ ಮಡಗಿ ಮುದ್ದೆಯಿಟ್ಟು ಅದರೆದುರು ಹುಣಸೇಹಣ್ಣು ಮೆಣಸಿನಕಾಯಿ ಕಿವುಚಿದ ನೀರು

ಬಿಟ್ಟಳು. ಅರಿವಾಣದಲ್ಲಿ ತೂತಿದ್ದ ಸಾರು ಜಿನುಗತೊಡಗಿತು. ತಿರುಗಿ ತಿಪ್ಪವ್ವ ಸಾರಿದ್ದ ಕಡೆ ಮುದ್ದೆಯನ್ನೂ ಮುದ್ದೆಯಿದ್ದ ಕಡೆ ಸಾರು ಬರುವಂತೆ ಮಾಡಿದಳು.

ಇನ್ನೊಂದು ಮುದ್ದೆಯನ್ನೂ ಎರಡು ತುಂಡು ಮಾಡಿ ಮಕ್ಕಳಿಗಿಡಲು ಅವು ಕೈಯ್ಯಿ ಬಾಯಿ ಆಡಿಸತೊಡಗಿದವು.

ತುತ್ತನ್ನು ಸಾರಿಗೆ ಅಂಟಿಸುತ್ತಿದ್ದ ಕುಂಟಜ್ಜ "ಅಪ್ಪಯ್ಯಗೋಳಾ" ಅನ್ನಲು ಮಕ್ಕಳು "ಏನಜ್ಜೋ" ಅಂದವು.

ಅಜ್ಜ "ನಾನೊಂದೇಳ್ತಿನಿ" ಅಂದು ಒಂದು ಘಳಿಗೆ ಸುಮ್ಮಗೆ ಕೂತ.

ಸಿವಮಲ್ಲು ಇದ್ದು "ಅಯ್ ಅದೇನು ಬ್ಯಾಗನೇಳಜ್ಜೋ. ಹೇಳ್ತಿನಿ ಹೇಳ್ತಿನಿ ಅಂತ ಹೊತ್ಮೂಡ್ಸಿ ಹೊತ್ತುಳುಗುಸುಬುಡ್ತಿದ್ದೀಯ ನೀನು" ಅನ್ನಲು ತಿಪ್ಪವ್ವನಿಗೆ ನಗು ಬಂತು.

ಅಜ್ಜನೂ ನಗುತ್ತ "ಹುಟ್ಟಿದ ಮ್ಯಾಲೆ ಹಸಿರು ಬಣ್ಣ. ವಾಡೆವಳಗೆ ಕೆಂಪು ಬಣ್ಣ. ಬೇಸಿದ ಮ್ಯಾಲೆ ಇನ್ನೇನು, ಬೆಂದು ಕರಿಬಣ್ಣವಾಯ್ತು. ಅದೇನೇಳ್ರಿ ಮತೆ" ಅಂದು ಒಡಪು ಹೇಳಿ ಅರಿವಾಣದ ತುತ್ತಿಗೆ ಕೈ ಹಾಕಿದ. ಸಣ್ಣಿಂಗು ಅರಿವಾಣದ ತುತ್ತನ್ನು ಬಾಯಿಗಿಡುತ್ತ ಒಂದು ಘಳಿಗೆ ಯೋಚಿಸಿದಂತೆ ಮಾಡಿ, "ಕಳ್ಳ ಪುರಿಕಜ್ಜ" ಅಂದಿತು.

ಸಿವಮಲ್ಲು ಇದ್ದು "ಅಯ್ ಕೂಸ್ಕ. ಕಳ್ಳೆಪುರಿಯಂತ ಕಳ್ಳೆ ಪುರಿ. ಅಲ್ಲ. ನಾನೇಳ್ತಿನಿ ತಾಳು" ಅಂದು ಒಂದು ಕ್ಷಣ ಘನ ಚಿಂತೆ ಮಾಡುವಂತೆ ಕಣ್ಣುಮುಚ್ಚಿ ಕೂತಿತು. ತದನಂತರ ಕಣ್ಣು ತೆರೆದು "ಉಪ್ಪುಬ್ಬುಸೇರಾಯಿ" ಅಂದಿತು. ಸಿವಮಲ್ಲು ಹಾಗೆ ಅಂದದ್ದೇ ತಡ, ಗುಡಿಸಿಲೊಳಗೆಲ್ಲ ನಗು ತುಂಬಿಕೊಂಡಿತು. ತುಂಬಿಕೊಂಡ ನಗು ಈಚೆಗೂ ಬಂತು.

ಮಲಗಲು ಹವಣಿಸುತ್ತಿದ್ದ ಭೂಮಿ ತಾಯಿಗೆ, ಕತ್ತಲೆ ದೇವಿ ತಾನು ಬರುವಾಗಲೇ ಕೈಯಲ್ಲಿ ಹಿಡಿದುಕೊಂಡು ಬಂದಿದ್ದ ಕಪ್ಪು ಕಂಬಳಿಯನ್ನು ಹೊದಿಸುತ್ತಿದ್ದಳು. ಉಂಡ ಸಣ್ಣಿಂಗುವನ್ನು ತಿಪ್ಪವ್ವ ಒಲೆಯ ಮುಂದೆ ತಂದು ಕೂರಿಸಿ ಬಿಸಿನೀರಿಗೆ ಅದ್ದಿದ ವಸ್ತ್ರವನ್ನು ಉಂಡೆಕಟ್ಟಿ ಅವನ ಮೈಗೆಲ್ಲ ಒತ್ತತೊಡಗಿದಳು. ಒಲೆಯೊಳಗಿದ್ದ ಕೆಂಡ ಕೂಸಿನ ಕಣ್ಣೊಳಗೆ ಭಗಭಗ ಉರಿಯುವಂತೆ ಕಾಣಿಸುತ್ತಿತ್ತು.

ಮುಸಿಗಿಳಿವ ಮೊದಲೇ

ಬೆಚ್ಚಗಿನ ನನ್ನೆದೆಯಲ್ಲಿ
ಮುಚ್ಚಿಟ್ಟ ಭಾವಗಳೆ
ಮೊಟ್ಟೆಯೊಡೆದು
ಮುಲುಗುಡುತ್ತಾ ಹೊರಬರುವ
ಮರಿಯೊಂದು
ನನ್ನಲ್ಲಿ ಪುಳಕವೆಬ್ಬಿಸುತ್ತದೆ.

ಕ್ಷಣದಲ್ಲೇ
ಗರಿಮೂಡಿಸಿಕೊಂಡು
ನೂನ್ನೊಳಗೆ ಕಚಗುಳಿಯನ್ನಿಡುತ್ತದೆ.

ತಂತಾನೇ
ಬೆ – ಳೆ – ದು
ರೆಕ್ಕೆ ಬಡಿಯುತ್ತಾ
ಹೊರಬರಲು ತವಕಿಸುತ್ತಿರುವ
ಹಕ್ಕಿಯದು
ಹಾಡಲೆಳಸುತ್ತದೆ....ಅಳುತ್ತದೆ !

ನನ್ನೆದೆಯಲ್ಲಿ
ಮೊಳೆತ ಭಾವನೆಗಳು
ಮಾತಾಗಿ
ಮುಸಿಗಿಳಿವ ಮೊದಲೇ
ಮುರುಟಿ ಸಾಯುತ್ತವೆ !

ಹೆಚ್. ಪ್ರೇಮಲೀಲಾ

ಹೆಚ್ ಪ್ರೇಮಲೀಲಾ, ಕಲ್ಕೆರೆ-572221, ತುಮಕೂರು ಜಿಲ್ಲೆ.

ಹೂ ಮಾರುವ ಹುಡಗಿಯರು

ಹೊತ್ತು ಚಿಗುರುವ ಹೊತ್ತಲ್ಲಿ
ಹರಿದ ಮಣ್ಣಿನ ಕರಳು ಬಳ್ಳಿಯು
ಹಾದಿಬದಿಗಳ ಇಕ್ಕೆಲದ ಅಂಚಲ್ಲಿ
ಹೂಬಿಟ್ಟ ಗಿಡದಂತೆ ನಿಂತ ನಿಲುವಿನಲ್ಲೆ ಕಣ್ಸೆಳೆವ
ಹೂಮಾಲೆ ಮಾರುವ ಹುಡುಗಿಯರು
ಬಿರಿದ ಕಣ್ಣಿನ ಪಂಬಳ್ಳಿಯ ಮೊಗ್ಗುಗಳು,

ಕಣ್ಣೊಳಗೆ ಎದೆಯೊಳಗೆ ಕರೆವ ಮಾತುಗಳಲ್ಲಿ
ಕೋಟಿ ಕೊರತೆಗಳ ಮಾಲೆತೊಟ್ಟು
ಕಣದ ರಾಶಿಯಂತೆ ತುಟಿನಗೆಯ ಮೊಗ್ಗು
ತುಟಿಬಿಚ್ಚಿ ನಕ್ಕರೂ
ಮನಬಿಚ್ಚಿ ಹಾರದವರು
ಮುಸ್ಸ್ಯಾದಮುಯ್ಯೆಲ್ಲಾ ಹೂಬಿಟ್ಟ ಮರದ
ಮಣ್ಣುಬಣ್ಣದ ಹೆಂಗಳೆಯರು.

ಇಳೆಬಿಟ್ಟ ಹೂಮಾಲೆ ತೋಳಮೇಲೆ
ಗಮಗುಡುವ ಹೂಕುಚ್ಚು ಆಸೆಗೊಂದು
ಕನಸುಗಣ್ಣಿನ ಹುಡುಗಿರ ಜೋಡಿ ಜಡೆಗೆ
ಕೆಂಡ ಚೆಲ್ಲುವ ಕನಕಾಂಬರ
ನಲ್ಲೆಯರ ನೆನಪಿನಂತೆ ದವನದ ಕುಚ್ಚು
ಇನಿಯಳ ತೋಳಬಿಸಿಗೆ ಸಂಪಿಗೆ ಎಸಳು
ಮುನಿದ ಹೆಂಡತಿಗೆ ಮಲ್ಲಿಗೆ ದಂಡೆ
ಗಣಗುಡುವ ಜುಂಜಪ್ಪನಿಗೆ ಬಿಡಿ ಸ್ಯಾವಂತಿಗೆ

ಜಿ. ವಿ ಆನಂದಮೂರ್ತಿ 'ಗಿರಿ' ರಾಮನಕೊಪ್ಪಲು-573139, (ಹಾಸನ ಜಿಲ್ಲೆ)

ನಗುವ ಬಿಡಿ ಹೂಗಳ ಎಸಳ ಮರೆಯಲ್ಲಿ
ಚಿಂತೆ ಕಣ್ಣುಗಳ ಇಣುಕು ನೋಟ
ಹೊತ್ತೇರಿ ನೆರಳು ಒಂದಾಗುವ ಹೊತ್ತಿಗೆ
ಹೂವಿನಂಗಡಿಯಂತೆ ಬಾಡಿದ ಹುಡಗಿಯರು
ಕಾಸಿಗೊಂದು ಮಾರು
ಮಾತಿಗೊಂದು ಮಾತುಕಟ್ಟುವ
ಬೃಂದಾವನದ ಹೂಗನ್ನಿಕೆಯರು
ಹೂ ಮಾರುವ ಹುಡಗಿಯರು.

ಜಿ. ವಿ. ಆನಂದಮೂರ್ತಿ

ಸಂಗತಿಗಳು

ಬಿಚ್ಚಿಕೊಳ್ಳುವ
ಇಲ್ಲ ಮುಚ್ಚಿಕೊಳ್ಳುವ
ದೊಡ್ಡದು ಚಿಕ್ಕದಾಗುವ
ಚಿಕ್ಕದು ದೊಡ್ಡದಾಗುವ ಸಂಗತಿಗಳೆಲ್ಲ
ಹೀಗೆಯೆ–
ಕತೆ, ಕಾದಬಂರಿ, ಕವಿತೆ
ಚರ್ಚೆ, ಇಷ್ಟು – ಆಯಿಷ್ಟಗಳೂ ಕೂಡ

ಕಣ್ಣಾದರೂ ಆಡಿಸಬೇಕು
ಒಂದಿಷ್ಟು ತಿಳಿದಿರಲು.
ತಿಳಿದಂತೆ ತೋರಲು ಸರಕು
ಅಷ್ಟೆಷ್ಟು ಬೇಕು
ತಲೆಯಲ್ಲಿ, ಇಲ್ಲ ಕಪಾಟಿನಲ್ಲಿ.

ಬೆಲೆ ಏರಿಕೆ
ಗೊಣಗು ಸಹಜವೆಂಬಂತೆ
ಕೊಳ್ಳುವುದು ರೂಢಿ.

ಸ. ರಘುನಾಥ, ಉಪಾಧ್ಯಾಯ, ಗೌನಿಪಲ್ಲಿ-563135, ಶ್ರೀನಿವಾಸಪುರ ತಾ॥, ಕೋಲಾರ ಜಿಲ್ಲೆ.

ಇದು ಅಕೆಡೆಮಿಕ್ ವಿಚಾರವಲ್ಲ ಬಿಡಿ.
ಪುಸ್ತಕದ ಬಿಡುಗಡೆ
ಅವಾರ್ಡು, ವಿಮರ್ಶೆ
ಚರ್ಚಿಸುವ ವಿಚಾರ,

ಏರೆಹುಳ–
ಗಾಳ–
ಮೀನು–
ಬಲೆ ಇತ್ಯಾದಿ ಬಲ್ಲದವರು
ಇತ್ತ ಬನ್ನಿ
ಸೆಮಿನಾರಿನ ಬೇಸರಕ್ಕೆ ಇಲಾಜು
ಚಪ್ಪಾಳೆ ತಟ್ಟಿ.

ಬನ್ನಿ–
ಒಬ್ಬೊಬ್ಬರು ಒಂದೊಂದು
ಮರದ ಕೆಳಗೆ ಕುಳಿತು ಸಧ್ಯಕ್ಕೆ
ಹಕ್ಕಿಗಳ ಬಗ್ಗೆ ಮಾತನಾಡೋಣ,

ಬಾನಿನಲ್ಲಿ ಹಾರಾಡುವ
ಮರಗಳಲ್ಲಿ ಕೂತಾಡುವ
ಅವಕ್ಕೆ ತೋಚಿದಂತಿರುವ
ಸಂಕೋಚದ ಸಂವೇದನೆಯಲ್ಲಿ
ಬೀಗುವ ಹಕ್ಕಿಗಳ
ಅನೇಕ ಮರ್ಮಗಳು
ಮೂಲಾಜಿಗೆ ದಕ್ಕುವುದಿಲ್ಲ.

ವಲಸೆ ಹೋಗುವ
ನಾರು ಹುಲ್ಲು ಪುಳ್ಳೆಗಳೆನಾಯ್ದು
ಚಿತ್ತಾರದ ಗೂಡು ಕಟ್ಟುವ
ಮೊಟ್ಟೆ ಒಡೆಸಿ ಮರಿಮಾಡುವ
ಅವುಗಳ ಸಾದಾ ಸಾಚಾ ಬದುಕಂ

ನಮಗಷ್ಟೇ ಸೋಜಿಗ.
ಪಕ್ಕಿ ಹಕ್ಕಿಗೆ ಸೋಜಿಗವಲ್ಲ.

ಮರ ಮತ್ತು ಪಕ್ಕಿ ಒಂದಕ್ಕೊಂದು ಹೊಂದಿ
ಕೊಂಡು ಬಿಡುವ
ಜೀವ ವಿಕಾಸದ ಕಥೆಯಂತೆ
ರೋಮಾಂಚನದ ಕಿಕ್ಕು ಕೊಡುವ
ಹಕ್ಕಿಗಳು ಚುಕ್ಕಿಗಳಲ್ಲ.

ಹೀಗೆಲ್ಲ ನೋಡುವ, ಮಕ್ಕಳಿಗೆ
ಬಣ್ಣದ ಹಕ್ಕಿ ಹಾಡು ಹೇಳಿಕೊಡುವ ನಮ್ಮಲ್ಲಿ
ಬೇಟೆಯು ಮೋಜು ಕುಣಿದಾಗ
ಪರಿಶುದ್ಧ ಮಾಂಸಾಹಾರಿಗಳು ನಾವು.

ಇದೆಲ್ಲ ತಿಳಿದ ನಾವು
ಇಂದಿಗೂ ಕಾಯುತ್ತೇವೆ
'ಮಾ ನಿಷಾಧ' ಎಂಬ ಬೇರೊಬ್ಬ
ವಾಲ್ಮೀಕಿಗಾಗಿ.

ಸ. ರಘುನಾಥ

ಆಡು ಮೂತಿನ ಕುರುಡು ಕೊಕ್ಕರೆ

ಕೊಕ್ಕನ್ನು ಮುಂಚಾಚಿ ಸೆಟೆದ ನೆಟ್ಟ ನೇರಕ್ಕೆ ಕೊಕ್ಕರೆ
ರೆಕ್ಕೆ ಬಡಿಯುತ್ತ ಸುಮ್ಮನೆ ಒಮ್ಮೊಮ್ಮೆ ಸುಮ್ಮನೆ
ಗುರಿಯಿಟ್ಟು ಹಾರುತ್ತಿರುವ ಬಿಳುಪಿನ ಪಕ್ಕಿ

ಯಾಕೊ ಏನೊ ಕುರುಡೆನ್ನುವರು, ಈ ಪಕ್ಷಿ
ಕುರುಡೇನಲ್ಲ ಧ್ಯಾನಿ, ಕಾಣದಿದು ಮೊದಲ
ಸರ್ವಸಾಮಾನ್ಯ ನೋಟಕ್ಕೆ

ಕಣ್ಣುಮುಚ್ಚಿ ಒಂಟಿ ಕಾಲೂರಿ ನಿಂತುಧೇನಿಸುವ
ಈ ಪುರುಷಾರ್ಥಕ ಕೌತುಕ ಬಕಧ್ಯಾನಿಯನ್ನ
ಬಕಧ್ಯಾನ ಎಂಬುದಾದರೆ ಮಾನ್ಯವದು
ಅದೂ ಮಾತು.

o o o o o

ಮಡುಗಳು ಇಂಗುತ್ತಿರುವ ಹಸಿಹಸಿಯಾದ
ಕೆರೆಯಂಚಿಗೆ ಮಣ್ಣ ಹೆಂಟೆಯೊಂದನಿರಿಸಿದರೆ ವಿಕಾರ
ಕೂಗಿನೊಡನೆ ಏಳುವುದು ಬಿಚ್ಚಿಕೊಳ್ಳುವುದು
ಬಿಳಿಬಿಳಿಯಾಗಿ ಬಸಿದ ಹೆಂಟೆಗೇ ರೆಕ್ಕೆ ಮೂಡಿ
ಒದರುತ್ತ ಮೇಲೆದ್ದ ಹಾಗೆ

ಹೆಂಟೆಯೊಂದ, ಹಸಾದರೊಂದ ಏಸಿದ ಕಾಯಕವ
ಒಲ್ಲದ ಮನವಾದರೆ ಕೇಳಿ: ಸುಮ್ಮನೆ ಕೂರಿ
ಏಳುವವು ತಾನೇ ತಾನಾಗಿ, ಮುದುಡಿದ ರೆಕ್ಕೆಗಳು
ಕಾಲಾನುಕ್ರಮ. ಹೇಳಿ : ಹೀಗೆ ಕಾಯುತ್ತಾ ಕುಳಿತ ಘಟನೆ
ಬಕ ಧ್ಯಾನವೇ ?

ಪುರುಷಗಿದು ತರವೇ ? ಏನಿದರ ಅರ್ಥ ?
ಕುಳಿತೆ ಸುಮ್ಮನೆ ಏನಿ ನನ್ನ ಮನೆಯೊಂದು
ಬಗೆಹರಿಯದ ಬಗೆ

o o o o o

ಧ್ಯಾನದಿಂದೇಳುವ ಬಕ ವಿಶೇಷಕ್ಕೆ. ಕಾಯುತ್ತ ಕುಳಿತ
ನೆಟ್ಟನೋಟದ ಸಮಸ್ತ್ಯಾರದಲ್ಲಿ ಬಿಸಿಲ ಬಟಾಬಯಲಿನಲ್ಲಿ
ಅಣ್ಣಬಣ್ಣದ ಗರಿಗಳ, ಕೆಂಪು ಕೊಕ್ಕಿನ ಹೆಸರೇ ತಿಳಿಯದ
ಅಪ್ರದಾನರೊಂದರ ಸೊಬಗು ಸಿಕ್ಕರಂತೂ ಹರಿ
ಸಿಗದಿದ್ದರೆ ಬಾಲೆ ಬಾಲೆಯಂದ ಏಳುವುದು ಹೀಗೆ
ಒಂದಾದ ಮೇಲೊಂದು

ಬಂದುದೆಲ್ಲಿಂದ ಹೋಗುವುದು ಎಲ್ಲಿಗೆ ಏನು
ಏನೊಂದು ಹೊಳೆಯದ ಹೊಳೆಯದು ಉಳಿಯದು

ಈ ತೆರೆನಾಗಿ ಒಂದರ ಹಿಂದೊಂದು ಇನ್ನೊಂದು
ಮತ್ತು ಮಗದೊಂದು ಹಿಂಡು ಹಿಂಡು

o o o o o

ಓಗೇಳುವ ಪ್ರಶ್ನೆಗಳ ಮಾತೇ ಇಲ್ಲದೆ ಎಲೆ
ಎಲೆಯುಂಟು ನಿಂತ ಮರದ ರೆಂಬೆಗಳಲ್ಲಿ ಒಂದು
ಕೊಕ್ಕರೆಧಾಮ.

ಮನದ ರೆಂಬೆಗಳ ಮೇಲೆ ಕೂತು ಮುಕ್ಕುವ
ಆಡು ಮಾತಿನ ಕುರುಡಿಗೆ ಕೆಳೆಗಾಣುವದೊಂದು ಲೋಕ
ಆ ಲೋಕದಲ್ಲಿ ಚೆಲ್ಲಾಪಿಲ್ಲಿ ಮೀನುಗಳ ಮೂಳೆ
ತಟಿಕೆಗಳ ಕೆಳಹೂತ ಒಗರಿನಡಿ, ಒಂದಾನೊಂದು
ಕಾಲದಲ್ಲಿ ರೈಂಬಗಳು ತೊಟ್ಟ ಮಿಡಿಗಾಯಿಗೆ ಕೈ
ಎಟುಕಿಸುತ ಮೂಡಿದ ಪುಟ್ಟ ಪಾದಗಳು
ಜಿಗಿದಾಡಿ ಜೀವ

ಜೀವವಾಗಿ ಕೆರೆಕೊಳೆದಲಾಡಿದ ಘಟನೆಗಳೇ
ಘಟಾನು ಘಟಗಳು ಹೀಗೆ ಬಿದ್ದಿವೆ ಮತ್ಸ್ಯ
ಸಂಕುಲದ ಅಸ್ಥಿಪಂಜರಗಳು

o o o o o

ಕೂಳೆದು ಉಣ ಹೋದದ್ದೇ ಒಮ್ಮೊಮ್ಮೆ ಕೊಕ್ಕರೆಗೆ
ಬಿಟ್ಟಿರುವ ಗಾಳ ಕುರುಡೇ ಇದು ಕೊಕ್ಕರ
ಮಂಗಳ ಮಾಧುರ್ಯದ ಗೋವಿನ ಕೊರಳಲ್ಲೇ
ಹುಟ್ಟುತ್ತದೆ ಧ್ವನಿ ಕೊಕ್ಕರೆ ವಿಕಾರ, ರೆಕ್ಕೆ
ಬಡಿಯುತ್ತ ಪ್ರಾಣ, ಪ್ರಾಣಕ್ಕೆ ಪ್ರಾಣದ ಕೊಕ್ಕು
ಕೊಡುವ ಘಟನೆಗಳೆ ಕೊಕ್ಕರೆಯು ವಿಲಿ ವಿಲಿಯೇ
ಆಡಾಡಿಸುವುದು ತೂಗುವುದು ಹಸುಗೊರಳ ಗೆಜ್ಜೆ
ಗಿಲಕಿಗಳನ್ನು ರೆಕ್ಕೆಯಾಡಿಸಿದರೂ ಹಾರಲಾಗದ ಘಟ
ಹೋಗುವುದು ಹಾರಿ ಪ್ರಾಣಪಕ್ಷಿ

ಎಲ್ಸಿ. ನಾಗರಾಜು

ವಿಜ್ಞಾನಿಗಳ ಸಾಮಾಜಿಕ ಜವಾಬ್ದಾರಿ

ಬರ್ಟ್ರಾಂಡ್ ರಸೆಲ್

- 1 -

ವಿಜ್ಞಾನ ತಾನು ಬೆಳೆದು ಬಂದಂದಿನಿಂದಲೂ ಶುದ್ಧ ವಿಜ್ಞಾನದ ವ್ಯಾಪ್ತಿಯ ಹೊರಗಿರುವ ವಿಷಯಗಳ ಮೇಲೂ ಪ್ರಭಾವ ಬೀರಿದೆ. ಅಂತಹ ಪ್ರಭಾವಗಳ ಜವಾಬ್ದಾರಿಯ ಬಗ್ಗೆ ವಿಜ್ಞಾನಿಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರ ಪ್ರಕಾರ, ಸಮಾಜದಲ್ಲಿ ವಿಜ್ಞಾನಿಯ ಕೆಲಸ ಜ್ಞಾನವನ್ನು ಕೊಡುವುದು; ಆ ಜ್ಞಾನ ಹೇಗೆ ಬಳಕೆಯಾಗುತ್ತದೆ ಎಂಬುದರ ಬಗ್ಗೆ ಅವನು ಕಾಳಜಿ ವಹಿಸಬೇಕಾಗಿಲ್ಲ. ಈ ನಿಲುವು ಎಂದಿಗೂ, ಅದರಲ್ಲೂ ನಮ್ಮ ಕಾಲದಲ್ಲಿ ಸಮರ್ಥನೀಯವಲ್ಲ. ವಿಜ್ಞಾನಿಯೂ ಒಬ್ಬ ಪ್ರಜೆ; ವಿಶೇಷವಾದ ಕೌಶಲವಿರುವ ಎಲ್ಲ ಪ್ರಜೆಗಳೂ ತಮ್ಮ ಕೌಶಲ ಸಾಮಾಜಿಕ ಹಿತಕ್ಕಾಗಿ ಉಪಯೋಗವಾಗುವುದರ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಕಾಳಜಿ ವಹಿಸುವುದು ಅವರ ಸಾಮಾಜಿಕ ಕರ್ತವ್ಯವಾಗಿರುತ್ತದೆ. ಐತಿಹಾಸಿಕವಾಗಿ ನೋಡುವುದಾದರೆ, ಸಾಮಾಜಿಕ ಜೀವನದಲ್ಲಿ ವಿಜ್ಞಾನಿಗಳ ಕರ್ತವ್ಯಗಳನ್ನು ಗುರುತಿಸಲಾಗಿದೆ. ಇಂಗ್ಲೆಂಡನ್ನು ದೀರ್ಘಕಾಲದವರೆಗೆ ಆಂತರಿಕ ಕಲಹದಲ್ಲಿ ಮುಳುಗಿಸಿದ್ದ ದುರಭಿಮಾನಕ್ಕೆ ದಿವ್ಯೌಷಧಿಯಾಗಿ ಎರಡನೆಯ ಚಾರ್ಲ್ಸ್ ರಾಯಲ್ ಸೊಸೈಟಿಯನ್ನು ಸ್ಥಾಪಿಸಿದ. ಆಗಿನ ಕಾಲದ ವಿಜ್ಞಾನಿಗಳು ಧಾರ್ಮಿಕ ಸಹಿಷ್ಣುತೆ, ಮಾಟಗಾತಿಯರನ್ನು ಪೀಡಿಸುವ ಮೌಢ್ಯ ಮತ್ತಿತರ ಸಾರ್ವಜನಿಕ ವಿಷಯಗಳ ಬಗ್ಗೆ ಮಾತನಾಡಲು ಹಿಂದೆಗೆಯಲಿಲ್ಲ. ಬೇರೆ ಬೇರೆ ಕಾಲಗಳಲ್ಲಿ, ಬೇರೆ ಬೇರೆ ರೀತಿಗಳಲ್ಲಿ ವಿಜ್ಞಾನ ಮಾನವೀಯ ದೃಷ್ಟಿಕೋನವನ್ನು ಬೆಂಬಲಿಸಿದ್ದರೂ ಇದಕ್ಕೆ ಯುದ್ಧದೊಡನೆ ಹತ್ತಿರದ, ದುಷ್ಟ ಸಂಬಂಧವಿದೆ. ರೋಮನ್ನರ ವಿರುದ್ಧ ಬಳಸಲು ಸೈರಾಕ್ಯೂಸ್‌ನ ಸರ್ವಾಧಿಕಾರಿಗೆ ಆರ್ಕಿಮಿಡೀಸ್ ತನ್ನ ಕೌಶಲವನ್ನು ಮಾರಿದ; ಕೋಟೆ ಕಟ್ಟುವ ಕೌಶಲಕ್ಕಾಗಿ ಲಿಯೊನಾರ್ಡೋ ಮಿಲಾನ್‌ನ ಡ್ಯೂಕ್‌ನಿಂದ ಸಂಬಳವನ್ನು ಪಡೆದ; ಕ್ಷಿಪಣಿಗಳ ಮಾರ್ಗಗಳನ್ನು ಲೆಕ್ಕಾಚಾರ ಮಾಡಲು ಗೆಲಿಲಿಯೋ ಟಸ್ಕನಿಯ ಡ್ಯೂಕ್ ಬಳಿ ಕೆಲಸಕ್ಕಿದ್ದ. ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ಗಿಲೊಟಿನ್‌ಗೆ ಹಾಕದಿದ್ದ ವಿಜ್ಞಾನಿಗಳಿಗೆ ಹೊಸ ಸಿಡಿಮದ್ದುಗಳನ್ನು ಕಂಡು

ಅನು : ವಿ. ಆರ್. ನಾಗಭೂಷಣ, ಇಂಗ್ಲಿಷ್ ಅಧ್ಯಾಪಕ, 1235, ಕೆ. ಎಂ. ಪುರಂ, ಮೈಸೂರು-570 004

ಹಿಡಿಯಲು ಹೇಳಲಾಯಿತು. ಆಗಿನ್ನೂ ಯುದ್ಧಾಸ್ತ್ರವಾಗಿರದಿದ್ದ ಜಲಜನಕವನ್ನು ಪತ್ತೆ ಮಾಡುತ್ತಿದ್ದ ಲವಾಸಿಯರ್‌ನನ್ನು ಉಳಿಸಲಿಲ್ಲ. ಯುದ್ಧಪಿಶಾಚಿಗಳಿಗೆ ತಲೆ ಬಾಗದೆ ಕೆಲವು ವಿಜ್ಞಾನಿಗಳು ಅಪವಾದವಾಗಿದ್ದಾರೆ. ಕ್ರಿಮಿಯನ್ ಯುದ್ಧ ನಡೆ ದಾಗ ಬ್ರಿಟಿಷ್ ಸರ್ಕಾರವು ವಿಷದ ಅನಿಲಗಳನ್ನು ಆಕ್ರಮಣದಲ್ಲಿ ಬಳಸುವ ಸಾಧ್ಯತೆಯ ಬಗ್ಗೆ ಫ್ಯಾರಡೆಯ ಸಲಹೆಯನ್ನು ಕೇಳಿತು. ಅದು ಸಾಧ್ಯ, ಆದರೆ ಅಮಾನವೀಯ ವೆಂದೂ ತಾನು ಆ ಬಗ್ಗೆ ಏನೂ ಮಾಡುವುದಿಲ್ಲವೆಂದೂ ಅವನು ಉತ್ತರ ಕೊಟ್ಟ.

– 2 –

ಆಧುನಿಕ ಪ್ರಜಾಪ್ರಭುತ್ವ ಮತ್ತು ಆಧುನಿಕ ಪ್ರಚಾರ ಮಾರ್ಗಗಳು ಸಾರ್ವಜನಿಕ ಅಭಿಪ್ರಾಯದ ಮೇಲಿನ ಪ್ರಭಾವದ ಸಮಸ್ಯೆಯನ್ನು ಹಿಂದಿಗಿಂತ ಭಿನ್ನವಾಗಿಸಿದೆ. ಯಾವುದೇ ಮುಖ್ಯ ವಿಷಯದ ಬಗ್ಗೆ ಜನತೆಗಿರುವ ಜ್ಞಾನವು ಸರ್ವವ್ಯಾಪಿ ಮತ್ತು ಶಕ್ತ ಸಂಸ್ಥೆಗಳಿಂದ ಬಂದಿರುತ್ತದೆ: ಪತ್ರಿಕೆಗಳು, ರೇಡಿಯೋ ಮತ್ತು ಮುಖ್ಯವಾಗಿ ಟೆಲಿವಿಷನ್, ಸರ್ಕಾರಗಳಿರುವ ಜ್ಞಾನಕ್ಕೆ ಹೆಚ್ಚು ಮಿತಿಗಳಿರುತ್ತವೆ. ನಿಜಸ್ಥಿತಿಯನ್ನು ಹುಡುಕಲು ಅವು ಶ್ರಮ ವಹಿಸಬೇಕಾಗುತ್ತದೆ. ಸರ್ಕಾರಗಳ ಅಧೀನದಲ್ಲಿರುವವರು ಅವುಗಳಿಗೆ ಪ್ರಿಯವಾಗುವುದನ್ನು ಮಾತ್ರ ಹೇಳುತ್ತಾರೆ: ಅಷ್ಟು ಮಾತ್ರ ಅವುಗಳಿಗೆ ಗೊತ್ತಾಗುತ್ತದೆ. ನಿರ್ಲಕ್ಷಿಸಲಾಗದಷ್ಟು ಪ್ರಬಲವಾದ ಚಳವಳಿ ನಡೆದರೆ ಮಾತ್ರ ಬೇರೆ ಸಂಗತಿಗಳೂ ಸರ್ಕಾರಗಳಿಗೆ ತಿಳಿಯುತ್ತವೆ. ಅಧಿಕಾರಸ್ಥರ ತೀರ್ಮಾನಗಳನ್ನು ರೂಪಿಸುವ ಸತ್ಯ ಸಂಗತಿಗಳು–ಉದಾಹರಣೆಗೆ, ಮಾರಕಾಸ್ತ್ರಗಳ ಪರಿಣಾಮ–ವೈಜ್ಞಾನಿಕ ಕಾಲಿಕಗಳಲ್ಲೇ ಉಳಿದರೆ, ಇವು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತವೆ. ಚುನಾವಣೆಯ ಮೇಲೆ ಪರಿಣಾಮ ಬೀರುವಷ್ಟರ ಮಟ್ಟಿಗೆ ಹೆಚ್ಚಿನ ಮತದಾರರಿಗೆ ಈ ಸಂಗತಿಗಳು ತಿಳಿದಾಗ ಮಾತ್ರ ಇವು ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಇಂತಹ ಸಂಗತಿಗಳಿಗೆ ಪ್ರಚಾರ ಕೊಡಲು ಸಾಮಾನ್ಯವಾಗಿ ವಿರೋಧವಿರುತ್ತದೆ. ಈ ವಿರೋಧಕ್ಕೆ ಹಲವಾರು ಕಾರಣಗಳಿರುತ್ತವೆ–ಕೆಲವು ದುಷ್ಟ. ಕೆಲವು ಸ್ವಲ್ಪ ಸಭ್ಯ. ಇವುಗಳಲ್ಲಿ ಅತ್ಯಂತ ಅನೈತಿಕವಾದದ್ದೆಂದರೆ ಯುದ್ಧಾಸ್ತ್ರಗಳನ್ನು ತಯಾರಿಸುವ ಕಾರ್ಖಾನೆಗಳ ಹಣಕಾಸಿನ ಆಸಕ್ತಿ. ಗೌಪ್ಯತೆಯಲ್ಲಿ ಮತ್ತು 'ಗಡಸುತನ'ದಲ್ಲಿ ನಂಬಿಕೆ ಇಡುವ ವಿವೇಚನಾರಹಿತ ದೇಶಭಕ್ತಿಯ ಪ್ರಭಾವಗಳು ಇನ್ನೊಂದು ಕಾರಣ, ಇವೆರಡಕ್ಕಿಂತ ಮುಖ್ಯವಾದದ್ದೆಂದರೆ, ಈ ಸತ್ಯ ಸಂಗತಿಗಳು ಅಹಿತಕರವಾಗಿರುವುದು. ಇದರಿಂದಾಗಿ ಜನರು ಹೆಚ್ಚು ಹಿತವೆನಿಸುವ ವಿಷಯಗಳಾದ ವಿವಾಹ ವಿಚ್ಛೇದನೆ ಮತ್ತು ಕೊಲೆಗಳ ಬಗ್ಗೆ ಗಮನ ಹರಿಸುತ್ತಾರೆ. ಇದರ ಪರಿಣಾಮವೆಂದರೆ, ಎಲ್ಲರಿಗೂ ತಿಳಿಯಬೇಕಾದ ವಿಷಯಗಳು ಯಾರಿಗೂ ತಿಳಿಯದೇ ಹೋಗುತ್ತವೆ, ನಿರ್ಲಿಪ್ತರಾದ ಜನರು ಈ

ವಿಷಯಗಳನ್ನು ಎಲ್ಲರಿಗೂ ತಿಳಿಸಲು ತೀವ್ರವಾದ ಪ್ರಯತ್ನಗಳನ್ನು ಮಾಡಿದಾಗ ಮಾತ್ರ ಇವು ಎಲ್ಲರನ್ನು ತಲಪುತ್ತವೆ. ವಿಜ್ಞಾನಿಗಳ ಸಹಾಯವಿಲ್ಲದೆ ಈ ಕೆಲಸ ಯಶಸ್ವಿಯಾಗುವುದಿಲ್ಲ. ದಾರಿ ತಪ್ಪಿಸುವ, ಮೃತ್ಯುವಿನ ವ್ಯಾಪಾರಿಗಳಾಗಿ ಹೋಗಿರುವ ವಿಜ್ಞಾನಿಗಳನ್ನು ಎದುರಿಸಲು ಪ್ರಮಾಣಬದ್ಧವಾಗಿ ಮಾತನಾಡುವ ವಿಜ್ಞಾನಿಗಳಿಂದ ಮಾತ್ರ ಸಾಧ್ಯ. ನಿರ್ಲಿಪ್ತರಾದ ವಿಜ್ಞಾನಿಗಳು ಈ ಬಗ್ಗೆ ಕಾಳಜಿ ವಹಿಸದಿದ್ದರೆ, ಇತರ ವಿಜ್ಞಾನಿಗಳು ಜನರಿಗೆ ಮತ್ತು ರಾಜಕಾರಣಿಗಳಿಗೆ ತಪ್ಪು ಅಭಿಪ್ರಾಯ ಮೂಡಿಸುವಲ್ಲಿ ಯಶಸ್ವಿಯಾಗುತ್ತಾರೆ.

- 3 -

ಮನುಷ್ಯನ ವೈಯುಕ್ತಿಕ ಕ್ರಿಯೆಗಳಿಗೆ ಹಿಂದೆ ಇರದಿದ್ದ ಅಡೆತಡೆಗಳು ಈಗ ಇವೆ ಎಂಬುದನ್ನು ಒಪ್ಪಬೇಕು. ಗೆಲಿಲಿಯೋ ತನ್ನ ಟೆಲಿಸ್ಕೋಪನ್ನು ತಾನೇ ಮಾಡಿಕೊಂಡ. ತಮ್ಮ ಕೆಲಸಕ್ಕೆ ತಾವು ಅವಲಂಬಿಸುವ ಟೆಲಿಸ್ಕೋಪು ಅತ್ಯಂತ ಶ್ರೀಮಂತರ ದಾನದಿಂದ ತಯಾರಾಗಿದೆ. ಅವರೊಡನೆ ಸ್ನೇಹದಿಂದ ಇರದಿದ್ದರೆ ತಮ್ಮ ಶೋಧನೆಗಳು ಸಾಧ್ಯವಾಗುತ್ತಿರಲಿಲ್ಲ ಎಂದು ಒಬ್ಬ ಪ್ರಖ್ಯಾತ ಖಗೋಳ ಶಾಸ್ತ್ರಜ್ಞರು ನನಗೆ ಹೇಳಿದರು. ಒಬ್ಬ ವಿಜ್ಞಾನಿ ತನ್ನ ದೇಶದ ಸರ್ಕಾರದ ಪರವಾಗಿದ್ದರೆ ಅತ್ಯಂತ ದುಬಾರಿಯಾದ ಉಪಕರಣಗಳು ಅವನಿಗೆ ಲಭ್ಯವಾಗುತ್ತವೆ. ತಾನು ಬಂಡಾಯದ ನಿಲುವನ್ನೇನಾದರೂ ತಳೆದರೆ, ತಾನು ಮತ್ತು ತನ್ನ ಸಂಸಾರ ಉಳಿದ ಮನುಷ್ಯ ಜನಾಂಗದ ಜೊತೆ ನಾಶವಾಗಬಹುದೆಂದು ಅವನಿಗೆ ಗೊತ್ತು. ಇದೊಂದು ದುರಂತ ದ್ವಂದ್ವ. ಯಾವುದೇ ನಿರ್ಧಾರವನ್ನು ಅವನು ತೆಗೆದುಕೊಳ್ಳಲಿ ಅವನನ್ನು ಖಂಡಿಸುವುದು ಸರಿಯಲ್ಲ. ಆದರೆ ಈ ಬಗ್ಗೆ ವಿಜ್ಞಾನಿಗಳ ನಾಯಕತ್ವದಲ್ಲಿ ಅಥವಾ ಅವರ ಸ್ಫೂರ್ತಿಯಿಂದ ತೀವ್ರವಾಗಿ ಏನೂ ಮಾಡದಿದ್ದರೆ, ಮನುಷ್ಯ ಜನಾಂಗ ವಿಜ್ಞಾನದ ಕೌಶಲಗಳು ತನಗಾಗಿ ಸಿದ್ಧಪಡಿಸಿದ ಕೇಡನ್ನು ತಿಳಿದುಕೊಳ್ಳದೆ ಅವುಗಳಿಂದಲೇ ನಾಶವಾಗುತ್ತದೆ. ಇದನ್ನು ವಿಜ್ಞಾನಿಗಳು ಅರ್ಥಮಾಡಿಕೊಳ್ಳಬೇಕು.

'ನನ್ನ ಕೆಲಸ ಜ್ಞಾನವನ್ನು ಕೊಡುವುದು. ಅದು ಹೇಗೆ ಬಳಕೆಯಾಗುತ್ತದೆ ಎಂಬುದು ನನ್ನ ಜವಾಬ್ದಾರಿಯಲ್ಲ' ಎಂದು ಆಧುನಿಕ ಪ್ರಪಂಚದಲ್ಲಿ ಯಾವ ವಿಜ್ಞಾನಿಯೂ ಹೇಳಲು ಸಾಧ್ಯವಿಲ್ಲ. ವಿಜ್ಞಾನಿಗಳು ಒದಗಿಸುವ ಜ್ಞಾನ ದುಷ್ಟ ಗುರಿಗಳನ್ನು ಸಂಸ್ಥೆಗಳಿಗೆ ಸಿಕ್ಕಿಬಿಡಬಹುದು. ಇದನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವಿಲ್ಲದಿದ್ದರೂ ದುಷ್ಕೃತ್ಯದ ಪ್ರಮಾಣವನ್ನು ವಿಜ್ಞಾನಿಗಳು ಕಡಿಮೆ ಮಾಡಬಹುದು.

ವಿಜ್ಞಾನಿಗಳು ಇನ್ನೊಂದು ರೀತಿಯಲ್ಲಿ ನಾಯಕತ್ವವನ್ನು ವಹಿಸಿಕೊಳ್ಳಲು

ಪ್ರಯತ್ನಿಸಬಹುದು. ಜನರಿಗೆ ಪ್ರಯೋಜನಕಾರಿಯಾದ, ಹಾನಿಕರವಲ್ಲದ ಕೆಲವು ವಿಜ್ಞಾನದ ಉಪಯೋಗಗಳ ಪ್ರಾಮುಖ್ಯತೆಯನ್ನು ಅವರು ಸೂಚಿಸಬಹುದು. ಈಗ ಶಸ್ತ್ರಾಸ್ತ್ರಗಳಿಗಾಗಿ ಖರ್ಚು ಮಾಡುತ್ತಿರುವ ಹಣವನ್ನು ಆಹಾರ ಸಾಮಗ್ರಿಗಳ ಉತ್ಪಾದನೆ, ವಿತರಣೆಗಳಿಗಾಗಿ ಮತ್ತು ಜನಸಂಖ್ಯೆಯ ನಿಯಂತ್ರಣಕ್ಕಾಗಿ ಉಪಯೋಗಿಸಿದರೆ ಏನಾಗಬಹುದು ? ಪ್ರಪಂಚದ ಅರ್ಧದಷ್ಟು ಜನರನ್ನು ಕಾಡುತ್ತಿರುವ ಬಡತನ ಮತ್ತು ಆಹಾರದ ಕೊರತೆಯನ್ನು ಕೆಲವು ದಶಕಗಳಲ್ಲಿ ಕೊನೆಗಾಣಿಸಬಹುದು. ಅದರಿಂದ ಎಲ್ಲ ದೊಡ್ಡ ದೇಶಗಳ ಸರ್ಕಾರಗಳು ತಮ್ಮ ಜನರನ್ನು ಉಳಿಸುವ ಬದಲು ಹೊರ ದೇಶಗಳ ಜನರನ್ನು ಕೊಲ್ಲುವುದಕ್ಕಾಗಿ ಹಣ ವೆಚ್ಚ ಮಾಡುವುದೇ ಒಳ್ಳೆಯದೆಂದು ತಿಳಿದಿವೆ. ಯಾವುದೇ ವಿಷಯದಲ್ಲಾಗಲೀ ಆಶಾಭಾವನೆಯ ಸಾಧ್ಯತೆಗಳನ್ನು ಖಚಿತವಾಗಿ ರೂಪಿಸಿ, ಅಧಿಕಾರಯುತವಾಗಿ ಹೇಳುವುದು ವಿಜ್ಞಾನಿಗಳಿಗೆ ಸಾಧ್ಯವಿದೆ. ಇದನ್ನು ಇವರು ಇತರರಿಗಿಂತ ಚೆನ್ನಾಗಿ ಮಾಡಲು ಸಾಧ್ಯವಾದ್ದರಿಂದ, ಇದು ಇವರ ಕರ್ತವ್ಯದ ಒಂದು ಭಾಗವೇ ಆಗಿದೆ.

ಪ್ರಪಂಚ ತಾಂತ್ರಿಕವಾಗಿ ಒಂದಾಗುತ್ತಾ ಹೋದಂತೆ ದಂತಗೋಪುರದ ಜೀವನ ಅಸಾಧ್ಯವಾಗುತ್ತದೆ. ಅಷ್ಟೇ ಅಲ್ಲ : ಹೆಚ್ಚು ಮಾನವ ಕ್ರಿಯೆಗಳನ್ನು ನಿಯಂತ್ರಿಸುವ ಶಕ್ತ ಸಂಸ್ಥೆಗಳನ್ನು ಎದುರಿಸುವ ಯಾವೊಬ್ಬನೂ ಪ್ರಕಾಶಮಾನವಾದ ಭೂದೃಶ್ಯವನ್ನು ನೋಡುತ್ತ ದಂತಗೋಪುರದಲ್ಲಿರಲು ಸಾಧ್ಯವಿಲ್ಲ ; ಬದಲಾಗಿ, ಆ ದಂತಗೋಪುರದ ಆಧಾರವಾದ ಪಾತಾಳದ ಕತ್ತಲೆಯ ಜೈಲಿನಲ್ಲಿ ಇರಬೇಕಾಗುತ್ತದೆ ಇಂತಹ ಸ್ಥಳಕ್ಕೆ ಹೋಗಲು ಧೈರ್ಯ ಬೇಕಾಗುತ್ತದೆ. ಈ ಅಪಾಯವನ್ನು ಎದುರಿಸು ಹೆಚ್ಚು ಜನ ಸಿದ್ಧವಿದ್ದರೆ ಅವರು ಪಾತಾಳದ ಜೈಲನ್ನು ತುಂಬಬೇಕಾದ ಅಗತ್ಯವಿರುವುದಿಲ್ಲ. ಏಕೆಂದರೆ, ಆಧುನಿಕ ಪ್ರಪಂಚ ವಿಜ್ಞಾನಿಗಳ ಮೇಲೆ ಅವಲಂಬಿತವಾಗಿದೆ ಎಂಬುದು ಪ್ರತಿಯೊಬ್ಬರಿಗೂ ಗೊತ್ತು. ಅವರು ಒತ್ತಾಯಿಸಿದರೆ ಅವರ ಮಾತನ್ನು ಇತರರು ಕೇಳಲೇಬೇಕಾಗುತ್ತದೆ. ಒಳ್ಳೆಯ ಪ್ರಪಂಚವನ್ನು ನಿರ್ಮಿಸುವ ಶಕ್ತಿ ನಮಗಿದೆ. ಅದ್ದರಿಂದ, ಶ್ರಮ ವಹಿಸಿ ಮತ್ತು ಅಪಾಯಗಳನ್ನು ಎದುರಿಸಿ ನಾವು ಇದನ್ನು ಸಾಧಿಸಬೇಕು.

●

"What is a rebel ? A man who says no, but whose refusal does not imply a renunciation"

—ALBERT CAMUS

ಚೆನ್ನವೀರ ಕಣವಿಯವರೊಂದಿಗೆ :

ಜಿ.ವಿ. ಆನಂದಮೂರ್ತಿ, ವೀಜಿ, ಕೇ.ಬಿ. ಸಿದ್ದಯ್ಯ

ಸಾಹಿತ್ಯ-ಕಾವ್ಯ ಎಂದರೆ ಇದ್ದಬಿದ್ದ ಕೆಲಸವನ್ನೆಲ್ಲಾ ಮರೆತು ಒಂದು ಕೈ ಮುಂದಾಗಿಯೇ ಮಾತಾಡುವ ವೀಜಿಯವರನ್ನು ಮುಂದುಮಾಡಿಕೊಂಡು ನಾನು ಮತ್ತು ಕೇಬಿ ಕಣವಿಯವರನ್ನು ಸಂಪರ್ಕಿಸಲು ದಿನಗೊತ್ತುಮಾಡಿಕೊಂಡೆವು. ಆ ಮುಂಚೆ ನಾವು ಮೂವರೂ (ವೀಜಿ. ಆನಂದಮೂರ್ತಿ. ಕೇಬಿ) ಕಲೆತು ಪ್ರಶ್ನೆ-ಗಳನ್ನು ರೆಡಿಮಾಡಿ ಅವರಿಗೆ ತಲುಪಿಸಿ. ಮತ್ತೆ ಕಣವಿಯವರೇ ತಿಳಿಸಿದ ದಿನದಂದು ಕೊಟ್ಟ ಪ್ರಶ್ನಾವಳಿಗಳಿಗೆ ಉತ್ತರಪಡೆಯಲು ಅವರ ಮನೆತಲುಪಿದೆವು. ಈ ನಡುವೆ ನಾವು ಬರೆದುಕೊಡದೆ ಇದ್ದ ಇನ್ನಷ್ಟು ಪ್ರಶ್ನೆಗಳಿಗೆ ನೇರವಾಗಿ ಅವರ ಮುಖೇನವೇ ಉತ್ತರ ಪಡೆಯಬಹುದು ಎಂದುಕೊಂಡೆವು. ನಾವು ಮೂವರೂ ಕಣವಿಯವರೊಂದಿಗೆ ಮಾತಾಡಿದ ಅವಧಿಯೊಳಗಿನ ಕಾವ್ಯಕ್ಕೆ ಸಂಬಂಧಿಸಿದ ಮಾತುಕತೆಗಳನ್ನು ಸಂವಾದದ ರೂಪಕ್ಕೆ ಇಳಿಸಿ ಉಳಿದಂತೆ ನಾವು ಕೊಟ್ಟಿದ ಪ್ರಶ್ನೆಗಳಿಗೆ ಅವರು ಬರೆದುಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಇಲ್ಲಿ ಕಾಣಿಸಲಾಗಿದೆ.

ಕಣವಿಯವರ ಶಿಸ್ತಿನ ಸಾಂಪ್ರದಾಯಿಕ ಮಾತುಗಳೊಂದಿಗೆ ಮೊದಲ ಸುತ್ತಿನ ಟೀ ಕುಡಿಯುತ್ತಿರುವಾಗಲೆ ವೀಜಿಯವರು ಕಣವಿಯವರ ಬಾಲ್ಯ ಜೀವನದ ಬಗ್ಗೆ ಶುರು

ಸುಮಾರು ನಾಲ್ಕು ದಶಕಗಳಿಂದಲೂ ಕಾವ್ಯರಚನೆ ಮಾಡುತ್ತಿರುವ ಕಣವಿಯವರಿಗೆ ಈಗ ಅರವತ್ತರ ಪ್ರಾಯ. 1949 ರಿಂದ ತಮ್ಮ ಕಾವ್ಯಜೀವನ ಆರಂಭಿಸಿದ ಕವಿ ಇಂದಿನವರೆಗೂ ತಮ್ಮ ಬರವಣಿಗೆಯನ್ನು ಮುಂದುವರಿಸಿದ್ದಾರೆ. ಹೊಸಗನ್ನಡದ ಎಲ್ಲಾ ಪ್ರಮುಖ ಸಾಹಿತ್ಯಮಾರ್ಗಗಳಿಂದಲೂ ತಮ್ಮ ಕಾವ್ಯವನ್ನು ಸಮೃದ್ಧಿಗೊಳಿಸುತ್ತ ತಮ್ಮದೇ ಆದ 'ಸ್ಥಿರ' ಮಾರ್ಗವೊಂದನ್ನು ಕಂಡುಕೊಂಡಿರುವ ಕಣವಿಯವರು ಮೂಲತಃ ಸ್ನೇಹಜೀವಿ. ಜೀವನದಿಂದ ಸದಾ ಒಳ್ಳೆಯದನ್ನೇ ಬಯಸುತ್ತಾ ಅದನ್ನೇ ಕಾವ್ಯದಲ್ಲಿ ಕಾಣಿಸುತ್ತಾ ಬಂದವರು. ಎಲ್ಲರೊಂದಿಗೂ ಮಧುರ ಭಾವ ಸಂಬಂಧವನ್ನು ಇಟ್ಟುಕೊಂಡು ಬಂದಿರುವ ಕಣವಿಯವರಂತೆಯೇ ಅವರ ಕಾವ್ಯವೂ ಕೂಡ ಸಂಘರ್ಷಾವಸ್ಥೆಗಳಿಂದ ದೂರವುಳಿಯುವಂತದ್ದು. ಹೊಸಗನ್ನಡ ಕಾವ್ಯದ ದಿನಗಳಲ್ಲಿ ಕವಿ ಅನೇಕ [illegible] ಒಂದು ಗೌರವದ ಹೆಸರೂ ಹೌದು. ಈಗ ಅರವತ್ತರ ಪ್ರಾಯಕ್ಕೆ ಕಾಲಿಟ್ಟಿರುವ ಕಣವಿಯವರಿಗೆ ' [illegible] ' ಪತ್ರಿಕೆ ಶುಭವನ್ನು ಹಾರೈಸುತ್ತದೆ. - ಸಂ

ಜಿ.ವಿ. ಆನಂದಮೂರ್ತಿ 'ಸಿರಿ' ವೈ. ಎನ್. ಪುರ. ರಾಯರಕೊಪ್ಪಲು (ಹಾಸನಜಿಲ್ಲೆ)

ಮಾಡಿ ಮಾತಿಗೆ ಎಳೆದಿದ್ದರು. ಟೀ ಎಂದರೇನೆ ಕೊಂಚ ಧ್ಯಾನಸ್ಥನಾಗುವ ಕೇಬಿ ಮತ್ತು ನಾನು ಕಣವಿಯವರ ಮಾತಿನತ್ತ ಕಣ್ಣುತಿರುಗಿಸಿದಾಗ ;

ಕಣವಿ : ನಾನು ಹುಟ್ಟಿದ್ದು ಗದುಗಿನ ಹೊಂಬಾಳ ಗ್ರಾಮದಲ್ಲಿ, ನಾನು 'ಭಾವಜೀವಿ' ಆಗೋದಕ್ಕೆ ಕಾರಣವಾದ ಪರಿಸರ ಅಲ್ಲಿತ್ತು. ನಮ್ಮ ಹಳ್ಳಿಯ ಕಪಿಲೆ ಭಾವಿಯ ಲಯ. ಭಾವಿಯ ರಾಟೆಯ ಶಬ್ಧ. ನವಿಲುಗಳ ಲಾಸ್ಯ ನನ್ನಲ್ಲಿದ್ದ ಕವಿ ಮನಸ್ಸನ್ನು ಎಚ್ಚರಗೊಳಿಸಿದವು. ನಮ್ಮ ಹಳ್ಳಿಯ ಅಜೀಜಿ ಇದ್ದ ಲಂಬಾಣಿ ತಾಂಡದ ಜನಗಳು, ಎಲ್ಲಕ್ಕಿಂತ ಹೆಚ್ಚಾಗಿ ಕಮ್ಮಾರರ ಕುಲುಮೆ, ಕುಂಬಾರರ ತಿಗುರಿ ಈ ಎರಡೂ ಪ್ರಥಮ ಭಾರಿಗೆ ಹಾಗು ಇಂದಿಗೂ ನನ್ನ ಮನಸ್ಸಿನಲ್ಲಿ ಉಳಿದು ಬಂದಿದೆ. ನಿಜವಾದ ಸೃಜನ ಶೀಲತೆಯ ಶಕ್ತಿ ನನಗೆ ಅರಿವಾದದ್ದು ಆಗಲೆ.

ಕೇಬಿ : ನಿಮ್ಮಲ್ಲಿದ್ದನ್ನು ನೀವು ಕಂಡದ್ದರಿಂದ ನಿಮಗೆ ಆಶ್ಚರ್ಯ ಉಂಟಾಯಿತೊ !

ಕಣವಿ : ಇವತ್ತಿಗೂ ಆ ಅಚ್ಚರಿ ನನ್ನನ್ನು ಕಾಡುತ್ತಿವೆ.

ಕೇಬಿ : ಕೆಲವು ವೃತ್ತಿಗಳು, ಕಲೆಗಳು ಒಬ್ಬರಲ್ಲಿ ಇಲ್ಲದಿದ್ದು ಅದು ಇನ್ನೊಬ್ಬರಲ್ಲಿದ್ದಾಗ ಆಶ್ಚರ್ಯ ಉಂಟು ಮಾಡಬಹುದೇನೊ ! ಇದು ನಮ್ಮ Culture ನ ಸೈಕಾಲಜಿ ಇರಬಹುದು.

ವೀಚಿ : ನಿಮ್ಮ ತಂದೆ-ತಾಯಿಗಳ ಪ್ರಭಾವ ನಿಮ್ಮ ಮೇಲೆ ಆಗಿದೆಯೇ ?

ಕಣವಿ : ನನ್ನ ತಾಯಿ ಕಷ್ಟಸಹಿಷ್ಣು ಜೀವಿ. ಹಾಗೆ ನೋಡಿದರೆ ನನ್ನ ತಂದೆ ಪ್ರಭಾವ ಬರಹದ ವ್ಯಕ್ತಿಯಿಂದ ನನಗೆ ಈಗಲೂ ಇದೆ. ನಮ್ಮ ತಂದೆ ಮಾಸ್ತರರಾಗಿದ್ದವರು. ಅವರು ಮುಂಜಾನೆಯ ಎದ್ದು ಕಾವ್ಯವಾಚನ ಮಾಡುತ್ತಿದ್ದರು. ಇವರೊಟ್ಟಿಗೆ ನಮ್ಮ ಹಳ್ಳಿಯ ಶಾಲಾ ಮಾಸ್ತರರ ಪ್ರಭಾವವೂ ನನ್ನ ಮೇಲೆ ಆಗಿದೆ. ಶಿರಹಟ್ಟಿಯ ಜಾತ್ರೆ. ಅಲ್ಲಿನ ಹಿಂದೂ-ಮುಸ್ಲಿಂ ಬಾಂಧವ್ಯ ಇವೆಲ್ಲ ನನಗೆ ಇಂದಿಗೂ ಕಾಡುತ್ತಿದೆ. ನಾನು ಶಾಲೆಯಲ್ಲಿ ಜಾಣನಾಗಿದ್ದೆ. ಹೈಸ್ಕೂಲಿನಲ್ಲೇ ನನ್ನ ಮೊದಲ ಬರಹಗಳು ಶುರುವಾದದ್ದು ನನ್ನ ಮೊದಲ ಕವಿತೆಗಳು ಪ್ರಕಟವಾದದ್ದು ಶಾಲಾ ಹೊತ್ತುಗೆಯಲ್ಲಿಯೇ. ಈಹೊತ್ತು ಆ ನನ್ನ ಬಾಲ್ಯದ ಜಗತ್ತನ್ನು ಕಳೆದು ಕೊಂಡಿದ್ದರ ಬಗ್ಗೆ ಹಳಹಳಿಕೆ ಇದೆ. ನನ್ನ ಎರಡನೆ ಕೃತಿ 'ಭಾವಜೀವಿ' ಒಂದು ತರಹದ Semi Autobiographical ಕೃತಿ. ನನ್ನ ಬಾಲ್ಯದ ದಿನಗಳೆಲ್ಲಾ ಇಲ್ಲಿವೆ.

ಆನಂದಮೂರ್ತಿ : ಸಾರ್, ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ

ಧಾರವಾಡ ಮಹತ್ತರವಾದ ಪಾತ್ರವಹಿಸುತ್ತಾ ಬಂದಿದೆ. ಅಲ್ಲೇ ಇದ್ದ ನಿಮಗೂ ಏನಾದರೂ ನೆರವಾಯಿತೆ ?

ಕಣವಿ : ಆಗಾಗಲೆ ಧಾರವಾಡ ಕರ್ನಾಟಕದ ಸಾಂಸ್ಕೃತಿಕ ಕೇಂದ್ರವಾಗಿತ್ತು. ಅಲ್ಲಿನ ಕರ್ನಾಟಕ ಸಂಘ ಕ್ರಿಯಾಶೀಲವಾಗಿತ್ತು. ಅವೆಲ್ಲಾ ನನ್ನ ಕಾವ್ಯ ಜೀವನದ ಮೇಲೆ ಪ್ರಭಾವ ಬೀರಿವೆ. ಆಗಿನ ಧಾರವಾಡವೂ ಒಂದು ಹಕ್ಕಿಯಂತೆಯೇ ಇದು. ದರಿಂದ ನನಗೆ ಅಪರಿಚಿತ ಎನಿಸಲಿಲ್ಲ. ಆಗ ಧಾರವಾಡದಲ್ಲಿ ಎಷ್ಟು ಜನ ಕವಿಗಳಿದ್ದರು ಎನ್ನುವುದಕ್ಕೆ ಒಂದು ಮಾತು ಚಾಲ್ತಿಯಲ್ಲಿತ್ತು. 'ಧಾರವಾಡದಲ್ಲಿ ಯಾರಾದರೂ ಕಣ್ಮುಚ್ಚಿ ಒಂದು ಕಲ್ಲೆಸೆದರೆ. ಅದು ಯಾವುದಾದರೂ ಒಬ್ಬ ಕವಿಯ ತಲೆಯ ಮೇಲೆಯೇ ಬೀಳುತ್ತದೆ.' ಒಂದು ಮುಖ್ಯ ಸಂಗತಿ ಎಂದರೆ ನಾನು ಒಂದು ಹಂತಕ್ಕೆ ಬರುವವರೆಗೆ ನನಗೆ ಬೇಂದ್ರೆಯವರ ಪರಿಚಯವಾಗಿರಲಿಲ್ಲ. 1956 ರಲ್ಲಿ ಅವರು ಧಾರವಾಡಕ್ಕೆ ಬಂದರು. ನನ್ನ 'ದೀಪಧಾರಿ' ಸಂಕಲನ ಅವರಿಗೆ ಅರ್ಪಿಸಿದೆ. ಅನಂತರ ನನಗೆ ಅವರ ಪರಿಚಯವಾದದ್ದು.

ಜೋಶಿಯವರ ಮನೋಹರ ಗ್ರಂಥಮಾಲೆಯೂ ಜೊತೆಗಿದ್ದ ಕಾಲ ಅದು. ಆದರೆ ಗ್ರಂಥಮಾಲೆಯವರು ನನ್ನನ್ನು ಎಂದೂ 'ಕಾವ್ಯ' ಕೊಡಿ ಎಂದು ಕೇಳಿದವರಲ್ಲ ಅವರು ನನ್ನನ್ನು ಕಾದಂಬರಿ ಕೊಡಿ ಅಂತ ಮಾತ್ರ ಕೇಳುತ್ತಿದ್ದರು. ಅದರ ಕಾರಣ ನನಗೂ ಗೊತ್ತಿಲ್ಲ. ಇಷ್ಟಾದರೂ ಜೋಶಿಯವರ 'ಅಟ್ಟದ' ಚರ್ಚೆಗೆ ನಾವೆಲ್ಲಾ ಹೋಗುತ್ತಿದ್ದೆವು. ಅಡಿಗರ ಪರಿಚಯ 50ರಲ್ಲಾಯಿತು. ನನ್ನ ಮೊದಲ ಸಂಕಲನ ಪ್ರಕಟಿಸಿದವರು ಬಿರೇಮಲ್ಲೂರು ಈಶ್ವರನ್ ಅವರು. 'ಭಾವಜೀವಿ' ಪ್ರಕಟಮಾಡಿದವರು ಕಟ್ಟಿಮನಿ ಅವರು. ಹೀಗೆ ನಿರಂಜನ. ರಾಮಾನುಜನ್ ಇವರೆಲ್ಲ ನನ್ನೊಂದಿಗೆ ಗಾಢವಾದ ಸಂಬಂಧ ಹೊಂದಿದ್ದವರು. ಹೀಗಾಗಿ ನಾನು ಸ್ನೇಹಜೀವಿ. ಧಾರವಾಡದಲ್ಲಿ ಗುಂಪುಗಾರಿಕೆ ಇತ್ತು. ಆದರೆ ನಾನು ಯಾವುದಕ್ಕೂ ಒಳಗಾಗಲಿಲ್ಲ. ಅಲ್ಲದೆ ನನ್ನ ಗುಣ ಎಂದರೆ ಎಲ್ಲಾ ಕಡೆ ಇರುವ ಒಳ್ಳೆಯದನ್ನು ಸ್ವೀಕರಿಸುವುದಷ್ಟೆ. ಅದು ನನ್ನ ಕಾವ್ಯ ಜೀವನದ ವಿಶಿಷ್ಟತೆ. ನಾನು ಯಾವಾಗಲೂ ಒಳ್ಳೆಯದರ ಪರವಾಗಿರೋಣ. ಅಂದರೆ ನನ್ನದು ಮಾಸ್ತಿಯವರ ದೃಷ್ಟಿಕೋನ ಅನಿಸುತ್ತೆ : ಒಳ್ಳೆಯದು ಒಳ್ಳೆಯದಲ್ಲದ್ದು.

ವೀಚಿ : ನವೋದಯ ದೃಷ್ಟಿಯಿಂದ ಬೇಂದ್ರೆ ಅಥವಾ ಬೆಟಗೇರಿ ಕೃಷ್ಣಶರ್ಮರಲ್ಲಿ ಯಾರ ಪ್ರಭಾವ ನಿಮ್ಮ ಮೇಲಿದೆ ?

ಕಣವಿ : ನನ್ನ ಮಟ್ಟಿಗೆ ಇಬ್ಬರು ನನ್ನೊಂದಿಗೆ ಇದ್ದವರು ಹೀಗಾಗಿ ಇಬ್ಬರ ಪ್ರಭಾವವೂ ನನ್ನ ಮೇಲೆ ಇದೆ.

ಅನಂತಮೂರ್ತಿ : ನಿಮ್ಮ ಬರವಣಿಗೆಯ ದೃಷ್ಟಿಯಿಂದ ನಿಮ್ಮ ಮೇಲೆ ಪ್ರಭಾವ ಬೀರಿದ ಕವಿಗಳಾರು ?

ಕಣವಿ : ಮೊದಲಿಗೆ ಬೇಂದ್ರೆಯವರ ಕಾವ್ಯದ ಪ್ರಭಾವ ಆಯಿತು. ಹಾಗೆಯೇ ಅವರಿಂದ ಬಿಡಿಸಿಕೊಂಡು ಪಾರಾಗಿದ್ದೇನೆ ಅನಿಸಿದೆ. ಮಧುರ ಚೆನ್ನರ ಅನುಭಾವ, ಕುವೆಂಪು ನಿಸರ್ಗ ಪ್ರೇಮ (ಅವರ ರೀತಿಯಲ್ಲಿಲ್ಲ) ನನ್ನ ಮೇಲೆ ಪ್ರಧಾನ ವಾಗಿ ಪ್ರಭಾವ ಬೀರಿದೆ. ಬೇಂದ್ರೆಗೆ ಸರಿಸಮರಾಗಿ ಕಾವ್ಯ ರಚಿಸಿದವರು ಮಧುರ ಚೆನ್ನರೆ. ನನ್ನ 'ಭಾವಜೀವಿ'ಯನ್ನು ಮಧುರ ಚೆನ್ನರಿಗೆ ಅರ್ಪಿಸಿದ್ದೇನೆ.

ವೀಚಿ : ಅಡಿಗ, ಬೇಂದ್ರೆಯವರಲ್ಲಿದ್ದ ಹಾಗೆ ಸಂಘರ್ಷದ ಧ್ವನಿ ನಿಮ್ಮಲ್ಲಿ ಬಂದರೂ ಅದು ಎಲ್ಲೊ ತೇಲಿಹೋದ ಹಾಗೆ ಅನಿಸುತ್ತೆ !

ಕಣವಿ : ಇರಬಹುದು, ಅದು ನನ್ನ ಕಾವ್ಯಜೀವನದ ವಿಶಿಷ್ಟತೆ. ನವೋ ದಯದ ಭಾವ ಗೀತಾತ್ಮಕತೆಯನ್ನೂ ನಾನು ಇನ್ನೂ ಉಳಿಸಿಕೊಂಡಿದ್ದೇನೆ. ಬಹುಶಃ ಉತ್ತಮವಾದ ಕವಿತೆ ಭಾವ ಗೀತಾತ್ಮಕತೆಯನ್ನು ಉಳಿಸಿಕೊಳ್ಳುತ್ತದೆ.

ಅನಂತಮೂರ್ತಿ : ಈಗ ಬರಿತಿರೋ ನಮ್ಮ ಕವಿಗಳ ಬಗ್ಗೆ........

ಕಣವಿ : ವೆಂಕಟೇಶಮೂರ್ತಿ, ಲಕ್ಷ್ಮಣರಾವ್, ಶಿವಪ್ರಕಾಶ್ ಚೆನ್ನಾಗಿ ಬರೆಯುತ್ತಿದ್ದಾರೆ. ಸಿದ್ದಲಿಂಗಯ್ಯ ತಮ್ಮ ಕಾವ್ಯದ ಜಾಡನ್ನು ಬದಲಿಸಿಕೊಂಡಿದ್ದಾರೆ. ಇದೆಲ್ಲಾ ನೋಡಿದರೆ ಇವರಿಗೆಲ್ಲಾ ಒಂದು ಕೇಂದ್ರದೊಂದಿಗೆ ಬೆಸೆದುಕೊಳ್ಳುವ ಹಂಬಲ ಇಲ್ಲವೇನೋ ಅನ್ನಿಸುತ್ತೆ !

ಇಷ್ಟು ಹೇಳಿದ ಕಣವಿಯವರು 'ಇವರುಗಳ ಬಗ್ಗೆ ನಿಮಗೆ ಏನನಿಸುತ್ತದೆ' ಎಂದು ನಮಗೆ ಮರು ಪ್ರಶ್ನೆ ಎಸೆದರು. ಟೀ ಕುಡಿದು ಎತ್ತೆತ್ತಲೊ ಕುಳಿತಿದ್ದರೂ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದ ಕೇಬಿ ಸಿದ್ಧಯ್ಯನು ರೆಡಿಯಾಗಿ ಕುಳಿತ.

ಅನಂತಮೂರ್ತಿ : ಲಕ್ಷ್ಮಣರಾವ್, ಎಚ್ ಎಸ್. ವೆಂಕಟೇಶಮೂರ್ತಿಯವ ರೇನೋ ಸೀರಿಯಸ್ಸಾಗಿ ಪದ್ಯಾ ಬರೀತಿದಾರೆ, ಆದರೆ ಅವರ ಕವಿತೆಗಳು ಸೀರಿಯಸ್ಸಾಗಿ ರೋದಿಲ್ಲ. ಅವರ ಕವಿತೆಗಳು ಚೈತನ್ಯಹೀನವಾಗಿತ್ತವೆ. ವೆಂಕಟೇಶಮೂರ್ತಿಯವ ರೇನೋ ಮಹತಾಕಾಂಕ್ಷೆಯ ಕಡೆ ಹೋಗುವ ಪ್ರಯತ್ನಶೀಲ ಕವಿಯೇನೋ ಹೌದು. ಹಿಂದಿನ ಕನ್ನಡ ಕಾವ್ಯದ ರೂಪಗಳನ್ನು ಪುನರಾವರ್ತಿಸುತ್ತಿರುವ ವೆಂಕಟೇಶಮೂರ್ತಿ ಯವರ ಕವಿತೆಗಳು ಆ ಮೂಲಕ ಹೊಸದಾಗಿ ಏನು 'ಕಾಣಿಸಿವೆ' ಎಂಬ ಪ್ರಶ್ನೆ ಇಲ್ಲಿಂ ದಲೇ ಏಳುತ್ತದೆ.

ವೀಚಿ : ವೆಂಕಟೇಶಮೂರ್ತಿಯವರ ಕವಿತೆಯ ಸಾಧನಗಳು ಅವರ ಚಿಕ್ಕ-

ಶೂದ್ರ

ಚಿಕ್ಕ ಪದ್ಯಗಳ ಮೂಲಕ ವ್ಯಕ್ತವಾಗಿವೆ. ಇವರಲ್ಲಿ ಅವರ ಜೀವನೆಗೆ ಇದೆ. ಆದರೆ ಲಕ್ಷ್ಮಣರಾವ್ ಕಾವ್ಯವನ್ನು ಗಂಭೀರವಾಗಿ ತಗೊಂಡಿಲ್ಲ ಅನ್ನಿಸುತ್ತೆ. ಅವರ ಕವಿತೆಗಳು ನಮ್ಮನ್ನು 'ನಿಲಿಹಾಕಿ' ಕೆಣಕೋದಿಲ್ಲ.

ಕಣವಿ : ವೆಂಕಟೇಶಮೂರ್ತಿಯವರ ಕಥನ ಕವನಗಳು ನಿಜಕ್ಕೂ ಒಳ್ಳೆಯ ಪ್ರಯೋಗಗಳೇ, ಇವರ ಕಾವ್ಯದ ಸಾಧನೆಗಳು ನಿಜವಾಗಿಯೂ ಇಲ್ಲಿವೆ.

ಕೇಬಿ : ಲಕ್ಷ್ಮಣರಾವ್ ಮತ್ತು ವೆಂಕಟೇಶಮೂರ್ತಿಯವರ ಕವಿತೆಗಳ Value ಬದಲಾಗದೆ ಬರಿ Craftman ship ಮಾತ್ರ ಬದಲಾಗಿದೆ ಎನ್ನಬಹುದು. ಆದ್ದರಿಂದ ಇವರ ಕಾವ್ಯದಲ್ಲಿ ಗಂಭೀರವಾದದ್ದು ಇರಲು ಸಾಧ್ಯವೇ ಇಲ್ಲವೇನೋ. ಇವರ ಕವಿತೆಗಳು Renaissance ನೊಂದಿಗೆ ಕೊಂಡಿ ಹಾಕಿಕೊಂಡಿಲ್ಲ. ಕೇವಲ Revival ಆಗಿ ಉಳಕೊಂಡಿವೆ. ಆದ್ದರಿಂದ ಇವರು ಒಂದೂ ಯಥಾಸ್ಥಿತಿವಾದದ ಸಾಹಿತ್ಯ ರೂಪಗಳಷ್ಟೆ.

ಇದೇ ಚರ್ಚೆಗೆ ವೀಚಿಯವರು ರಾಮಾನುಜನ್, ಕಂಬಾರರ ಕವಿತೆಗಳನ್ನು ಎಳೆದು ಚರ್ಚಿಸುತ್ತಾ, ''ರಾಮಾನುಜನ್ ಅವರ ಕಾವ್ಯ ನಮ್ಮ ಸಂಸ್ಕೃತಿಯ ಮಹತ್ವದ ಯಾವ ಅಂಗವಾಗಿಯೂ ಇಲ್ಲದೆ ಲಘುವಾಗಿ ವ್ಯವಹರಿಸುವುದರಿಂದ ಅದು ಶ್ರೇಷ್ಠವಾದ ಕಾವ್ಯವೇನೂ ಅಲ್ಲ. ಎಷ್ಟೋ ಸಾರಿ ಕಾವ್ಯವೆಂದು ಒಪ್ಪಲಾಗುವುದಿಲ್ಲ'' ಎಂದು ಸೂಕ್ಷ್ಮವಾಗಿ ಬಿಡಿಸುತ್ತಿರುವಾಗ್ಗೆ, ಕಣವಿಯವರೇ ಆ ಚರ್ಚೆಗೆ ತೆರೆ ಎಳೆದು ಕವಯಿತ್ರಿಯವರ ಬಗ್ಗೆ ಪ್ರಸ್ತಾಪಿಸುತ್ತಾ :

ಕಣವಿ : ಶಶಿಕಲಾ ವಸ್ತ್ರದ, ಪ್ರತಿಭಾ, ಸವಿತಾ ನಾಗಭೂಷಣ್ ಇನ್ನೂ ಅನೇಕರು ಚೆನ್ನಾಗಿಯೇ ಬರೆಯುತ್ತಿದ್ದಾರೆ. ಈ ಕಾಲ ನಿಜವಾಗಿಯೂ ವಚನಕಾರರ ಕಾಲದಂತೆಯೇ ಇದೆ. ಏಕೆಂದರೆ ಇಷ್ಟೊಂದು ಜನ ಬರೆಯುತ್ತಿದ್ದಾರಲ್ಲ ಇದು ನಿಜವಾಗಿಯೂ ಸಂತೋಷ.

ವೀಚಿ : ಈ ಮಟ್ಟಿಗೂ ನಮಗೂ ಸಂತೋಷವೆ. ಆದರೆ ಒಂದು ಪ್ರಧಾನ ಕೊರತೆ ಇವರಲ್ಲಿವೆ ಎನಿಸುತ್ತೆ. ಇವರುಗಳ ಕಾವ್ಯಕ್ಕೆ ಅನುಭವದ ವೈವಿಧ್ಯ ಇಲ್ಲ ಮತ್ತು ಭಾಷೆಯ ಸೂಕ್ಷ್ಮತೆ ಕಡಿಮೆ.

ಕೇಬಿ : ಸಾರ್ ದಲಿತರು ಇದ್ದಾರೆ ಅನ್ನೊ ನಂಬಿಕೆ ಇಟ್ಕೊಂಡೆ ದಲಿತ ಸಾಹಿತ್ಯವನ್ನು ನೋಡಬೇಕಾಗುತ್ತಲ್ಲ! ಇದನ್ನ Overcome ಮಾಡೋದು ಹೇಗೆ? ಈ ವರ್ಗೀಕರಣ ಅಗತ್ಯವೆ.

ಕಣವಿ : ಚಾರಿತ್ರಿಕವಾಗಿ ಈ ವರ್ಗೀಕರಣ ಅಗತ್ಯ.

ಇದೇ ಮಾತು ಮುಂದುವರೆಯುತ್ತಿದ್ದ ಹಾಗೆ ಎರಡನೆ ಸುತ್ತಿನ ಟೀಯನ್ನು ಮುಗಿಸಿ ನಮ್ಮ ಸಂದರ್ಶನದ ಕೊನೆಯ ಅಂಚಿಗೆ ತಲುಪಲು ನಾವೇ ದಾರಿಮಾಡಿಕೊಂಡು ಮಾತು ಕೂಡಿಸುತ್ತಿದ್ದೆವು. ಕಣವಿಯವರಾದರೋ ಇನ್ನೂ ಉತ್ಸಾಹದಿಂದಲೇ ದೇವನೂರ ಮಹಾದೇವ. ಕುಂವೀಯನ್ನರನ್ನು ಕುರಿತು ಹೇಳುತ್ತಿದ್ದರು;

ಕಣವಿ : ಕುಂವೀ, ಮಹಾದೇವ ನಿಜವಾಗಿಯೂ ದಲಿತ ಸಾಹಿತ್ಯವನ್ನು ಬೆಳೆಸುತ್ತಿರುವವರು. ಇವರು ಎಲ್ಲಾ ವಿಧದಲ್ಲೂ ದಲಿತ ಜನಾಂಗದ ಹತ್ತಿರ ಹೋಗಿ, ಅವರದೇ ಭಾಷೆಯಲ್ಲಿ ಬರೆಯುತ್ತಿದ್ದಾರೆ. ನನಗಂತೂ ಇದೇ ಹೆಚ್ಚು ಇಷ್ಟ.

ಆನಂದಮೂರ್ತಿ : ಹಾಗೇನೆ ಕಾಳೇಗೌಡ ನಾಗವಾರ, ಬೆಸಗರಹಳ್ಳಿ ರಾಮಣ್ಣ ಕೂಡ ಜವಾಬ್ದಾರಿಯಿಂದ ಬರೀತಿದಾರೆ. ಚಾರಿತ್ರಿಕವಾಗಿ ಇವರು ಬಹಳ ಅನಿಸೋ ಬರಹಗಾರರು.

ಕಣವಿ : ನಿಜ. ನಾಗವಾರ, ರಾಮಣ್ಣ ಅವರು, ಅವರ ಜನಾಂಗಕ್ಕೆ ಹತ್ತಿರವಾಗಿ ಬರೆಯುತ್ತಿದ್ದಾರೆ. ಆದರೆ ಇವರ ಭಾಷೆ ಸ್ವಲ್ಪ ಸಂಸ್ಕರಣವಾಗಿದೆಯೋ ಏನಿಸುತ್ತದೆ. ಅವರೂ ಕಾಳೇಗೌಡರು ಒಳ್ಳೆ ಕಥೆಗಳನ್ನೇ ಬರೆದಿದ್ದಾರೆ.

ಆನಂದಮೂರ್ತಿ : ಸಾರ್, ತುಮಕೂರು ಏನನಿಸುತ್ತದೆ.

ಕಣವಿ : ಊರು ಬಹಳ ಚೆನ್ನಾಗಿದೆ. ಹಿಂದಿನ ನೀಲಿ ಬೆಟ್ಟಗಳ ಸಾಲು ಕೈಬೀಸಿ ಕರೆಯುತ್ತಿವೆ. ನಿಮ್ಮೊಂದಿಗೆ ಮಾತನಾಡಿದ್ದರಿಂದ ಇಲ್ಲಿದ್ದ ಕೊರತೆಯೂ ಕೂಡ ಹೋಯಿತು. ಚಿಕ್ಕವೀರಯ್ಯನವರು ರೈತರಾಗಿಯೇ ಕಾವ್ಯದ ಬಗ್ಗೆ ಅವರ ಓದು, ತಿಳುವಳಿಕೆ ನಿಜವಾಗಿಯೂ ದೊಡ್ಡದು. ಆದ್ದರಿಂದ ಅವರು ನಿಜವಾಗಿಯೂ ದೊಡ್ಡವೀರಯ್ಯನವರೇ.

ಕೊನೆಯದಾಗಿ ಕೇಬಿ 'ಹೊಸ ಬರಹಗಾರರಿಗೆ ಏನು ಹೇಳ್ತೀರಿ'! ಎಂದು ಸಾಂಪ್ರದಾಯಿಕ ಪ್ರಶ್ನೆ ಎಸೆದ.

ಕಣವಿ : (ನಗುತ್ತಾ) ನಾನೇನೂ ಜಗದ್ಗುರು ಅಲ್ಲ ನೋಡ್ರಿ ಸಂದೇಶ ಕೊಡಲಿಕ್ಕೆ. ಅವರೂ ನಿಮ್ಮ ಅನುಭವವನ್ನೇ ಬರೆಯಿರಿ ಅಂತ ಮಾತ್ರ ಹೇಳಬಹುದು. ಒಂದು ವ್ಯತ್ಯಾಸ ಎಂದರೆ ನಮಗಿನ್ನ ಹೆಚ್ಚಾಗಿ ಈಗಿನವರಿಗೆ ಹೆಚ್ಚು Social awarence ಇದೆ. ಇದು ಒಳ್ಳೆಯದು. ಈಗ ಬರೆಯೋರಿಗೆ ಆಂತರಿಕ ಒತ್ತಡ ಇದೆ, ಇದರಿಂದ ಅನುಕರಣೆಯೂ ಶುರುವಾಗಬಹುದು. ಅದರ ಬಗ್ಗೆಯೂ ಎಚ್ಚರ ವಹಿಸೋದು ಒಳ್ಳೆಯದು.

ಪ್ರಶ್ನೆ : ನವೋದಯ ಹಾಗು ನವ್ಯ ಕಾವ್ಯ ಮಾರ್ಗಗಳ ನಡುವೆ ಸೇತುಬಂದ

ವಾಗಿರುವ ನಿಮ್ಮ ಕವಿತೆಗಳು ಈಗಿನ ಬಂಡಾಯ ಕಾವ್ಯದೊಡನೆ ಯಾವ ಬಗೆಯಲ್ಲಿ ಸಂಬಂಧವನ್ನು ಬೆಳೆಸಿಕೊಂಡಿವೆ.

ಕಣವಿ : ನನ್ನ ಕಾವ್ಯ ನವೋದಯ ಹಾಗು ನವ್ಯ ಕಾವ್ಯ ಮಾರ್ಗಗಳ ಸೇತು ಬಂಧ ಎಂದಿರಿ. ಅಷ್ಟೇ ಅಲ್ಲ ಅದು ಎರಡೂ ಮಾರ್ಗಗಳ ಸತ್ವವನ್ನು ಬಸಿದು ರೂಪಗೊಂಡಿದ್ದು. ಸಾಮಾಜಿಕ ಕಳಕಳಿಯ ಮೂಲಕ ನನ್ನ ಕವಿತೆ ಬಂಡಾಯ ಕಾವ್ಯದೊಡನೆ ಕೆಲಮಟ್ಟಿಗೆ ಸಂಬಂಧ ಪಡೆದುಕೊಂಡಿದೆ. ಜೀವನದ ಎಲ್ಲಾ ಮೂಲಗಳಿಂದ ಬಂದ ಕಾವ್ಯದಲ್ಲಿ ನಾನು ಆಸ್ಥೆಯುಳ್ಳವನಾದ್ದರಿಂದ ಬಂಡಾಯ ಕಾವ್ಯವನ್ನೂ ನಾನು ಸಹಾನುಭೂತಿಯಿಂದಲೇ ಕಂಡಿದ್ದೇನೆ. ಶೋಷಣೆ. ಅನ್ಯಾಯ, ಅಸಮತೆ, ಸಾಮಾಜಿಕ ವಿಷಮತೆಗಳ ವಿರುದ್ಧ ಪ್ರತಿಭಟನೆಯ ಅಂಶಗಳು ವಚನಕಾರರಲ್ಲಿ ಸರ್ವಜ್ಞರಲ್ಲಿ ಸಾಕಷ್ಟಿರುವದರಿಂದ ಇಂದಿನ ಬಂಡಾಯ ಕಾವ್ಯ ಪರಂಪರೆಗೆ ಹೊಸತಾಗಿದೆ ಎಂದು ನನಗನಿಸುವುದಿಲ್ಲ.

ಪ್ರಶ್ನೆ : ಬಂಡಾಯ ಚಳುವಳಿಯಿಂದ ನಿಮ್ಮ ಜೀವನದೃಷ್ಟಿ. ಕಾವ್ಯದೃಷ್ಟಿಯ ಮೇಲೆ ಯಾವ ರೀತಿ ಪರಿಣಾಮ ಉಂಟಾಗಿದೆ ?

ಕಣವಿ : ಬಂಡಾಯ ಚಳುವಳಿಯ ಪೂರ್ವದಲ್ಲಿಯೂ ನನ್ನ ಸಾಮಾಜಿಕ ಪ್ರಜ್ಞೆ ವಿಡಂಬನೆಯ ಮೂಲಕ ಅಭಿವ್ಯಕ್ತಗೊಂಡಿರುವುದನ್ನು ನನ್ನ ಕವಿತೆಗಳಲ್ಲಿ ಕಾಣಬಹುದು. ಕೆಳವರ್ಗದ ಜನರಲ್ಲಿ ಜಾಗೃತಿಯನ್ನುಂಟುಮಾಡಿ. ಅನ್ಯಾಯ. ಶೋಷಣೆಗಳನ್ನು ಪ್ರತಿಭಟಿಸುವ ಧೈರ್ಯವನ್ನು ಆ ಜನಾಂಗಕ್ಕೆ ತಂದುಕೊಟ್ಟುದಲ್ಲದೆ ಅವರ ಬದುಕಿನ ನೋವು ಸಂಕಷ್ಟಗಳನ್ನು ಉಳಿದವರೂ ಅರಿಯುವಂತೆ ಮಾಡಿರುವುದು ಬಂಡಾಯ ಚಳುವಳಿಯ ಒಂದು ಪ್ರಧಾನ ಅಂಶವಾಗಿರುವುದರಿಂದ ಈ ಚಳುವಳಿಯ ಪರಿಣಾಮ ನನ್ನ ದೃಷ್ಟಿಯಲ್ಲಿ ಸ್ವಾಗತಾರ್ಹ.

ಪ್ರಶ್ನೆ : ಸಂಘರ್ಷಗಳು, ತಳಮಳಗಳು ಇಲ್ಲದ. ಅಂದರೆ ಬೇಂದ್ರೆ ಕಂಡ 'ಕಂಗೆಡಿಸುವ ಕೆಂಪು ಹಿಂದೆ. ಕಂಗೊಳಿಸುವ ಮಂಜು ಮುಂದೆ. ಈ ಸ್ಥಿತಿಯ ಅರಿವು ನಿಮ್ಮ ಕಾವ್ಯದಲ್ಲಿ ಇಲ್ಲವೆಂಬುದು ನಮ್ಮ ತಿಳುವಳಿಕೆ. ನಿಮ್ಮ ಪ್ರತಿಕ್ರಿಯೆ ಏನು ?

ಕಣವಿ : ನಿಮ್ಮ ತಿಳುವಳಿಕೆ ತಪ್ಪು. ನನ್ನ ಕಾವ್ಯವನ್ನು ಅಭ್ಯಾಸ ಮಾಡಿದವರಿಗೆ ಜೀವನೋತ್ಸಾಹದಂತೆಯೇ ತಳಮಳಗಳನ್ನೂ, ವಿಷಾದಗಳನ್ನೂ ಅಲ್ಲಲ್ಲಿ ಕಾಣಬಹುದು. ಉದಾಹರಣೆಗೆ: 'ಜಗವ ತುಂಬಿದ ಬೆಳಕು ನಮಗೇಕೋ ಸಾಲದಿದೆ। ಬಿತ್ತು ಮಾನವನೆದೆಯ ಆಳ, ಅಗಲ। ಬಂದಷ್ಟು ಇಂಗುತಿದೆ ಮತ್ತೆ ಬರಿದಾಗುತಿದೆ। ಎಷ್ಟು ಸೆಣಸಾಡಿದರೂ ವಿಫಲ' (ಚಿರಂತನ ದಾಹ) ಇಂಥ ಸಂದರ್ಭಗಳು ಇಲ್ಲದಿಲ್ಲ.

ಪ್ರಶ್ನೆ : ಕನ್ನಡ ಕಾವ್ಯ ವಿಮರ್ಶೆಗೆ ಪಾಶ್ಚಾತ್ಯ ಮಾನದಂಡದ ಅಗತ್ಯ ವಿದೆಯೆ?

ಕಣವಿ : ಹೊಸಗನ್ನಡ ಕಾವ್ಯದ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ ದಟ್ಟ ವಾಗಿದೆ. ಹಲವಾರು ಕಾವ್ಯರೂಪಗಳನ್ನು ಅಲ್ಲಿಂದ ಪಡೆದಿದ್ದೇವೆ. ಈ ಸಂಬಂಧ ದಲ್ಲಿ ಕನ್ನಡ ಕಾವ್ಯ ವಿಮರ್ಶೆಗೆ ಪಾಶ್ಚಾತ್ಯ ವಿಮರ್ಶೆಯ ಮಾನದಂಡ ಕೆಲವಮಟ್ಟಿಗೆ ಬೇಕಾಗಬಹುದು. ಜೊತೆಗೆ ಕನ್ನಡ ಕಾವ್ಯ ಪರಂಪರೆಯ ಪ್ರಜ್ಞೆ, ಹಾಗು ಭಾರತೀಯ ಕಾವ್ಯಮೀಮಾಂಸೆಯ ಪರಿಜ್ಞಾನ ಅತ್ಯಗತ್ಯ.

ಪ್ರಶ್ನೆ : ಬೇಂದ್ರೆ–ಅಡಿಗರ ಕಾವ್ಯದ ಜೊತೆಗೆ ನಿಮ್ಮ ಕಾವ್ಯವನ್ನು ಕಾವ್ಯದ ವಸ್ತು ಮತ್ತು ರಚನೆಯ ದೃಷ್ಟಿಯಿಂದ ನೋಡಿದಾಗ ಏನನ್ನಿಸುತ್ತದೆ ತಿಳಿಸುವಿರಾ ?

ಕಣವಿ : ವಸ್ತು ವೈವಿಧ್ಯ ಹಾಗು ರಚನಾ ಸ್ವಾತಂತ್ರ್ಯದಲ್ಲಿ ಬೇಂದ್ರೆ ನಿಸ್ಸೀಮರು, ಹಾಗೆ ಛಂದೋ ವೈವಿಧ್ಯದಲ್ಲಿ ಕೂಡ. ಅಡಿಗರ ಕಾವ್ಯ ವಸ್ತುವಿನಲ್ಲಿ ವೈವಿಧ್ಯತೆ ಕಡಿಮೆ. ಆದರೆ ರಚನೆ ಹೆಚ್ಚು ಕಲಾತ್ಮಕ 'ಕಾವ್ಯಶಿಲ್ಪ' ಅದರ ವಿಶೇಷ ಕೊಡುಗೆ. ಇವರಿಬ್ಬರ ಕಾವ್ಯದ ಜೊತೆಗೆ ನನ್ನ ಕಾವ್ಯವನ್ನು ನಾನೇ ಹೇಗೆ ಹೋಲಿಸಿ ನೋಡುವುದು ? ಅದು ಬೇರೆಯವರ ಕೆಲಸ.

ಪ್ರಶ್ನೆ : ಕಾವ್ಯ ರಚನೆಗೆ ನಿಮ್ಮನ್ನು ತೊಡಗಿಸಿದ ಅಂಶಗಳಾವುವು ?

ಕಣವಿ : ನಮ್ಮ ಭಾವನೆಗಳನ್ನು ಕವಿತೆಯ ರೂಪದಲ್ಲಿ ಕಟ್ಟುವುದರಿಂದ ಒದ ಗುವ ಸಂತೋಷವೇ ಮೂಲತಃ ನಮ್ಮನ್ನು ಕಾವ್ಯ ರಚನೆಗೆ ತೊಡಗಿಸುವುದು ಅಲ್ಲವೆ ! ನಿಸರ್ಗೋಪಾಸನೆಯಿಂದ ಮನುಷ್ಯ ಪಡೆಯುವ ಚೈತನ್ಯ, ಅಚ್ಚರಿ, ಸಮಾಜದ ಏರು ಪೇರುಗಳು, ಬಾಳುವೆಯ ಆಳದಲ್ಲಿರುವ ರಸವಂತಿಕೆ, ಪ್ರೀತಿ ಅಂತಃಕರಣಗಳಿಂದ ಮನುಷ್ಯ ಸಂಬಂಧಗಳಿಗೆ ಒದಗುವ ಸಾರ್ಥಕ್ಯ ಭಾವ. ನಮಗೆ ಅರಿವಿಲ್ಲದೆಯೇ ಬಾಳನ್ನು ಬೆಳಗಿಸುವ ಲೋಕೋತ್ತರ ಕರುಣೆ, ನಾಡು ನುಡಿಯ ಅಭಿಮಾನ ಇವೇ ಮೊದಲಾದುವು ನನ್ನ ಕಾವ್ಯದ ಮೂಲ ಪ್ರೇರಣೆಗಳು.

ಪ್ರಶ್ನೆ : ನಿನ್ನೆ ನಿಮ್ಮ ಭಾಷಣದಲ್ಲಿ ಹೇಳಿದಂತೆ, ಒಬ್ಬ ಕವಿ ಎಷ್ಟು ಕಾವ್ಯ, ಸಾಹಿತ್ಯ ರಚನೆ ಮಾಡಿದ್ದರೂ, ಅದರಲ್ಲಿ ಯಾವುದೋ 8-10 ಕವಿತೆಗಳು ಮಾತ್ರ ಶ್ರೇಷ್ಠವಾಗಿರಬಹುದು-ಎಂದು ನೀವು ಹೇಳಿದ್ದರ ಅರ್ಥವನ್ನು ವಿವರಿಸುವಿರಾ.

ಕಣವಿ : ಕವಿ ತನ್ನ ಹೃದಯದ ಭಾರವನ್ನು, ಅಥವಾ ಮನಸ್ಸಿನ ಒತ್ತಡ ಗಳನ್ನು ಕವಿತೆಯ ರೂಪದಲ್ಲಿ ಇಳಿಸುವಾಗ ಯಾವುದೋ ಒಂದು ಸನ್ನಿವೇಶ, ಭಾವನೆ ವಿಚಾರ ನಿಮಿತ್ತವಾಗಿರುತ್ತದೆ. ಅದಕ್ಕೆ ಸಂಬಂಧಪಟ್ಟ ಅನುಭವ ಹಾಗು ಚಿಂತನೆ

ಅದಕ್ಕೆ ಹಿನ್ನೆಲೆಯಾಗಿರುತ್ತದೆ. ಆ ಸಮಾಜದ ಸ್ಫೂರ್ತಿಯು ಅವನಲ್ಲಿ ಕಾವ್ಯ ರಚನೆ ಕೈಗೂಡಿದಾಗ ಒಂದು ತೃಪ್ತಿ ಉಂಟಾಗುತ್ತದೆ ಎನ್ನೋಣ. ಅದನ್ನು ಪರಿಭಾವಿಸಿದಾಗ ತಾನು ಹೇಳಬೇಕಾದುದನ್ನೆಲ್ಲಾ ಹೇಳಿಲ್ಲ, ಅಥವಾ ಹೇಳಬೇಕಾದ ರೀತಿಯಲ್ಲಿ ಹೇಳಿಲ್ಲ ಎಂದು ಎಷ್ಟೋ ಸಲ ಅನ್ನಿಸುತ್ತದೆ. ಈ ಕೊರತೆ. ಅತೃಪ್ತಿ ಕವಿಯ ಒಳಗೆ ಉಳಿದುಕೊಂಡು ಇನ್ನೊಂದು ಕವಿತೆ ಬರೆಯುವಾಗ ಅದನ್ನು ತುಂಬಿಕೊಳ್ಳುತ್ತದೆ. ಹೀಗೆ ಎಷ್ಟೇ ಪ್ರಯತ್ನಪಟ್ಟರೂ ಒಂದೇ ಕವಿತೆಯಲ್ಲಿ ತನ್ನನ್ನು ಇಡಿಯಾಗಿ ಅಭಿವ್ಯಕ್ತಿಸಿಕೊಳ್ಳುವುದು ಸಾಧ್ಯವಾಗದೆ ಹೋಗುತ್ತದೆ. ಅನುಭವದಿಂದ ಪ್ರಯೋಗಕ್ಕೆ ಅಲ್ಲಿಂದ ಮತ್ತೆ ಹೊಸ ಅನುಭವಕ್ಕೆ ಅವನ ಕಲಾಯಾತ್ರೆ ನಡೆದೇ ಇರುತ್ತದೆ. ಈ ಅರ್ಥದಲ್ಲಿ ನಾನು ಈ ಮಾತನ್ನು ಹೇಳಿದ್ದು.

ಪ್ರಶ್ನೆ : ಸಾಹಿತ್ಯ ಜನಕ್ಕೆ ತಲುಪಬೇಕೆಂಬ ಆಶಯದಿಂದ ಸೃಷ್ಟಿಸುವ ಸಾಹಿತಿಯ ಎದುರಿಗೆ ನಿಲ್ಲುವ ಸವಾಲುಗಳಾವು.

ಕಣವಿ : ಅನುಭವ ತೆಳುವಾಗದಂತೆ. ಅಭಿವ್ಯಕ್ತಿ ಸಡಿಲಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಜನಕ್ಕೆ ಹಿಡಿಸುವಂತೆ, ಅವರ ಮನಸ್ಸನ್ನು ಆಕರ್ಷಿಸುವಂತೆ ಹೊಸ ತಂತ್ರವನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಪ್ರಶ್ನೆ : ಕಾವ್ಯದಲ್ಲಿ ಜನಪರ, ಜನವಿರೋಧಿ ಕಾವ್ಯ ಎಂಬುದುಂಟೆ ?! ಈ ಹಿನ್ನೆಲೆಯಲ್ಲಿ ನಿಮ್ಮ ಕಾವ್ಯದ ಗುರಿ ಏನು ?

ಕಣವಿ : ತನಗೂ ತನ್ನ ಸುತ್ತಮುತ್ತಿನ ಜಗತ್ತಿಗೂ ಭಾವನಾತ್ಮಕ ಸಂಬಂಧ ಇಟ್ಟುಕೊಂಡಿರುವ ಕವಿಯ ಮಾತು. ವಿಚಾರ ಅವನದಾಗಿರುವಂತೆಯೇ ಜನತೆಗೂ ಸೇರಿದವುಗಳಾಗಿರುತ್ತವೆ. ಅಭಿವ್ಯಕ್ತಿಯಲ್ಲಿಯೂ ಅವರ ಭಾಷೆಯನ್ನೇ ತನ್ನ ರೀತಿಯಲ್ಲಿ ಬಳಸಿಕೊಂಡಿರುತ್ತಾನೆ. ಅವರ ನೋವು-ನಲಿವು ಆಶೋತ್ತರಗಳಿಗೆ ಅಲ್ಲಿ ಪ್ರತಿಸ್ಪಂದನವಿರುತ್ತದೆ. ಹೀಗಿರುವಾಗ ಕಾವ್ಯವನ್ನು 'ಜನಪರ'. 'ಜನವಿರೋಧಿ' ಎಂದು ಹೇಗೆ ವಿಂಗಡಿಸುತ್ತಾರೋ ನನಗೆ ತಿಳಿಯದು. ಕಾವ್ಯ ಯಾವುದೇ ರಾಜಕೀಯ ಪಕ್ಷದ ಪ್ರಣಾಳಿಕೆಯಲ್ಲ. ನಮ್ಮಲ್ಲಿ ಜನಸಾಮಾನ್ಯರ ಕವಿ. ಪಂಡಿತ ಕವಿ ಎಂಬ ಭೇದವಿತ್ತೇ ಹೊರತು ಪರ. ವಿರೋಧ ಎಂಬ ಮಾತಿಲ್ಲ. 'ಜನವಿರೋಧಿ ಕಾವ್ಯ' ಎಂಬುದನ್ನು ನಾನು ಕಲ್ಪಿಸುವುದೂ ಕೂಡ ಸಾಧ್ಯವಿಲ್ಲ ಎನಿಸುತ್ತದೆ.

ನನ್ನ ಕಾವ್ಯದ ಗುರಿ ಏನೇ ಇದ್ದರೂ ಓದುಗರನ್ನು ಸಹೃದಯರನ್ನು. ಜನಸಾಮಾನ್ಯರನ್ನು ಅದು ಗೌರವದಿಂದ ಕಾಣುತ್ತದೆಂದು ಮಾತ್ರ ಹೇಳಬಲ್ಲೆ.



ಕನಸಿಗೊಂದು ಕಣ್ಣು

ಹುಚ್ಚು ಹೆಣ್ಣಿನ ಮುಸುಕಿನ ಸುತ್ತಾ....

THE LITTLE BOY LOST

Father, father, where are you going
O do not walk so fast.
Speak father, speak to your little boy
Or else I shall be lost,

The night was dark no father was there
The child was wet with dew.
The mire was deep, & the child did weep
And away the vapour fiew.

- **William Blake**

ಬದುಕಿನಲ್ಲಿ ಬೆಳಕು-ಕತ್ತಲು ಸೃಷ್ಟಿಸುವ ಕ್ರಿಯೆಯನ್ನು ಯೋಚಿಸಿದಾಗಲೆಲ್ಲ ಅದ್ಭುತವನ್ನಿಸುತ್ತದೆ. ಕೊನೆಗೆ ಈ ಅದ್ಭುತದ ಬಾಲ ಬೆಳೆದು ಉತ್ತರಸಿಗದೆ ಮೊಂಡಾಗಿ ಎಲ್ಲವೂ ಸ್ವಾಭಾವಿಕ ಎಂದು ಸಮಾಧಾನಕ್ಕೆ ಬರುತ್ತೇವೆ. ಆದರೂ ಕತ್ತಲಿನಲ್ಲಿ ಎಷ್ಟೋ ಸಂಗತಿಗಳು ಅಥವಾ ವಸ್ತುಗಳು ಅಸ್ಪಷ್ಟವಾಗಿ ಗೋಚರಿಸುವುದರಿಂದ ಗಾಬರಿ, ಆಶ್ಚರ್ಯ ಮತ್ತು ಭಯ ಭೀತಿಗಳ ಮಿಶ್ರಣದಲ್ಲಿ ತೇಲಿ ಹೋಗಿರುತ್ತೇವೆ. ಇದಕ್ಕೆ ಮುಖ್ಯವಾಗಿ ನಮ್ಮೆಲ್ಲರ ಸುಪ್ತಪ್ರಜ್ಞೆಗಳ ಇತಿಮಿತಿಗಳು ಕಾರಣವಿರಬಹುದು.

ಕತ್ತಲಿನಲ್ಲಿ ಅರೆಬರೆ ಕಾಣಿಸುವ ಪ್ರತಿಯೊಂದು ಸ್ವಲ್ಪ ಮಟ್ಟಿನ ನಿಗೂಢತೆಯನ್ನು ಮೈಗಂಟಿಸಿಕೊಂಡೆ. ನಮ್ಮ ಮನಸ್ಸಿನ ಪರಿಧಿಯಲ್ಲಿ ಸುತ್ತಾಡುತ್ತಿರುತ್ತವೆ. ನಾವು ಎಷ್ಟೇ ರ್ಯಾಷನ್‌ಲಿಸ್ಟರಾಗಿದ್ದರೂ, ಒಮ್ಮೊಮ್ಮೆಯಾದರೂ ಈ ಭೂತ ಪಿಶಾಚಿಗಳು ನಮ್ಮ ಎದೆಯ ಬಾಗಿಲುಗಳನ್ನು ಬಡಿದು ದಸಕ್ಕನೆ ಮರೆಯಾಗಬಹುದು. ರ್ಯಾಷನ-ಲಿಸ್ಟರಾಗದಿದ್ದರೆ ಬೆಳಿಗ್ಗೆದ್ದಾಕ್ಷಣ ಯಾರನಾದರೂ ಪೂಜಾರಿಯನ್ನಾಗಲಿ, ಅಥವಾ ಕಾಣದ ದೇವರಿಗೆ ಹರಕೆ ಸಲ್ಲಿಸುವ ಭಾವನೆಗಳು ಛಲಿಯುತ್ತ ಹೋಗಬಹುದು. ಈ ವಿಚಿತ್ರಗಳಿಂದಲೋ ವೈಪರೀತ್ಯಗಳಿಂದಲೊ ಎಲ್ಲವೂ ಅರ್ಥಪೂರ್ಣವಾಗಿರುವುದು.

ಕಳೆದ ಭಾನುವಾರ ಮನೆಗೆ ಹೋದಾಗ ಹನ್ನೊಂದು ಮೂವತ್ತಾಗಿತ್ತು. ಜನ ಒದ್ದಾಡಿ ಒದ್ದಾಡಿ ಸುಸ್ತಾಗಿ ಮಲಗಿದ್ದರೆಂದು ಕಾಣುತ್ತೆ. ಒಟ್ಟು ವಾತಾವರಣ ನಿಶಬ್ದವಾಗಿತ್ತು, ಸಂಜೆ ಬಿದ್ದ ಮಳೆಗೆ ನೆಲವೆಲ್ಲ ಕೆಸರಾಗಿತ್ತು. ಇದರ ಜೊತೆಗೆ ತುಂತುರು ತುಂತುರು ಮಳೆ ಬೀಳುತ್ತಿದ್ದುದರಿಂದ ಜನವೆಲ್ಲ ಬೆಚ್ಚಗೆ ಮುದುಡಿಕೊಂಡು ಮಲಗಿರುವಂತಿತ್ತು. ಆಟೋದವನು ಮನೆಯವರೆವಿಗೂ ಬರದಿದ್ದುದರಿಂದ ಸ್ವಲ್ಪ ದೂರ ನಡೆಯಬೇಕಾಗಿತ್ತು' ಎಂದೂ ಬೊಗಳುವ ನಾಯಿಗಳು ಬೊಗಳದೆ ಬಿದ್ದು ಕೊಂಡಿದ್ದವು. ಕಾರಣ : ಅವು ಸದಾ ನನ್ನನ್ನು ನೋಡಿದ್ದುರಿಂದ ಇರಬಹುದು, ಅದೇನೆ ಇರಲಿ ಬಾಗಿಲಿನ ಕರೆಘಂಟೆಯನ್ನು ಅದುಮಿದೆ, ಅದರೆ ಘಂಟೆ ಭಾರಿಸುವ ಬಟನ್ ಲೂರ್ಝ್ ಆಗಿದ್ದುದರಿಂದ ಒಂದೇ ಸಮನೆ ಬಡಕೊಳ್ಳತೊಡಗಿತು. ಆ ಘಂಟೆಯ ಕೀರಲು ಧ್ವನಿಗೆ ಒಂದು ಕ್ಷಣ ನಾನೇ ಬೇಸುತ್ತಿದ್ದೆ. ಮಲಗಿದ್ದ ಹೆಂಡತಿ ಎದ್ದು ಬಂದು ಬಾಗಿಲು ತೆಗೆಯುವಷ್ಟರಲ್ಲಿ ಸ್ವಲ್ಪ ದೂರದಲ್ಲಿ ಯಾವುದೋ ಹೆಣ್ಣು ನಿಂತಿತ್ತು. ಅದು ನನ್ನ ಕಡೆಯೇ ನೋಡುತ್ತಾ ಹತ್ತಿರ ಬಂದಂತೆ ಕಾಣಿಸಿತು. ಬಾಗಿಲು ತೆರೆದಾಕ್ಷಣ ಒಳನುಗ್ಗಿದೆ.

ಊಟದ ಹೆಸರಿಗಾಗಿ ಒಂದಷ್ಟು ಗಬಗಬ ತಿಂದೆ. ಬಾಗಿಲು ತೆಗೆದು ಪ್ರಸ್ಸಿದ್ದ, ರೂಮಿಗೆ ಮಲಗಲು ಹೋದೆ. ಬೀದಿ ಕಡೆ ಕಣ್ಣಾಡಿಸಿದಾಗ ಆ ಕಪ್ಪು ಆಕೃತಿಯ ಹೆಣ್ಣು ದೂರದಲ್ಲಿ ನಿಂತಿತ್ತು. ಅವಳನ್ನು ನೋಡಿ ನನ್ನಹೆಂಡತಿ “ ಹುಚ್ಚುಮುಂಡೆ ಸಂಜೆಯಿಂದ ಇದೇ ಕೆಲಸ ಮಾಡುತ್ತಿದ್ದಾಳೆ. ” ಎಂದಳು. ನಾನು ಸುಮ್ಮನೆ ಹೋಗಿ ಬಾಗಿಲು ಹಾಕಿದೆ. ಬಾಗಿಲು ಪಕ್ಕದಲ್ಲಿಯೇ ಪ್ರಸ್ಸಿನ ಷಟರ್ ಇತ್ತು. ಅದಕ್ಕೆ ಸ್ವಲ್ಪ ತಾಕಿದರೂ ಸಾಕು ದಡಬಡ ಎಂಬ ಶಬ್ದವಾಗುತ್ತಿತ್ತು. ಸ್ವಲ್ಪ ಸಮಯ ಓದುತ್ತಾ ಮಲಗಿದೆ. ನಿದ್ದೆ ಬಂದಿತ್ತು. ಕನಸಿನಲ್ಲೆಂಬಂತೆ “ ರಾಜಾ ರಾಜಾ ” ಎಂದು ಅಳುವ ಶಬ್ದ ಕೇಳಿಸಿತು. ಆ ಧ್ವನಿ ಹುಚ್ಚಿಯದೇ ಅನ್ನಿಸಿತು. ಹೊರಗೆ

ಹೋಗಿ ಅವಳನ್ನು ಓಡಿಸುವ ಇಲ್ಲವೇ ಸಮಾಧಾನ ಪಡಿಸಿ ಕಳಿಸುವ ಧೈರ್ಯ ಬರಲಿಲ್ಲ. ಅವಳು "ಬಾರೋ ರಾಜ ನಾನು ಬರ್‍ತೀನಿ, ನನ್ನ ಬಿಟ್ಟು ಹೋಗಬೇಡ" ಎಂದು ಅಳುತ್ತಲೇ ಇದ್ದಳು. ಷಟ್ಟರ್‌ನ ಶಬ್ದವಾಯಿತು. ಒಂದು ಕ್ಷಣ ಗಾಬರಿಯಾಯಿತು. ಪಾಪ ! ಷಟರ್ ಪಕ್ಕದಲ್ಲಿ ಕೂತಿರಬಹುದು ಅಂದುಕೊಂಡೆ. ಮತ್ತೆ ಷಟರನ ಶಬ್ದ ಬರಲಿಲ್ಲ, ಆದರೆ ಅವಳು ಆಗಾಗ್ಗೆ ಮಾತಾಡುವ ಮತ್ತು ಅಳುವ ಧ್ವನಿ ಕೇಳಿಸುತ್ತಿತ್ತು. ನಿದ್ದೆ ಮಾಡಲು ಪ್ರಯತ್ನಿಸಿದೆ. ನಿದ್ದೆ ಬರಲಿಲ್ಲ. ದೀಪ ಹಚ್ಚಿ ಓದಲು ಪ್ರಯತ್ನಿಸಿದೆ. ಹೊರಗೆ ಅವಳ ಅಳು ಆ ನಿಶಬ್ದ ರಾತ್ರಿಯಲ್ಲಿ ಇಡೀ ವಾತಾವರಣವನ್ನೇ ಕಲಕಿದಂತಿತ್ತು. ಏನೇನೊ ನೆನಪಿಗೆ ಬಂತು. ಹಿಂದೆ ಪಕ್ಕದ ಹಾಳು ಬಾವಿಯಲ್ಲಿ ಆಗ ತಾನೇ ಹುಟ್ಟಿದ ಮಗುವನ್ನು ಬಿಸಾಕಿದ್ದ ಘಟನೆ ನೆನಪಿಗೆ ಬಂತು. ತಲೆನೋಯತೊಡಗಿತ್ತು, ಭೀಮಸೇನ ಜೋಶಿಯ ಕ್ಯಾಸೆಟ್ ಹಾಕಿದೆ. ಹ್ಞಾಂ........ ಆಲಾಪನೆಯ ಜೊತೆಗೆ "ಭಾಗ್ಯದ ಲಕ್ಷ್ಮೀ ಬಾರಮ್ಮ" ಕೀರ್ತನೆಯ ನುಡಿ ಮಧುರವಾಗಿ ಕೊಠಡಿಯನ್ನು ಆವರಿಸ ತೊಡಗಿತು. ಹೊರಗೆ ಅವಳ ಮಾತು ಮತ್ತು ಅಳು ನಿಂತಂತಾಯಿತು. ಕ್ಯಾಸೆಟಿನ ಧ್ವನಿ ತಗ್ಗಿಸಿದೆ. ಮತ್ತೆ ಏರಿಸಿ ಮಲಗಿದ್ದೆ. ಯಾವಾಗ ನಿದ್ದೆ ಅಪ್ಪಿಕೊಂಡಿತ್ತೊ ಗೊತ್ತಿಲ್ಲ. ಕ್ಯಾಸೆಟ್‌ನಲ್ಲಿ ಒಂದು ಕಡೆ ಇದ್ದ ಹಾಡುಗಳೆಲ್ಲ ಮುಗಿದು ನಿಂತಿತ್ತು. ಭೀಮಸೇನ ಜೋಶಿ ಪ್ರಶಾಂತ ವಾತಾವರಣದಲ್ಲಿ ಒಬ್ಬರೇ ಹಾಡಿ ಮಲಗಿದ್ದರು, ಅಥವಾ ಆ ಹುಚ್ಚಿಯನ್ನು ಮಲಗಿಸಿದ್ದರು.

ನಿದ್ದೆ ಸಾಲದೆ ತಲೆ ಸಿಡಿಯುತ್ತಿತ್ತು. ಐದೂವರೆಗೆದ್ದು ಓಡಲು ಹೋದೆ. ತುಂತುರು ಮಳೆ ಜಿನುಗುತ್ತಿತ್ತು. ಓಟದ ಗತಿಯನ್ನು ತೀವ್ರಗೊಳಿಸಿದೆ, ಮೈಬೆಚ್ಚಗಾಯಿತು. ಓಡುತ್ತಲೇ ಇರಬೇಕೆನ್ನಿಸಿತು. ನನ್ನ ಮುಂದೆ ಜಟಕಾ ಗಾಡಿ ಓಡುತ್ತಿತ್ತು. ರಾಕ್ಷಸೀ ವಾಹನಗಳ ಕಾಟ ಕಡಿಮೆಯಿದ್ದುದರಿಂದ ಕುದುರೆ ಆರಾಮವಾಗಿ ಓಡುತ್ತಿತ್ತು. ಅದರ ಓಟ ಸಾಲದೆಂಬಂತೆ ಚಾಟಿಯಿಂದ ಬಾರಿಸಿದ, ಅದು ಮತ್ತಷ್ಟು ಜೋರಾಗಿ ಓಡಿ ಮರೆಯಾಯಿತು. ನಾನು ಅದರ ಜೊತೆ ಓಡಲಾಗಲಿಲ್ಲ. ಆದರೆ ಮಳೆಯ ತಂಪಿನಲ್ಲಿ ಮೈಬಿಸಿಯಾಗಿ ಖುಷಿಯಾಗಿತ್ತು. ವಾಪಸ್ಸು ಬಂದು ಕಾಫೀ ಕುಡಿದು ಪೇಪರ್ ಓದುತ್ತಿದ್ದೆ. ಹೊರಗೆ ಗಲಾಟೆಯಾಗುತ್ತಿತ್ತು. ಏನೆಂದು ನೋಡಲು ಹೋದೆ. ಆ ಹುಚ್ಚಿ ಪ್ರೆಸ್ಸಿನ ಷಟ್ಟರ್ ಪಕ್ಕದಲ್ಲಿ ಕೂತಿದ್ದಳು. ಎದಿರುಗಡೆಯಿಂದ ಟೈಲರ್ ಷಾಪಿನ ಹುಡುಗರು ಚುಡಾಯಿಸುತ್ತಿದ್ದರು. ಅದಕ್ಕೆ ಅವಳು "ಹೌದು ರಾಜಾ ನಾನು ಹುಚ್ಚಿ, ಬಾ ಮುತ್ತು ಕೊಡ್ತೀನಿ." ಅನ್ನುತ್ತಿದ್ದಳು. ಅದಕ್ಕೆ ಆ ಹುಡುಗರು ಮತ್ತಷ್ಟು ರೇಗಿಸುತ್ತಿದ್ದರು. ನನ್ನನ್ನು ನೋಡಿದಾಕ್ಷಣ ಆ ಹುಡುಗರು ಒಳಗೆ ಹೋದರು. ಆ ಹುಚ್ಚಿಯನ್ನು "ಎದ್ದು ಹೋಗಮ್ಮ ಇಲ್ಲಿ ಗಲಾಟೆ ಮಾಡಬೇಡ" ಎಂದೆ.

“ ನೋಡಣ್ಣ ಅವರು ನನ್ನ ಹುಚ್ಚಿ ಅನ್ತಾರೆ ” ಎನ್ನುವಾಗ ಮುಖಮುಚ್ಚಿಕೊಂಡಿದ್ದ ಪುಟ್ಟ ಟವಲ್‌ನ್ನು ಸರಿಸಿ ಮುಸುಮುಸು ನಗುತ್ತಿದ್ದಳು. ಅಷ್ಟರಲ್ಲಿ ನನ್ನ ಹೆಂಡತಿ ಬಂದು “ ಎಷ್ಟು ಚೆನ್ನಾಗಿದ್ದಾಳೆ ಅಲ್ಲವಾ ! ಇನ್ನು ಚಿಕ್ಕ ವಯಸ್ಸು. ರಾತ್ರಿ ಯಾವನೋ ಅವಳು ಅಂಗಡಿಯ ಹತ್ತಿರ ಕೂತಿದ್ದರೆ ಬಲವಂತ ಮಾಡುತ್ತಿದ್ದ. ಅವಳು ಬೇಡಣ್ಣ ಕಾಲಿಗೆ ಬೀಳ್ತೀನಿ ಎಂದು ಕೇಳಿಕೊಳ್ಳುತ್ತಿದ್ದಳು. ಅಷ್ಟರಲ್ಲಿ ಯಾರೋ ಗಂಡಸರು ಆ ಕಡೆ ಬಂದಾಗ ಅವನು ನಾಪತ್ತೆಯಾದ ” ಎಂದು ಒಂದು ಪತ್ತೆದಾರಿ ಕಥೆಯನ್ನೇ ಹೇಳಿದಳು, ನಗುತ್ತ ಸುಮ್ಮನಾದೆ. ಆದರೆ ಆ ಹುಚ್ಚಿ ಮೋಹಕವಾಗಿದ್ದಳು. ಕಪ್ಪು ಸುಂದರಿಯಾಗಿದ್ದಳು, ಅವಳ ಕಣ್ಣಿನಲ್ಲಿ ಕಾಂತಿಯಿತ್ತು.

ಅವಳನ್ನು ಎಬ್ಬಿಸಿ ಕಳಿಸಬೇಕಾದರೆ ನಿಜವಾಗಿಯೂ ಕಷ್ಟವಾಗಿತ್ತು. ಹೋಗುವಾಗ “ ನಾನು ಹುಚ್ಚಿಕಣಣ್ಣ. ನನ್ನ ರಾಜ ಕೂಡ ಹುಚ್ಚಿ ಅನ್ತಿದ್ದ ” ಎಂದು ಮುಸುಮುಸು ನಗುತ್ತ ಮೆಲ್ಲಗೆ ನಡೆದಳು. ನಡೆಯುವಾಗ ಸೆರಗಿನ ಕೊನೆಗೆ ಕಟ್ಟಿಕೊಂಡಿದ್ದ ಒಂದಷ್ಟು ಕಾಸು ಕೆಳಕ್ಕೆ ನೇತಾಡುತ್ತಿತ್ತು, ಮತ್ತೆ ಸ್ವಲ್ಪ ಸಮಯದ ನಂತರ ಒಡಿತುಂಬಾ ಊದುಕಡ್ಡಿಯನ್ನು ಹೊಂಚಿ, ಕಾರ್ಪೋರೇಷನ್‌ನ ನೀರೊತ್ತುವ ಬೋರ್‌ಗೆ ಪೂಜೆ ಮಾಡುತ್ತಿದ್ದಳು, ಅದನ್ನು ನೋಡಿ ನನ್ನ ಹೆಂಡತಿಗೆ ಎಲ್ಲಿಲ್ಲದ ಕರುಣೆ ಬಂದಿರಬೇಕು. ಪಾಪ ! ಸ್ವಲ್ಪ ಅನ್ನವನ್ನಾದರೂ ಕೊಡೋಣ. ಅವಳ ಕಾಲಲ್ಲಿ ನೋಡು ಕಾಲುಂಗುರ ಎಷ್ಟು ಚೆನ್ನಾಗಿದೆ. ” ಎಂದು ಅನ್ನ ತರಲು ಒಳಗೆ ಹೋದಳು. ನಾನು ಹುಚ್ಚಿಯ ಬದುಕಿನ ಬಗ್ಗೆ ಯೋಚಿಸುತ್ತ ಪ್ರೆಸ್ಸಿನೊಳಗೆ ಬಂದೆ. ಮತ್ತೆ ರಾತ್ರಿ ಮನೆಗೆ ಹೋದಾಗ ಇಂದೂ ಸಹ ನಿದ್ದೆ ಕಿತ್ತುಕೊಳ್ಳುವಳು ಎಂಬ ಭಯವಿತ್ತು. ಆ ಭಯ ಸ್ವಲ್ಪ ಮಟ್ಟಿಗೆ ರಾತ್ರಿಯೆಲ್ಲ ಕಾಡುತ್ತಲೇ ಹೋಯಿತು.

ಈಗ ಬೆಳಿಗ್ಗೆದ್ದಾಕ್ಷಣಾ ಆ ಹುಚ್ಚಿಯನ್ನು ಬೀದಿಯಲ್ಲಿ ಹೋಗುವ ನಾನಾ ಜನರಲ್ಲಿ ನನಗೆ ಗೊತ್ತಿಲ್ಲದೆಯೇ ಹುಡುಕುತ್ತೇನೆ. ಅವಳ ಅಳು. ನಗು ಎಲ್ಲವೂ ಮನಸ್ಸಿನ ಸುತ್ತಾ ಸುತ್ತಾಡಿ ಮರೆಯಾಗುತ್ತದೆ. ಮತ್ತೆ ಗರಿಗೆದರಿ ನಾಟಿಗ ಗುದ್ದುತ್ತದೆ. ಈ ಆಕಸ್ಮಿಕ ಘಟನೆಗಳು ಸಹಾ ಹೇಗೆ ಆತ್ಮೀಯವೂ ಹಾಗೂ ಚಿಂತಾದಾಯಕವೂ ಆಗಿರತ್ತದೆ ಅನ್ನಿಸುತ್ತದೆ.

ದಿನಾಂಕ : 9-8-88. — ಶೂದ್ರ ಶ್ರೀನಿವಾಸ್

ಸುದ್ದಿಯ ಗುದ್ದಾಟ

ಮನೋಹರ ಗ್ರಂಥ ಮಾಲೆ : ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಭಿರುಚಿ ನಿರ್ಮಾಣದಲ್ಲಿ ಬಹಳಷ್ಟು ಸಂಸ್ಥೆಗಳು ಕೆಲಸ ಮಾಡಿವೆ. ಕೇವಲ ದುಡ್ಡಿಗಾಗಿ ವ್ಯಾಪಾರಿ ಮನೋಭಾವನೆಯನ್ನು ಬೆಳಸಿಕೊಳ್ಳುತ್ತಿದ್ದ ಸಮಯದಲ್ಲಿ ಉತ್ತಮ ಪುಸ್ತಕಗಳನ್ನು ಪ್ರಕಟಿಸುವುದು **ನಮ್ಮ ಧರ್ಮ** ಎಂದು ತಿಳಿದ ಸಂಸ್ಥೆ ಮನೋಹರ ಗ್ರಂಥ ಮಾಲೆ, ಕಳೆದ ಐವತ್ತೈದು ವರ್ಷಗಳಲ್ಲಿ ಈ ಸಂಸ್ಥೆ ಪ್ರಕಟಿಸಿದ ಉತ್ತಮ ಕೃತಿಗಳು ನೂರಾರು. ಅದೇ ಸಮಯಕ್ಕೆ ಒಂದಷ್ಟು ಗಟ್ಟಿಯಾದ ಲೇಖಕರು ಹೊರಬಂದು ಕನ್ನಡ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದರು, ಇದರ ಪಕ್ತಾರರಾಗಿ ಜಿ. ಬಿ. ಜೋಶಿಯವರ ಶ್ರಮ ಸಾರ್ಥಕವಾದದ್ದು. ಚೀಲದಲ್ಲಿ ಪುಸ್ತಕಗಳನ್ನು ತುಂಬಿಕೊಂಡು ನಾಡಿನಾದ್ಯಂತ ಸುತ್ತಿದವರು. ಈ ದೃಷ್ಟಿಯಿಂದ ಜಿ. ಬಿ. ಯವರು ನಿಜವಾಗಿಯೂ 'ಜಡಭರತ'ರು. ಉತ್ತಮ ನಾಟಕಕಾರರಾಗಿ, ಜಿ. ಬಿ. ಯವರ ವ್ಯಕ್ತಿತ್ವ ಹಿರಿದಾದುದು. ಮನೋಹರ ಗ್ರಂಥ ಮಾಲೆಯ ಮತ್ತೊಂದು ವೈಶಿಷ್ಟ್ಯವೆಂದರೆ ತಾವು ಪ್ರಕಟಿಸಿದ ಯಾವುದೇ ಕೃತಿಯನ್ನು ಎರಡನೆಯ ಮುದ್ರಣವಾಗಿ ಹೊರತರದಿರುವುದು. ಇದು ಒಂದು ದೃಷ್ಟಿಯಿಂದ ಒಬ್ಬ ಲೇಖಕನಿಗೆ ತೊಂದರೆಯಾದರೂ ; ಮತ್ತೊಂದು ದೃಷ್ಟಿಯಿಂದ ಅರ್ಥಪೂರ್ಣವಾದದ್ದು. ಯಾಕೆಂದರೆ ಹೊಸ ಹೊಸ ಲೇಖಕರು ಹೊರಬರಲು ಸಾಧ್ಯವಾಗುವುದು.

ಈಗ ಐವತ್ತೈದನೆಯ ವರ್ಷದ ನೆನಪಿಗಾಗಿ ಇದೇ ತಿಂಗಳು 13, 14, 15ರಂದು ಕರ್ನಾಟಕದ ಮನೋಹರ ಗ್ರಂಥ ಮಾಲೆಯು ಅಭಿಮಾನಿಗಳನ್ನು ಕಲೆಹಾಕಿ ವಿಚಾರ ವಿನಿಮಯಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅಪೂರ್ವವಾದ ಈ ಕಾರ್ಯಕ್ರಮವನ್ನು ಬಹಳಷ್ಟು ಮಂದಿ ಸದುಪಯೋಗಪಡಿಸಿಕೊಳ್ಳಲು ಸಾಧ್ಯ. ಇಂಥ ಸಂದರ್ಭದಲ್ಲಿ 'ಶೂದ್ರ' ಕನ್ನಡ ಸಾಹಿತ್ಯ ಸಂದರ್ಭದ 'ಭೀಷ್ಮ' ರಾದ ಜಿ. ಬಿ. ಯವರಿಗೆ ಮತ್ತು ಮನೋಹರ ಗ್ರಂಥ ಮಾಲೆಗೆ ಶುಭವನ್ನು ಹಾರೈಸುತ್ತದೆ.

ಕಿ. ರಂ. ನಾಗರಾಜ್

ಶೂದ್ರಕ್ಕೆ ಮುಂದಿನ ತಿಂಗಳ 22ಕ್ಕೆ 15 ವರ್ಷ ತುಂಬಿ 16ನೇ ವರ್ಷಕ್ಕೆ ಕಾಲಿಡುತ್ತದೆ. ಈ ಹದಿನೈದು ವರ್ಷಗಳಲ್ಲಿ ಶೂದ್ರದ ಬೆಳವಣಿಗೆಯ ಬಗ್ಗೆ ನೂರಾರು ಜನ ಸಹಕರಿಸಿದ್ದಾರೆ. ಅಂಥ ನೂರಾರು ಜನರಲ್ಲಿ ಕಿ. ರಂ. ರವರನ್ನು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುತ್ತೇನೆ. ಯಾಕೆಂದರೆ ಇವರು ತಮ್ಮ ವೈವಿಧ್ಯಮಯವಾದ ವ್ಯಕ್ತಿತ್ವದಿಂದ ಶೂದ್ರಕ್ಕೆ ಮತ್ತು ಶೂದ್ರನಿಗೆ ನಾನಾ ಕಾರಣಗಳಿಂದ ಸಹಕಾರಿಯಾಗಿದ್ದಾರೆ. ಸಾಹಿತ್ಯ, ವಿಜ್ಞಾನ. ರಾಜಕೀಯ ಮತ್ತು ಇತರೆ ಜೀವಂತ ಸಂಬಂಧಗಳ ಜೊತೆ ಸದಾ ಸ್ಪಂದಿಸುವವರು. ತಮ್ಮ ಒಡನಾಡಿಗಳಲ್ಲಿ ಉತ್ಸಾಹವನ್ನು ತುಂಬತಕ್ಕಂತವರು, ಇತ್ತೀಚೆಗೆ ಕಿ. ರಂ. ತಮಾಷೆಗೆ "ಶೂದ್ರದಲ್ಲಿ ಎಷ್ಟೋಂದು ಮಂದಿ ಉಪಸಂಪಾದಕರು ಬಂದು ಹೋದರು; ಒಮ್ಮೆಯಾದರೂ ನನ್ನನ್ನು ಉಪಸಂಪಾದಕನನ್ನಾಗಿ ನೇಮಿಸಿಕೊಳ್ಳಲಿಲ್ಲ." ಎಂದರು. ನಾನು ನಗುತ್ತ ಮುಂದಿನ ಸಂಚಿಕೆಯಲ್ಲಿಯೇ ನಿಮ್ಮ ಹೆಸರನ್ನು ಪ್ರಸ್ತಾಪಿಸುವೆ." ಎಂದೆ. "ನಿನ್ನ ಹತ್ತಿರ ಮಾತಾಡುವುದಿಲ್ಲ" ಎಂದರು ಗೆಳೆಯರ ಮುಂದೆ. ಅದೇನೇ ಇರಲಿ ಕನ್ನಡ ಸಾಹಿತ್ಯಾಸಕ್ತರಿಗೆ ಕಿ. ರಂ. ಪರಿಚಯವಾಗದಿದ್ದರೆ ಅತ್ಯಂತ ನಷ್ಟ ಎಂದು ತಿಳಿದು ಈ ಪುಟ್ಟ ಟಿಪ್ಪಣಿಯನ್ನು ಶೂದ್ರದ ಹದಿನೈದನೇ ವರ್ಷದ ನೆನಪಿಗೆ ಬರೆಯುತ್ತಿದ್ದೇನೆ. ಇವರಿಂದ ಕಿ. ರಂ. ಹುಡುಗಿಯಂತೆ ನಾಚಿಕೊಂಡು ಒಂದೆರಡು ದಿನ ಮಾತಾಡದಿರಬಹುದು. ಮತ್ತೆ ಮಾಮೂಲಿ ಕಿ. ರಂ. ಎಲ್ಲಿಗೂ ಹೋಗುವುದಿಲ್ಲ.

ಸೆಪ್ಟಂಬರ್ 10 ಮತ್ತು 11 ರಂದು ಅಥವಾ 17 ಮತ್ತು 18ರಂದು ಶೂದ್ರದ 15ನೇ ವರ್ಷದ ನೆನಪಿಗೆ ವಿಚಾರ ಸಂಕಿರಣವನ್ನು ಏರ್ಪಡಿಸಿದೆ. ವಿಷಯ : ಕನ್ನಡ ಸಾಹಿತ್ಯ ಸಂದರ್ಭ ಮತ್ತು ಜನಪರ ಚಳವಳಿಗಳು. ಸಾಧ್ಯವಾದರೆ ಪಕ್ಕದ ಸೋದರ ಭಾಷೆಯ ಪ್ರಮುಖ ಲೇಖಕರೊಬ್ಬರನ್ನು ಕರೆಸುವ ಉದ್ದೇಶವಿದೆ. ಮುಂದೆ ದಿನಾಂಕ ಮತ್ತು ಸ್ಥಳವನ್ನು ತಿಳಿಸಲಾಗುವುದು. ದಯವಿಟ್ಟು ಬಂದು ಭಾಗವಹಿಸಿ.

●

ಜಿ. ಪಿ, ಬಸವರಾಜ್, ಹೆಚ್. ಎಸ್. ಶಿವಪ್ರಕಾಶ್, ಸವಿತಾ-ನಾಗಭೂಷಣ, ಎಂ. ಚಂದ್ರಶೇಖರಯ್ಯ, ಸ್ವಾಮಿನಾಥ ಮತ್ತು ಹಾ. ಮ. ಕನಕರವರ ಕವನಗಳನ್ನು ಸ್ಥಳದ ಅಭಾವದಿಂದ ಹಾಗೂ ಕಣವಿಯವರ ಸಂದರ್ಶನದ ಲೇಖನವನ್ನು ಪ್ರಕಟಿಸಿದ್ದರಿಂದ ಪ್ರಕಟಿಸಲಾಗಲಿಲ್ಲ. ಇದಕ್ಕಾಗಿ ವಿಷಾದಿಸುತ್ತೇವೆ. ಇವನ್ನು ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸಂ.

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ

ನಂ. 1, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018.

(ಷೆಡ್ಯೂಲ್ಡ್ ಸಹಕಾರಿ ಬ್ಯಾಂಕ್)

ಅಪೆಕ್ಸ್ ಬ್ಯಾಂಕ್

ಟೆಲೆಕ್ಸ್ : 845-2074 ಅಪೆಕ್ಸ್ ಇನ್ ದೂರವಾಣಿ : 602374, 602374
602424, 606782

ಪ್ರಮುಖ ಲಕ್ಷಣಗಳು

(ರೂ. ಲಕ್ಷಗಳಲ್ಲಿ)

ಠೇವಣಿಗಳು	19620.41
ಪಡೆದ ಸಾಲಗಳು	7114.02
ಸಾಲಗಳು ಮತ್ತು ಮುಂಗಡಗಳು	21724.26
ದುಡಿಯುವ ಬಂಡವಾಳ	31362.45

ಠೇವಣಾತಿಗಳ ಮೇಲೆ ನಾವು ಇತರ ಬ್ಯಾಂಕುಗಳಿಗಿಂತ ಹೆಚ್ಚಿನ ಬಡ್ಡಿದರ ನೀಡುತ್ತೇವೆ
ಅವಧಿ ಠೇವಣಾತಿಗಳ ಮೇಲೆ ಶೇಕಡ ಮೂರುಕಾಲು ರಿಂದ ಶೇಕಡ ಹತ್ತುಕಾಲರ
ತನಕ ಉಳಿತಾಯ ಖಾತೆ ಠೇವಣಾತಿಗಳ ಮೇಲೆ ಶೇಕಡ ಐದುಕಾಲು

ತಮಗಾಗಿ ಅನೇಕ ಆಕರ್ಷಕ ಉಳಿತಾಯ ಯೋಜನೆಗಳು ನಮ್ಮಲ್ಲಿವೆ

ನಮ್ಮ 31 ಶಾಖೆಗಳಲ್ಲಿ ಯಾವುದಾದರೊಂದನ್ನು ಸಂಪರ್ಕಿಸಿ

ಜಿ.ಎಸ್. ಹೆಗಡೆ ಅಜ್ಜೀಬಳ
ಅಧ್ಯಕ್ಷರು

ಎಂ.ಎನ್ ನಾಗಭೂಷಣ್
ಉಪಾಧ್ಯಕ್ಷರು

ಕೆ. ಜೈರಾಜ್ ಐ.ಎ.ಎಸ್
ವ್ಯವಸ್ಥಾಪಕ ನಿರ್ದೇಶಕರು

ರಸ್ತೆ ಸುರಕ್ಷತೆ

ಇದು

ಶಾಲೆಯಲ್ಲಿ ಪ್ರಾರಂಭವಾಗುತ್ತದೆ

ಅವರು ಚಿಕ್ಕವರಿದ್ದಾಗಲೇ ಕಲಿಸಿರಿ. ರಸ್ತೆ ಸುರಕ್ಷತಾ ಸಪ್ತಾಹದ ಅವಧಿಯಲ್ಲಿ ಪ್ರತಿದಿನ ಪ್ರಾರ್ಥನೆಯನಂತರ ಎಲ್ಲಾ ಶಾಲಾ ಶಿಕ್ಷಕರು ಮಕ್ಕಳಿಂದ ರಸ್ತೆ ಸುರಕ್ಷತೆ ನಿಯಮಗಳನ್ನು ಪಾಲಿಸುವಂತೆ ಪ್ರತಿಜ್ಞೆ : ಮಾಡಿಸಿರಿ.

ಪ್ರತಿಜ್ಞೆ :

- ನಾನು ರಸ್ತೆಯನ್ನು ನಿಗದಿಪಡಿಸಿದ ಸುರಕ್ಷಿತ ಸ್ಥಳದಲ್ಲೇ ದಾಟುತ್ತೇನೆ.
- ನಾನು ರಸ್ತೆ ಪಕ್ಕದ ಕಾಲುದಾರಿಯ ತುದಿಯಲ್ಲೇ ನಿಲ್ಲುತ್ತೇನೆ.
- ನಾನು ವಾಹನಗಳು ಬರುತ್ತಿವೆಯೇ ಎಂದು ಗಮನಿಸಿ, ಕೇಳಿಸಿಕೊಳ್ಳುತ್ತೇನೆ.
- ನಾನು ವಾಹನಗಳು ಬರುತ್ತಿದ್ದರೆ ಅವುಗಳನ್ನು ಹೋಗಲು ಬಿಡುತ್ತೇನೆ.
- ನಾನು ವಾಹನಗಳು ಬರುತ್ತಿವೆಯೇ ಎಂದು ಸುತ್ತಲೂ ಗಮನಿಸಿ, ರಸ್ತೆಯನ್ನು ನೇರವಾಗಿ ದಾಟುತ್ತೇನೆ.
- ನಾನು ವಾಹನಗಳು ಬರುತ್ತಿರುವುದನ್ನು ನೋಡುತ್ತಾ, ಕೇಳಿಸಿಕೊಳ್ಳುತ್ತಾ ಗಮನವಿಟ್ಟು ರಸ್ತೆಯನ್ನು ದಾಟುತ್ತೇನೆ,

ಕರ್ನಾಟಕ ವಾರ್ತೆ

ಮೀನುಗಾರರಿಗೆ ಸಾಮೂಹಿಕ ವಿಮಾ ಯೋಜನೆಯ

ಪ್ರೀಮಿಯಂ ವಿನಾಯಿತಿ

ಕಡಲಾಳದಿಂದ ಮತ್ಸ್ಯ ಸಂಪತ್ತನ್ನು ಆರಿಸಿ ತರುವ ಮೀನುಗಾರರಿಗೆ
ಕರ್ನಾಟಕ ಸರ್ಕಾರದ ಸಹಾಯ ಹಸ್ತ.

ಕಡಲ ಮೀನುಗಾರಿಕೆಯಲ್ಲಿ ಅದರದ್ದೇ ಆದ ಸವಾಲು ಇದೆ. ಕಡಲ ಒಡಲು ವಿಪುಲ ಮೀನುಗಾರಿಕಾ ಸಂಪತ್ತಿನಿಂದ ಕೂಡಿದ್ದರೂ ಸಮುದ್ರವು ಪ್ರಕ್ಷುಬ್ದವಾದಾಗ ದೋಣಿ, ಬಲೆ ಹಾಗೂ ಮೀನುಗಾರರ ಅಮೂಲ್ಯ ಜೀವವನ್ನು ಬಲಿ ತೆಗೆದುಕೊಳ್ಳುವುದು. ರಾತ್ರಿ ಹಗಲೆನ್ನದೆ ಪ್ರಕೃತಿಯ ಶಕ್ತಿಗಳನ್ನೆದುರಿಸಿ ಸಮುದ್ರದಾಚೆಗೆ ಪಯಣಿಸಿ ಮೀನುಗಾರಿಕೆಯಲ್ಲಿ ತೊಡುಗುವ ಮೀನುಗಾರರ ಬಗ್ಗೆ ಕರ್ನಾಟಕ ಸರ್ಕಾರ ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತಿದೆ. 1983–84 ರಿಂದ ಜಾರಿಗೆ ತರಲಾಗಿರುವ ಒಳನಾಡು ಹಾಗೂ ಕರಾವಳಿ ಮೀನುಗಾರರ ವಿಮಾ ಯೋಜನೆಯಲ್ಲಿ ಮೀನುಗಾರರನ್ನು ಅವರ ಕಷ್ಟ ನಷ್ಟಗಳಿಂದ ಮುಕ್ತಗೊಳಿಸುತ್ತಿದೆ.

1987–88ರಲ್ಲಿ 60,000 ಮೀನುಗಾರರು ಈ ಯೋಜನೆಯ ವ್ಯಾಪ್ತಿಗೊಳಪಟ್ಟಿದ್ದು. ಅದಕ್ಕೆ ತುಂಬಲಾದ ಪ್ರೀಮಿಯಂ ಹಣ ರೂ. 5.40 ಲಕ್ಷ ಅಗಿರುತ್ತದೆ. ಕೇಂದ್ರ ಸರಕಾರ ಮತ್ತು ಕರ್ನಾಟಕ ರಾಜ್ಯ ಸರಕಾರದ ಸಹಭಾಗಿತ್ವದಲ್ಲಿ ವಿಮಾ ಕಂಪನಿಗೆ ಮೀನುಗಾರರ ಪರವಾಗಿ ಪ್ರತಿ ವರ್ಷ ತಲಾ ರೂ. 9, ರಂತೆ ಪ್ರೀಮಿಯಂ ಹಣ ತುಂಬಲಾಗುತ್ತಿದೆ.

ಈ ಸಾಮೂಹಿಕ ವಿಮಾ ಯೋಜನೆಯಲ್ಲಿ ಆಕಸ್ಮಿಕ ಅಪಘಾತಕ್ಕೀಡಾಗಿ ಪೂರ್ಣ ಅಂಗವಿಕಲರಾದ ಮೀನುಗಾರರಿಗೆ ಅಥವಾ ಮೃತರಾದ ಮೀನುಗಾರರ ಅವಲಂಬಿಗಳಿಗೆ ರೂ. 15,000 ; ವಿಮಾ ಹಣವನ್ನು ನೀಡಲಾಗುವುದು. ಅಪೂರ್ಣ ಅಂಗವಿಕಲರಾದ ಮೀನುಗಾರರಿಗೆ ರೂ. 7,500 ; ವಿಮಾ ಹಣ ನೀಡಲಾಗುವುದು.

ಇದೀಗ ಮೀನುಗಾರರು ನಿಶ್ಚಿಂತರಾಗಿ ಮೀನು ಹಿಡಿಯಲು ಹೋಗಬಹುದು. ಆಕಸ್ಮಿಕವಾಗಿ ಏನಾದರೂ ಅನಾಹುತ್ತದಲ್ಲಿ ಅವರ ಕುಟುಂಬಗಳು ದಾರಿಪಾಲಾಗಬೇಕಾಗಿಲ್ಲ. ಮೀನುಗಾರರ ಕಷ್ಟಕಾಲದಲ್ಲಿ ಈ ವಿಮಾ ಹಣ ಅವರಿಗೆ ಸಹಾಯ ನೀಡಿ ಅವರ ಜೀವನ ಭದ್ರತೆ ಒದಗಿಸುವುದು.

ಒಳನಾಡು ಹಾಗೂ ಕರಾವಳಿ ಮೀನುಗಾರಿಕಾ ಸಹಕಾರಿ ಸಂಘಗಳ ಸದಸ್ಯರಾಗಿರುವ ಎಲ್ಲಾ ಮೀನುಗಾರರು ಈ ಸಾಮೂಹಿಕ ವಿಮಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆಯಲು ಅರ್ಹರು. ಹೆಚ್ಚಿನ ಮಾಹಿತಿಯನ್ನು ಸಮೀಪದ ಮೀನುಗಾರಿಕಾ ಅಧಿಕಾರಿಗಳಿಂದ ಪಡೆಯಬಹುದು.

''ಕರ್ನಾಟಕ ವಾ[illegible]''

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-560 002

ಕನ್ನಡಿಗರಾದ ನಮಗೆ ನಮ್ಮ ಭಾರತೀಯ ಪರಿಸರದ ಸೋದರ ಭಾಷೆಗಳಲ್ಲಿ ಯಾವ ಸೃಜನಾತ್ಮಕ ಕಾರ್ಯಗಳು ನಡೆಯುತ್ತಿವೆ ಎಂಬುದು ಗೊತ್ತೇ ಇಲ್ಲ!

ಹಾಗೆ ಗೊತ್ತಾಗುವುದು ನಿಜವಾಗಿಯೂ ಅಗತ್ಯವೆಂದು ನಿಮಗೆ ಅನ್ನಿಸುವುದಿಲ್ಲವೆ?

ಹಾಗಾದರೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿರುವ

"ಅನಿಕೇತನ"

ತ್ರೈಮಾಸಿಕ ಪತ್ರಿಕೆಗೆ ಚಂದಾದಾರರಾಗಿರಿ. ವಾರ್ಷಿಕ ಚಂದಾ ಕೇವಲ ಹತ್ತು ರೂಪಾಯಿಗಳು. ಆಜೀವ ಚಂದಾ ನೂರು ರೂಪಾಯಿಗಳು.

ಇದರ ಜತೆಗೆ ಕನ್ನಡ ಸಾಹಿತ್ಯದ ಸಾಧನೆಗಳನ್ನು ಕನ್ನಡೇತರ ಭಾಷಾ ಸಾಹಿತ್ಯ ಪರಿಸರದವರಿಗೆ ಪರಿಚಯ ಮಾಡಿಕೊಡುವ "ಅನಿಕೇತನ" ತ್ರೈಮಾಸಿಕ ವೊಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗುತ್ತಿದೆ. ಈ ಪತ್ರಿಕೆಗೂ ವಾರ್ಷಿಕ ಚಂದಾ 10 ರೂಪಾಯಿಗಳು, ಆಜೀವ ಚಂದಾ 100 ರೂಪಾಯಿಗಳು.

: : ದಯವಿಟ್ಟು ಚಂದಾದಾರರಾಗಿರಿ : :

ದಯಮಾಡಿ ಚಂದಾ ಹಣವನ್ನು ನಗದು, ಮನಿಆರ್ಡರ್, ಡ್ರಾಫ್ಟ್ ಮೂಲಕ ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, 14 : 3 ಅ, ರಾಷ್ಟ್ರೋತ್ಥಾನ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-560 002 ಇವರಿಗೆ ಕಳುಹಿಸಿಕೊಡಿ.

FNP/KRNU/72 No. M (2) PRB 211/73/74

SHOODRA Kannada Monthly

ಸೆಪ್ಟಂಬರ್ 1988ರ ಸಂಚಿಕೆಯಲ್ಲಿ :

ಕಪ್ಪು ಜನರ ಹೋರಾಟ ಮತ್ತು ನಮ್ಮ ಸಾಹಿತ್ಯ ಸಂದರ್ಭ

ಡಿ. ಆರ್. ನಾಗರಾಜ್–ಕಿ.ರಂ. ನಾಗರಾಜ್–ಕೆ. ವಿ. ನಾರಾಯಣ–ಕೆ. ಸತ್ಯನಾರಾಯಣ ಸಿದ್ದಲಿಂಗಯ್ಯ – ಬರಗೂರು ರಾಮಚಂದ್ರಪ್ಪ – ಟಿ. ಎನ್. ಸೀತಾರಾಂ – ಜಿ. ಎಸ್. ಶಿವರುದ್ರಪ್ಪ – ಹೆಚ್. ಎಸ್. ಶಿವಪ್ರಕಾಶ್ – ದೇವನೂರುಮಹದೇವ – ಚ. ಸರ್ವಮಂಗಳ – ರಮಜಾನದರ್ಗಾ – ಬಾಬುಮ್ಯಾಥ್ಯು.

Mr. Srinivas, Editor for Shudra, Printed at :
Pallavi Printers, No. 1, 3rd Cross, Balaji Nagar,
Suddhagunte Palya, D. R. Collage Post, Bangalore-29.